## ಅಧ್ಯಾಯ - 9

# ಆಡಳಿತ ಮತ್ತು ರಾಜಸ್ವ

ಜಿಲ್ಲಾಧಿಕಾರಿ (ಡೆ|| ಕಮಿಶನರ್) ಯಿಂದ ಗ್ರಾಮಲೆಕ್ಕಿಗನವರೆಗಿನ ಶ್ರೇಣೀಕೃತ ಆಡಳಿತ ವ್ಯವಸ್ಥೆ ಈಗ ಇದೆಯಾಧರೂ ಇದು ಒಮ್ಮೆಗ್ರೇ ಸೃಷ್ಟಿಯಾದುದಲ್ಲ, ಹಲವು ಶತಮಾನಗಳ ಅನುಭವ ಮತ್ತು ವಿಕಸನಗಳಿಂದ ರೂಪು ತಾಳಿದ್ದು. ಈಗಿರುವ ಗ್ರಾಮಲೆಕ್ಕಿಗ ಎರಡು ದಶಕಗಳ ಹಿಂದೆ ಮತ್ತು ಅದಕ್ಕೂ ಮೊದಲಿನಿಂದ ಜಿಲ್ಲೆಯಲ್ಲಿ ಇದ್ದ ಕುಲಕರ್ಣಿ ಎಂಬ ಹೆಸರಿನ ಶಾನುಭೋಗ (ಸೇನಭೋವ)ನ ಬದಲಿಗೆ ಬಂದವನಾಗಿದ್ದು ಪ್ರಾಚೀನ ಕಾಲದಿಂದಲೂ ರಾಜಾದಾಯದ ಭಾಗವಾಗಿದ್ದ (ಹಿಂದೆ ಗಣ್ಯ ಭಾಗವಾಗಿದ್ದ) ಕಂದಾಯದ ಸಂಗ್ರಾಹಕ ಮತ್ತು ಅವುಗಳ ಕಡತಗಳ ರಕ್ಷಕನಾಗಿದ್ದಾನೆ. ಗ್ರಾಮಲೆಕ್ಕಿಗನಿಗೆ ಸಹಾಯಕನಾಗಿ ಈಗ ಗ್ರಾಮ ಸಹಾಯಕನಿದ್ದರೆ ಆಗ ತೋಟಿ, ತಳವಾರ, ಶೇತ್‌ಸನದಿ, ಓಲೆಕಾರ ಹಾಗೂ ಹಳಬ ಮುಂತಾದ ವಿವಿಧ ಕರ್ತವ್ಯಗಳ ಸಹಾಯಕರಿದ್ದರು. ತಳವಾರನು ಆಯುಧಧಾರಿಯಾಗಿ ಗ್ರಾಮದ ಪಾಟೀಲನ (ಪಟೇಲನ) ಅಧೀನನಾಗಿದ್ದರೆ, ಈಗ ಶಾಂತಿಪಾಲನೆಗೆ ಪೋಲೀಸು ಪಡೆಯಿದೆ. ಪಾಟೀಲನ ಕೆಲವು ಕರ್ತವ್ಯಗಳು ಗ್ರಾಮಲೆಕ್ಕಿಗನಿಗೆ, ಕೆಲವು ಗ್ರಾಮ ಪಂಚಾಯತಿಗಳಿಗೆ, ಕೆಲವು ನ್ಯಾಯಾಲಯಗಳಿಗೆ, ಕೆಲವು ಪೋಲೀಸು ವ್ಯಾಪ್ತಿಗೆ (ಗೃಹ ಇಲಾಖೆಗೆ) ವರ್ಗಾಯಿಸಲ್ಪಟ್ಟಿವೆ. ಹಿಂದೆ ಇದ್ದ ಗ್ರಾಮಸಭೆ (ಊರು, 'ಊರಸಮಸ್ತರು', 'ಊರ ಹದಿನೆಂಟು ಜಾತಿ', 'ಊರ ಐವತ್ತೊಕ್ಕಲು' ಇತ್ಯಾದಿ) ಈಗ ಗ್ರಾಮಪಂಚಾಯತಿಯಾಗಿ ರೂಪಾಂತರವಾಗಿದೆ. ನ್ಯಾಯ ತೀರ್ಮಾನದ ಅಧಿಕಾರ ಶಾಸನಬದ್ಧವಾಗಿ ಈಗ ತಾಲೂಕಿನಲ್ಲಿರುವ ತಹಶಿಲ್ದಾರ ಇಲ್ಲವೆ ಮ್ಯಾಜಿಸ್ಟ್ರೇಟ್ (ದಂಡಾಧಿಕಾರಿಗೆ)ಗೆ ಸಂದು ಗ್ರಾಮ ಸಭೆಯ ಈ ಅಧಿಕಾರ ಪ್ರಸಕ್ತ ಮೊಟಕಾಗಿದೆ. ಇಂದಿನ ಹೋಬಳಿಗಳು ಹಿಂದಿನ ದೇಶ ಇಲ್ಲವೇ ನಾಡಿನ ರೂಪ. ಆದರೆ ಅಂದಿನ ದೇಸಾಯಿ ಅಥವಾ ನಾಡಗೌಡನಿಗಿದ್ದ ಅಧಿಕಾರ ಈ ಹೋಬಳಿ ಮಟ್ಟದಲ್ಲಿರುವ ಶೇಕ್‌ದಾರನಿಗೆ ಇಲ್ಲ, ಕಂದಾಯ ಸಂಗ್ರಹಣೆಯ ಉಸ್ತುವಾರಿಯ ವಿನಾ, ಹಿಂದೆ ದೇಸಾಯಿ ಅಥವಾ ನಾಡಗೌಡರಿಗಿದ್ದ ಸೈನಿಕ, ಶಾಂತಿಪಾಲನೆ ಅಥವಾ ನ್ಯಾಯ ತೀರ್ಮಾನದ ಹಕ್ಕು ಅವನಿಗಿಲ್ಲ. ಹಿಂದೆ ಇದ್ದ ದೇಶಪಾಂಡೆ ಅಥವಾ ಹೋಬಳಿಯ ಶಾನುಭಾಗನ ಸ್ಥಾನಮಾನ ಅವರದು. ಪಾಂಡೆ ಎಂಬ ಹೆಸರನ್ನು ಮುಸಲ್ಮಾನರು ಉತ್ತರದಿಂದ ತಂದರು. ಮರಾಠರು ಅದನ್ನು ಸ್ವೀಕರಿಸಿದರು. ಈಗ ಸ್ಥಳೀಯ ಯುದ್ಧಗಳು ಇಲ್ಲದ್ದರಿಂದ ಹಿಂದಿನಂತೆ ಈಗ ಸೈನಿಕಾಧಿಕಾರದ ಅವಶ್ಯಕತೆ ಇಲ್ಲ. ಶಾಂತಿಪಾಲನೆಗೆ ಪೋಲೀಸ್ ಪಡೆ ಇದೆ.

ಜಿಲ್ಲಾಧಿಕಾರಿಯು ಹಿಂದಿನ ರಾಷ್ಟ್ರ ಇಲ್ಲವೆ ರಾಜ್ಯ ಎಂಬ ಘಟಕಕ್ಕೆ ಸಮಾನವಾದ ಅಧಿಕಾರ ಹೊಂದಿದ್ದಾನೆ. ಜಿಲ್ಲಾಧಿಕಾರಿಯು ಜಿಲ್ಲಾ ದಂಡಾಧಿಕಾರಿಯಾಗಿದ್ದರೂ ಶಾಂತಿಸುವ್ಯವಸ್ಥೆಗೆ ಆತಂಕವಾದಾಗಲಷ್ಟೇ ಆತನು ಪೋಲೀಸ್ ಬಲದ ಮಾರ್ಗದರ್ಶಕನಾಗುತ್ತಾನೆ. ಹಿಂದಿನ ರಾಷ್ಟ್ರಪತಿ ಅಥವ ದಂಡನಾಯಕನಂತೆ ಅವನು ಸೇನಾನಿಯೂ ಅಲ್ಲ, ಯುದ್ಧರಂಗದಲ್ಲಿ ಹೋರಾಡತಕ್ಕವನೂ ಅಲ್ಲ. ಆದರೆ ಇಂದಿನ ಆಡಳಿತ ಯಂತ್ರ ಪ್ರಾಚೀನ ರಾಜರ ಕಾಲದಲ್ಲಿ ಬೆಳೆದು ಬಂದ ವ್ಯವಸ್ಥೆ, ಮುಂದೆ ಇಲ್ಲಿನ ವ್ಯವಸ್ಥೆಗಳಿಗನುಗುಣವಾಗಿ, ಮುಸಲ್ಮಾನರಾದ ವಿಜಾಪುರದ ಅರಸರು ಮತ್ತು ಮುಘಲರೂ ಮುಂದೆ ಮರಾಠರು ಮಾಡಿದ್ದ ಬದಲಾವಣೆ, ನಂತರ ಬ್ರಿಟಿಷರು

ತಾವು ರಾಜ್ಯವಾಳಲು ಆರಂಭಿಸಿದಾಗ, ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಸೃಜಿಸಿದ ಹೊಸ ವ್ಯವಸ್ಥೆ, ಇವುಗಳೆಲ್ಲದರ ಹಿನ್ನಲೆಯಲ್ಲಿ ರೂಪುತಾಳಿದ್ದಾಗಿದೆ. ಬ್ರಿಟಿಷರು ನೇಮಿಸಿದ ಜಿಲ್ಲಾಧಿಕಾರಿ ಮೊದಲು ಸೇನಾಧಿಕಾರಿಯಾಗಿಯೂ ಇದ್ದ. ಮನ್ರೊ, ಥ್ಯಾಕರೆ, ಬ್ಯಾಷ್ಲಿನ್ ಇವರೆಲ್ಲ ಮುಖ್ಯವಾಗಿ ಸೇನಾಧಿಕಾರಿಗಳು, ಮತ್ತು ಮುಂದೆ ಆಡಳಿತ ಯಂತ್ರದ ಭಾಗವಾದವರು. ಭಾರತದಲ್ಲಿ ಇದ್ದ ವ್ಯವಸ್ಥೆಗೂ ಅವರು ರೂಪಿಸಿದ ವ್ಯವಸ್ಥೆಗೂ ಆರಂಭದಲ್ಲಿ ಹೆಚ್ಚಿನ ವ್ಯತ್ಯಾಸ ಏನೂ ಇರಲಿಲ್ಲ. ಜಿಲ್ಲೆಯ ಕಲೆಕ್ಟರನ ಕೈಕೆಳಗಿದ್ದ ಮಾಮಲತ್‌ದಾರ್ ಮುಂದೆ ತಹಶೀಲ್ದಾರನಾದ. ಅಂದಿನ ಕಲೆಕ್ಟರನೇ ಈಗಿನ ಡೆಪ್ಯುಟಿ ಕಮಿಶನರ್.

ಸೇನಾಧಿಕಾರಕ್ಕೆ ಸ್ಥಳೀಯವಾಗಿ ಕಾಲಕ್ರಮದಲ್ಲಿ 19ನೇಯ ಶತಮಾನದ ಹಿಂದೆ ಇದ್ದಷ್ಟು ಮಹತ್ವ ಉಳಿಯಲಿಲ್ಲ. ಸೇನೆಗೆ ಇಡೀ ದೇಶದಲ್ಲಿ ಒಂದು ಪ್ರತ್ಯೇಕ ವ್ಯವಸ್ಥೆಯಾಯಿತು. ಜಿಲ್ಲಾಧಿಕಾರಿ ಅಥವಾ ಮಾಮಲತ್‌ದಾರ ಅಥವಾ ಪಟೇಲ (ಪಾಟೀಲ) ಯುದ್ಧಕ್ಕೆ ಹೋಗಬೇಕಾದ ಪ್ರಸಂಗ ಕಳೆದ ಶತಮಾನದ ಕೊನೆಗೇ ಅಂತ್ಯವಾಗಿತ್ತು. ಶಾಂತಿಪಾಲನೆಗೆ ಪ್ರತ್ಯೇಕ ಪೋಲೀಸು ಇಲಾಖೆ ಬಂತು. ಆರಂಭದಲ್ಲಿ ತೋಟಿ, ತಳವಾರ (ಮೈಸೂರಿನ ಕಂದಾಚಾರ)ರಿಂದಲೇ ಪೋಲೀಸರ ಭರ್ತಿ ಮಾಡಿದ್ದರು.

ಪಾಶ್ಚಾತ್ಯ ಉದಾರವಾದಕ್ಕನುಗುಣವಾಗಿ ಆಡಳಿತಾಧಿಕಾರಿಯಿಂದ ನ್ಯಾಯದಾನದ ಅಧಿಕಾರ ಪ್ರತ್ಯೇಕಿಸಲ್ಪಟ್ಟು ಪ್ರತ್ಯೇಕ ನ್ಯಾಯಾಂಗ ರೂಪು ತಾಳಿತು. ಸ್ವಾತಂತ್ರ್ಯಾನಂತರದ ಕಲ್ಯಾಣ ರಾಜ್ಯದ ಕಲ್ಪನೆಯಂತೆ ಜಿಲ್ಲಾಧಿಕಾರಿಯ ಸಮಾಜ ಕಲ್ಯಾಣದ ಜವಾಬ್ದಾರಿಗಳು ಹೆಚ್ಚಿದವು. ಮುಂದೆ ಅದಕ್ಕಾಗಿ ಒಬ್ಬ ಅಪರ ಜಿಲ್ಲಾಧಿಕಾರಿ, ಇತ್ತೀಚೆಗೆ ಜಿಲ್ಲಾ ಪಂಚಾಯತ್‌ನ ನಿರ್ವಹಣಾಧಿಕಾರಿಯ ಪ್ರತ್ಯೇಕ ಹುದ್ದೆ ಸೃಷ್ಟಿಯಾದವು. ಹಿಂದೆ ದಂಡನಾಯಕನಾಗಿದ್ದ ಜಿಲ್ಲಾಧಿಕಾರಿ ಈಗ ದಂಡನ್ನೂ (ಸೇನೆ) ದಂಡವನ್ನೂ ದೂರವಿಟ್ಟು ಆಡಳಿತ ನಿರ್ವಹಣೆಯ ಜವಾಬ್ದಾರಿಯನ್ನು ಲೇಖನಿಯಿಂದ ನಿರ್ವಹಿಸುತ್ತಾನೆ. ಪ್ರಾಚೀನ ದಂಡಾಧಿಕಾರಿಗಳು ಕುದುರೆಯ ಮೇಲೋ ಪಲ್ಲಕ್ಕಿಯ ಮೇಲೋ ಸಾಗುತ್ತಿದ್ದರೆ ಈಗ ಮೋಟಾರು ವಾಹನಗಳಿವೆ. ಆದರೆ ಬ್ರಿಟಿಷರ ಆಡಳಿತದಲ್ಲಿ ಈ ಶತಮಾನದ ಆರಂಭದವರೆಗೂ ಐ.ಸಿ.ಎಸ್. ಅಧಿಕಾರಿಗಳಿಗೆ ಕುದುರೆ ಸವಾರಿ ತಿಳಿದಿರಬೇಕೆಂಬ ನಿಯಮ ಪ್ರಾಚೀನ ಕಾಲದಿಂದ ಬಂದ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಮಾಡಿದ್ದ ವ್ಯವಸ್ಥೆಯೆಂದು ನೆನಪಿಡಬೇಕು. ಅಂದಿನ ರಾಜಾದಾಯದ ಭಾಗವಾಗಿದ್ದ ಭೂಕಂದಾಯ, ಮನೆತೆರಿಗೆ, ಅಂಗಡಿ ತೆರಿಗೆ, ವಸ್ತುಗಳ ಮೇಲಣ ಸುಂಕ, ವೃತ್ತಿ ತೆರಿಗೆ ಇವೆಲ್ಲ ಒಂದಲ್ಲ ಒಂದು ರೂಪದಲ್ಲಿ ಈಗಲೂ ಮುಂದುವರಿದರೂ ಈಗ ರಾಜ್ಯಾದಾಯದ ಮೂಲಗಳಲ್ಲಿ ಅಸಾಧಾರಣ ಬದಲಾವಣೆ ಆಗಿದೆ.

ಆಡಳಿತ ವಿಭಾಗದ ವಿಚಾರ ಗಮನಿಸಿದಾಗ ಕದಂಬರ ಕಾಲದ ದೇಶ (ಪ್ರಾಂತ), ವಿಷಯ (ಜಿಲ್ಲೆ), ಮಹಾಗ್ರಾಮ (ಹೋಬಳಿ) ಮುಂತಾದ ವಿಭಾಗಗಳು ಕಾಣಬರುತ್ತವೆ. ಬಾದಾಮಿ ಚಾಳುಕ್ಯರ ಮೂರು ಮಹಾರಾಷ್ಟ್ರಕಗಳು 99,000 ಗ್ರಾಮಗಳನ್ನು ಒಳಗೊಂಡಿದ್ದವೆಂದಾಗ ರಾಷ್ಟ್ರ ಎಂಬುದು ದೇಶ, ಮುಂದೆ ಮಂಡಲ (ಉದಾ: ಬನವಾಸಿ ಮಂಡಲ) ಇವೆಲ್ಲ ಪ್ರಾಂತಗಳಿಗೆ ಸಮಾನವೆಂದು ಭಾವಿಸಬಹುದಾಗಿದೆ. ಬನವಾಸಿ ಮಂಡಲದಲ್ಲಿ ಎಡೆಪೊಳಲ್ 'ವಿಷಯ' (ಈಗಿನ 'ಜಿಲ್ಲೆ') ಇತ್ತು. ಸೇಂದ್ರಕ ವಿಷಯ ಕೂಡ ಉಲ್ಲೇಖನೀಯ. ರಾಷ್ಟ್ರಕೂಟರ ಶಾಸನಗಳಲ್ಲಿ ರಾಷ್ಟ್ರ, ವಿಷಯ, ಗ್ರಾಮಗಳು ಸಾಲಾಗಿ ಶ್ರೇಣಿಯಂತೆ ಅನೇಕ ಬಾರಿ ಉಲ್ಲೇಖವಾಗಿದ್ದು ಈ ಪ್ರತೀ ಒಂದು ಘಟಕಕ್ಕೂ 'ಪತಿ' ಎಂಬ ಅಧಿಕಾರಿಯಿದ್ದ (ರಾಷ್ಟ್ರಪತಿ, ವಿಷಯಪತಿ, ಗ್ರಾಮಪತಿ). ದೊಡ್ಡ ಪ್ರಾಂತಗಳನ್ನು ಸಂಖ್ಯಾನುಗುಣವಾಗಿ ಹೇಳುವಲ್ಲಿ ಬನವಾಸಿ-12,000 ಹಾಗೂ ಹಲಸಿಗೆ 12,000 ಗಳ ಉಲ್ಲೇಖವಿದ್ದು ಧಾರವಾಡ ಜಿಲ್ಲೆಯ ದಕ್ಷಿಣ ಭಾಗ ಹಾಗೂ ಪಾನುಂಗಲ್-500 ಮುಂತಾದ ಕಿರುಘಟಕಗಳು ಬನವಾಸಿ-12,000 ದಲ್ಲೂ, ಕುಂದೂರು-1000 ಮುಂತಾದ ಘಟಕಗಳು ಹಲಸಿಗೆ 12,000 ದಲ್ಲೂ ಸೇರಿದ್ದವು. ಇವಲ್ಲದೆ ಈಗಿನ ಧಾರವಾಡ ಜಿಲ್ಲೆಯ ಕೇಂದ್ರ ಪ್ರದೇಶದಲ್ಲಿ ಬೇರೆ ವಿಷಯಗಳಿದ್ದವು. ಅದೇ ರೀತಿ ಪುಲಿಗೆರೆ - 300, ಕುಡುವಣಗಂಡ - 70, ಇಟಗಿ - 30, ಪುನ್ನವಂತಿ (ಹೊನ್ನತ್ತಿ) -12 ಇತ್ಯಾದಿ ಘಟಕಗಳು ಪುಲಿಗೆರೆ ವಿಷಯ, ಕುಡುವಣಗಂಡ, ಇಟಗಿಗಳು ನಾಡು ಅಥವಾ ಇಂದಿನ ಹೋಬಳಿ ಎಂದು ತಿಳಿಯಬೇಕಾಗುತ್ತದೆ. ಕಲ್ಯಾಣ ಚಾಳುಕ್ಯರ ಕಾಲದಲ್ಲಿ ಈ ವ್ಯವಸ್ಥೆಯ ವ್ಯಾಪ್ತಿಯ ಸ್ಪಷ್ಟಚಿತ್ರ ಸಿಗುತ್ತದೆ. ಕುಂದೂರು - 1000 (ಪ್ರಾಂತ), ಬೆಳವಲ - 300, ಪುಲಿಗೆರೆ - 300, ಪಾನುಂಗಲ್ - 500 (ಜಿಲ್ಲೆಗಳು), ನಾಗರಖಂಡ - 70, ಮಾಸವಾಡಿ - 140, ಬಾಸವೂರು - 140 (ನಾಡುಗಳು) ಹೀಗೆ ವಿವರಣೆಗಳುಂಟು. ರಟ್ಟಪಳ್ಳಿ - 70, ಇಟ್ಟಿಗೆ - 30, ಉಣಕಲ್ - 30, ಛಬ್ಬಿ - 30, ಮಾಸೂರು - 22, ಬಿನ್ನವೂರು - 12, ಮುಗುಂದ - 12, ಕುಂದೂರು - 12, ಬೆಣ್ಣೆವೂರು - 12, ಪುನ್ನವತ್ತಿ - 12 ಹೀಗೆ ನಾಡು ಅಥವಾ ಹೋಬಳಿಗಳಿವೆ. 12 ಎಂಬ ಘಟಕಗಳು ಕದಂಬರ ಶಾಸನಗಳಲ್ಲಿ ಬಂದಿದ್ದ 'ದ್ವಾದಶ ಗ್ರಾಮ'ದ ನೆನಪು ತರುತ್ತವೆ. 12,000 ದಂಥ ಅಂಕೆ ಅದರಲ್ಲಿರುವ 12

ಜಿಲ್ಲೆಗಳ ಸೂಚಕವಾದರೆ, ಅದಕ್ಕೂ ಕೆಳಗಿನ ಸಣ್ಣ ಅಂಕೆಗಳು ಖಚಿತವಾಗಿಯೂ ನಾಡಿನಲ್ಲಿದ್ದ ಗ್ರಾಮಗಳ ಸೂಚಕ. ಬೆಳವಲ - 300 ರಲ್ಲಿ 300 ಗ್ರಾಮಗಳಿದ್ದಿರಬೇಕೆಂದು ಡಾ|| ರಿತ್ತಿಯವರು ಅವುಗಳಲ್ಲಿನ ಬಹುಸಂಖ್ಯ ಗ್ರಾಮಗಳನ್ನು ಶಾಸನಾಧಾರದಿಂದ ಗುರುತಿಸಿದ್ದಾರೆ. ರಟ್ಟಪಳ್ಳಿ - 70 ಮತ್ತು ಇಟಗಿ - 30 ರ ಎರಡು ಘಟಕಗಳು ಕೂಡಿ ನೂರುಂಬಾಡ (100 ಗ್ರಾಮಗಳು) ಎನಿಸಿದ್ದಕ್ಕೆ ಸ್ಪಷ್ಟ ಸಾಕ್ಷಿ ಇದೆ. ಪುಲಿಗೆರೆ - 300, ಬೆಳ್ವೊಲ - 300 ಇವೆರಡೂ ಬನವಾಸಿ - 12,000 ಹಾಗೂ ಹಲಸಿಗೆ - 12,000 ದಿಂದ ಪ್ರತ್ಯೇಕವಾಗಿದ್ದ ವಿಷಯಗಳು. ಬನವಾಸಿ - 12,000 ದಲ್ಲಿ ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳ ಭಾಗಗಳೂ ಇದ್ದವು. ಹಲಸಿಗೆಯಲ್ಲಿ ಬೆಳಗಾವಿ ಜಿಲ್ಲೆಯ ಭಾಗ ಹೆಚ್ಚಿತ್ತು.

ಹೊಯ್ಸಳ, ಸೇಉಣರ ಕಾಲದಲ್ಲಿ ಕೂಡ ಇದೇ ವಿಭಾಗಗಳು ಮುಂದುವರಿದರೂ ವಿಜಯನಗರ ಕಾಲದಲ್ಲಿ ಈ ವ್ಯವಸ್ಥೆ ಬದಲಾಗಿ ವಂಶಪರಂಪರಾಗತ ಮಾಂಡಳಿಕರ ಆಡಳಿತ ಮೊದಲಿಟ್ಟಿತು. ಆದರೆ ಸಾಮ್ರಾಜ್ಯ ನೇಮಿಸಿದ್ದ ಅಧಿಕಾರಿಗಳು ಬೇರೆ ಬೇರೆ ಪ್ರದೇಶಗಳಲ್ಲಿ ಇದ್ದರು. ವಿಜಯನಗರ ಕಾಲದ ಶಾಸನಗಳ ಕೊರತೆಯಿಂದ ಜಿಲ್ಲೆಯ ಆಡಳಿತ ವ್ಯವಸ್ಥೆಯ ಸ್ಪಷ್ಟ ಚಿತ್ರ ಸಿಗದು. ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ, ಮುಂದೆ ಗೋವೆಯಿಂದ ಆಳುತ್ತಿದ್ದ ಅಧಿಕಾರಿಯೊಬ್ಬನ ಆಡಳಿತಕ್ಕೆ ಈ ಪ್ರದೇಶ ಒಳಗಾಗಿದ್ದು ಆರಂಭದಿಂದ 1441 ವರೆಗೂ ಚಂದ್ರಗುತ್ತಿಯಲ್ಲಿ ಇದ್ದ ಮೇಲಧಿಕಾರಿಯ ಉಲ್ಲೇಖವಿದೆ. ಮುಂದೆ 15 ನೇಯ ಶತಮಾನದಲ್ಲಿ ಬೆಳಗಾವಿ ಜಿಲ್ಲೆಯ ತೊರಗಲೆ (ತೊರಗಲ್) ದುರ್ಗಾಧಿಪತಿ ಜಿಲ್ಲೆಯ ಉತ್ತರ ಭಾಗದ ವ್ಯವಹಾರಗಳನ್ನು ನೋಡುತ್ತಿದ್ದ ವಿವರಗಳಿವೆ. ಲಕ್ಷ್ಮೇಶ್ವರ ಶಾಸನದಲ್ಲಿ (1547) 'ಲಕ್ಷುಮಣೇಶ್ವರನಾಡ 120 ಗ್ರಾಮ' ಎಂದಿದ್ದು ಹಿಂದಿನ ಪುಲಿಗೆರೆ - 300 ಮುಂತಾದ ವ್ಯವಸ್ಥೆ ಕೈಬಿಟ್ಟಿದ್ದಕ್ಕೆ ಸ್ಪಷ್ಟ ಉದಾಹರಣೆ. ಇನ್ನೊಂದು ಶಾಸನದಲ್ಲಿ ಹುಲಿಗೆರೆನಾಡು (1547) ಎಂದು ಇದೇ ಪ್ರದೇಶವನ್ನು ಕರೆದಿದೆ. ವಿಜಯನಗರದ ಕಾಲದಲ್ಲಿ ಬಂಕಾಪುರ, ಹಾವನೂರು, ಗುತ್ತಲ, ಡಂಬಳ, ನವಲಗುಂದ, ಲಕ್ಷ್ಮೇಶ್ವರ, ಕುಂದಗೋಳ ('ಕುಂಧಾಗಲ್ಲ'), ಹನುಮಾಪುರ (?) ಮುಂತಾದ ಹಲವಾರು ಕೇಂದ್ರಗಳಲ್ಲಿ ಪಾಳಯಗಾರರನ್ನು ನೇಮಿಸಿದ್ದು ಅವರಲ್ಲಿ ಕೆಲವರಿಗೆ 'ನಾಯಕ' ಎಂದಿದ್ದು ಮುಂದೆ ಕೆಲವರು ವಿಜಾಪುರ, ಮುಘಲ್ ಮತ್ತು ಮರಾಠರ ಕಾಲದಲ್ಲಿ ದೇಸಾಯಿ ಅಥವಾ ದೇಶಮುಖರಾದರು. ಇವರು ಕಂದಾಯ ಸಂಗ್ರಹಣೆ, ನ್ಯಾಯ ವಿಚಾರಣೆ ಮತ್ತು ಅರಸರು ಕೇಳಿದಾಗ ಸೇನಾಬಲ ಒದಗಿಸುವ ಜವಾಬ್ದಾರಿ ಹೊಂದಿದ್ದರು. ದೇಸಾಯಿಗೆ ಸಹಾಯಕನಾಗಿ ಮುತಾಲಿಕ್ ಎಂಬ ಬರಹಗಾರ ಅಥವಾ ದಫ್ತರ್‌ದಾರನಿದ್ದ.

ವಿಜಾಪುರದವರು ಬಂಕಾಪುರದಲ್ಲಿ ಒಬ್ಬ ಹಾಗೂ ಧಾರವಾಡದಲ್ಲಿ ಒಬ್ಬ ಕಿಲ್ಲೆದಾರನನ್ನು ಇವರ ಉಸ್ತುವಾರಿಗೆ ಇಟ್ಟಂತಿದೆ. ಸುಭಾ (ಅಥವಾ ಪ್ರಾಂತ) ಅದರ ಕೆಳಗೆ, ಸರ್ಕಾರ, ಪರಗಣೆಗಳೆಂಬ ಉಪವಿಭಾಗಗಳು ಅವರ ಆಡಳಿತದಲ್ಲಿ ಇದ್ದು ಪರಗಣೆಗಳ ಕೆಳಗೆ ನಾಡು (ದೇಶ)ಗಳಿದ್ದವು.

ಮುಘಲರ ಕಾಲದಲ್ಲಿ ಬಂಕಾಪುರ, ರಾಯರಹುಬ್ಬಳ್ಳಿ, ಕಾರಡಗಿ, ಲಕ್ಷ್ಮೇಶ್ವರ, ನಸೀರಾಬಾದ್ (ಧಾರವಾಡ), ಕುಂದಗೋಳ, ಮಿಶ್ರಿಕೋಟಿ, ರಟ್ಟೀಹಳ್ಳಿ, ಹಾನಗಲ್, ನರೇಗಲ್, ಮಾಸೂರು ಇವು ಮಹಲ್‌ಗಳಾಗಿದ್ದವು. (ಹಿಂದಿನ ಪರಗಣಾ ಬಹುಮಟ್ಟಿಗೆ ಹೊಸ ಮಹಲ್ ಆಯಿತು; ಒಂದೆರಡು ಮಹಲ್‌ಗಳ ಹೆಸರು ತಿಳಿಯದೆ ತಪ್ಪಿ ಹೋದಂತೆ ಇದೆ). 1705 ರ ಒಂದು ದಾಖಲೆಯಲ್ಲಿ ಗದಗ, ಜಾಲಿಹಾಳ, ನವಲಗುಂದ, ಪರಗಣೆಗಳ ಉಲ್ಲೇಖವಿದೆ. ಜಿಲ್ಲೆಯು ಸವಣೂರು ನವಾಬನ ಆಡಳಿತಕ್ಕೆ ಒಳಪಟ್ಟಿದ್ದರೂ ಧಾರವಾಡ ಹಾಗೂ ಗದಗ್ ಜಿಲ್ಲೆಗಳಲ್ಲಿ ಪ್ರತ್ಯೇಕ ಕಿಲ್ಲೇದಾರರು ಆಗ ಇದ್ದಂತಿದೆ. ಇವರ ಜೊತೆ ಇವರ ವಶವೇ ಇದ್ದ ಸೈನ್ಯವಿತ್ತು.

ಪೇಶವೆ ನಾನಾಸಾಹೇಬನು 1753 ರಲ್ಲಿ ಸವಣೂರು ನವಾಬನನ್ನು ಸೋಲಿಸಿ 36 ಪರಗಣೆಗಳ ಮೇಲೆ ಅಧಿಕಾರ ಹೊಂದಿದ್ದ ಎನ್ನುವಾಗ ಇವೆಲ್ಲವೂ ಧಾರವಾಡ ಜಿಲ್ಲೆಯವೇ ಅಲ್ಲ, ಇವುಗಳಲ್ಲಿ 12-13 ಮಾತ್ರ ಧಾರವಾಡ ಜಿಲ್ಲೆಯವಿರಬಹುದು. ಮುಂದೆ ನರಗುಂದ, ಶಿರಹಟ್ಟಿ, ಕುಂದಗೋಳ, ಗುಡಿಗೇರಿ, ಲಕ್ಷ್ಮೇಶ್ವರಗಳು ಮಹಲ್‌ಗಳಾಗಿ ಪೇಶ್ವೆಯ ಕೈಕೆಳಗಿನ ಜಾಗೀರುದಾರರ ವಶವಿದ್ದವು. ಇದಲ್ಲದೆ ಧಾರವಾಡ ಜಿಲ್ಲಾ ಪ್ರದೇಶದಲ್ಲಿ ಇದ್ದ ಪರಗಣೆಗಳೆಂದರೆ ನವಲಗುಂದ, ಧಾರವಾಡ, ಗದಗ, ಸವಣೂರು ಮುಂತಾದವು. ಸವಣೂರು ನವಾಬನಿಗೆ 25 ಗ್ರಾಮಗಳ ಮಹಲ್ ಅನ್ನು ಮುಂದೆ ಬಿಟ್ಟು ಕೊಟ್ಟರು (1806).

ಪರಗಣೆ, ತರಫ್ ಹಾಗೂ ಮಹಲ್‌ಗಳೆಂದರೆ ಒಂದೇ ಅರ್ಥದ ಪದಗಳು. ಇವುಗಳ ಮೇಲೆ ಪ್ರಾಂತ, ಸರ್ಕಾರ ಇಲ್ಲವೆ ಸುಬಾ ಇತ್ತು. ಪರಗಣೆಗಳ ಮೇಲೆ ಇರುವ ಮಾಮಲೇದಾರ ಅಥವಾ ಕಾಮವೀಸ್‌ದಾರ ಪೇಶ್ವೆಯ ನೇರ ಪ್ರತಿನಿಧಿ. ಅವನು ದೇಸಾಯಿ

(ದೇಶಮುಖರ)ಗಳ ಮೇಲೆ ಕಣ್ಣಿಡುತ್ತಿದ್ದ. ಕಂದಾಯ ವಸೂಲಿಯ ಉಸ್ತುವಾರಿ ನೋಡುತ್ತಿದ್ದ. ದೇಸಾಯಿ ಹಾಗೂ ದೇಶಪಾಂಡೆ (ನಾಡಕರ್ಣಿ ಎಂಬ ಪದವೂ ಇದೆ) ಸ್ಥಳೀಯ ಆನುವಂಶಿಕ ವ್ಯಕ್ತಿಗಳಾಗಿದ್ದು ಸರಕಾರಕ್ಕೂ ಜನರಿಗೂ ನಡುವೆ ಮಧ್ಯಸ್ಥರಂತೆ ಇದ್ದರು. ಪರಗಣಾದ ಕೇಂದ್ರ ಕಸಬಾ ವ್ಯಾಪಾರ ಕೇಂದ್ರವಾದರೆ ಪೇಠ್ (ಪೇಟೆ) ಎನ್ನುತ್ತಿದ್ದರು. ಹಾವೇರಿ ಕಸಬಾದಲ್ಲಿ ಮುಂದೆ ಪ್ರತ್ಯೇಕ ಪೇಠ್ ತೆರೆದದ್ದು (1795) ನೋಡಿದ್ದೇವೆ. ಧಾರವಾಡದಲ್ಲಿ ಸದಾಶಿವ್‌ಪೇಠ್ ಮುಂತಾದ ವ್ಯಾಪಾರಿ ಕೇಂದ್ರ ತೆರೆದದ್ದೂ ಗಮನಿಸಿದೆ. ಹೀಗೆ ಪೇಠ್‌ಹಂಸಬಾವಿ, ಪೇಠ್‌ಮಜೀದ್‌ಪುರ (ಹೊಸಹುಬ್ಬಳ್ಳಿ) ಇದ್ದವು.

ಬ್ರಿಟಿಷರು ಬಂದಾಗ (1818) ಸವಣೂರು, ನರಗುಂದ, ಕುಂದಗೋಳ, ಶಿರಹಟ್ಟಿ, ಲಕ್ಷ್ಮೇಶ್ವರ, ಹುಬ್ಬಳ್ಳಿ, ಗುಡಗೇರಿಗಳನ್ನು ಅವುಗಳನ್ನು ಹೊಂದಿದ್ದ ಜಾಗಿರ್ದಾರರ ವಶಬಿಟ್ಟು ಉಳಿದ ಪ್ರದೇಶಗಳಲ್ಲಿ ತಮ್ಮ ನೇರ ಆಡಳಿತ ತಂದರು. ಇದು ಮುಂಬೈ ಗವರ್ನರ್‌ನ ವಶವಿತ್ತು. ಆಗ ಜಿಲ್ಲೆಯನ್ನು ಸಬ್‌ಡಿವಿಜನ್ ಎಂದು ಕರೆಯುತ್ತಿದ್ದ ತಾಲೂಕುಗಳಾಗಿ ವಿಭಜನೆ ಮಾಡಿದರು. ಹುಬ್ಬಳ್ಳಿ ಹಾಗೂ ಅದರ ಪರಿಸರದ ಮಹಲನ್ನು ಸೈನ್ಯ ಸಹಾಯ ಮೈತ್ರಿಯಂತೆ ಕೊಡಬೇಕಾಗಿದ್ದ ಪೊಗದಿಗಾಗಿ ಸಾಂಗ್ಲಿ ಪಟವರ್ಧರ ಬ್ರಿಟಿಷರ ವಶವಿತ್ತರು. ನರಗುಂದ ಮಹಲ್ 1858 ರಲ್ಲಿ ಅಲ್ಲಿನ ಬಂಡಾಯದ ನಂತರ ಅವರ ವಶವಾಯಿತು. 1836 ರಲ್ಲಿ ಧಾರವಾಡ ಜಿಲ್ಲೆ ಪ್ರತ್ಯೇಕವಾಗಿ ಈಗಿರುವಂತೆ ಅಸ್ತಿತ್ವಕ್ಕೆ ಬಂದಾಗ ಇದ್ದ ಸಬ್ ಡಿವಿಜನ್ ಅಥವಾ ತಾಲೂಕುಗಳೆಂದರೆ ಬಂಕಾಪುರ (166 ಗ್ರಾಮ), ಧಾರವಾಡ (213 ಗ್ರಾಮ), ಗದಗ (128 ಗ್ರಾಮ), ಹಾನಗಲ್ (211 ಗ್ರಾಮ), ಹುಬ್ಬಳ್ಳಿ (94 ಗ್ರಾಮ), ಕಲಘಟಗಿ (141 ಗ್ರಾಮ), ಕರ್ಜಗಿ (147 ಗ್ರಾಮ), ಕೋಡ (204 ಗ್ರಾಮ), ನವಲಗುಂದ (97 ಗ್ರಾಮ), ರಾಣೆಬೆನ್ನೂರು (142 ಗ್ರಾಮ) ಹಾಗೂ ರೋಣ (74 ಗ್ರಾಮ). (1884 ರ ಗ್ಯಾಸೆಟಿಯರ್ ಹೇಳುವಂತೆ) 1828 ರ ವರೆಗೆ 21 ಇದ್ದ ಸಬ್‌ಡಿವಿಜನ್‌ಗಳನ್ನು 19 ಕ್ಕೆ ಇಳಿಸಲಾಯಿತೆಂದು ಹೇಳಿದ್ದು ಇದರಲ್ಲಿ ಬೆಳಗಾವಿ ಜಿ॥ ಯ ಹಾಗೂ ಬಿಜಾಪುರ ಜಿ॥ ಯ ತಾಲೂಕುಗಳೂ ಸೇರಿದ್ದವು. ಮುಂದೆ ಕೋಡದ ಬದಲು ಹಿರೇಕೆರೂರು, ಬಂಕಾಪುರದ ಬದಲು ಶಿಗ್ಗಾಂವಿ, ಕರ್ಜಗಿ ಬದಲು ಹಾವೇರಿ ತಾಲೂಕುಗಳಾಗಿ ಬ್ಯಾಡಗಿ, ಮುಂಡರಗಿ ಹಾಗೂ ನರಗುಂದ ಪೇಠಾಗಳೂ ತಾಲೂಕುಗಳಾದವು. ಇವುಗಳ ಮುಖ್ಯಸ್ಥ ಮಹಲ್‌ಕರಿ. ಸ್ವಾತಂತ್ರ್ಯಾನಂತರ ಸಂಸ್ಥಾನಗಳ ವಿಲೀನವಾಗಿ ಶಿರಹಟ್ಟಿ, ಕುಂದಗೋಳ ತಾಲೂಕುಗಳಾಗಿ ನಂತರ ತಡವಾಗಿ ಸವಣೂರು ತಾಲೂಕಾಯಿತು. ಈ ತಾಲೂಕುಗಳು ಈಗ ನಾಲ್ಕು ಸಬ್‌ಡಿವಿಜನ್‌ಗೆ ಒಳಪಟ್ಟಿವೆ. ಬ್ರಿಟಿಷರ ಕಾಲದಲ್ಲಿ ಜಿಲ್ಲೆಗೆ ಕಲೆಕ್ಟರ್, ಸಬ್‌ಡಿವಿಜನ್‌ಗೆ ಅಥವಾ ಪ್ರಾಂತಕ್ಕೆ ಅಸಿಸ್ಟಂಟ್ ಕಲೆಕ್ಟರ್ (ಪ್ರಾಂತ ಆಫೀಸರ್) ಹಾಗೂ ತಾಲೂಕಿಗೆ ಮಾಮಲೇದಾರ ಅಧಿಕಾರಿಯಾಗಿದ್ದರು.

ಈಗ ಜಿಲ್ಲೆಗೆ ಜಿಲ್ಲಾಧಿಕಾರಿ ಅಥವಾ ಡೆಪ್ಯುಟಿ ಕಮಿಶನರ್, ಉಪವಿಭಾಗಕ್ಕೆ (ಸಬ್‌ಡಿವಿಜನ್) ಅಸಿಸ್ಟಂಟ್ ಕಮಿಶನರ್ ಅಥವಾ ಉಪವಿಭಾಗಾಧಿಕಾರಿ ಹಾಗೂ ತಾಲೂಕಿಗೆ ತಹಶಿಲ್ದಾರರಿದ್ದಾರೆ. 17 ತಾಲೂಕುಗಳ ಕೆಳಗೆ 43 ಹೋಬಳಿಗಳಿದ್ದು (ಸರ್ಕಲ್) ಹೋಬಳಿಗೆ ಬ್ರಿಟಿಷರ ಕಾಲದಲ್ಲಿ ಇದ್ದಂತೆ ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ಕಂದಾಯಾಧಿಕಾರಿ ಇದ್ದಾನೆ. ಗ್ರಾಮಕ್ಕೆ (ಅಥವಾ ಹಲವು ಗ್ರಾಮಗಳಿಗೆ) ಒಬ್ಬ ಗ್ರಾಮ ಲೆಕ್ಕಿಗನಿದ್ದು ಪ್ರತೀ ಗ್ರಾಮಕ್ಕೆ ಒಬ್ಬ ಗ್ರಾಮ ಸಹಾಯಕನಿದ್ದಾನೆ.

ಧಾರವಾಡ ಜಿಲ್ಲೆಯಲ್ಲಿರುವ ತಾಲೂಕುಗಳು, ಅವುಗಳಲ್ಲಿ ಪುನರ್ಘಟಿತವಾದ ಹೋಬಳಿ ಮತ್ತು ಗ್ರಾಮ ಹಾಗೂ ಪಟ್ಟಣಗಳ ಸಂಖ್ಯೆಯನ್ನು ಅಧ್ಯಾಯ ಒಂದರಲ್ಲಿ ಕೊಟ್ಟಿದ್ದು ಈಗಿರುವ 17 ತಾಲೂಕುಗಳಲ್ಲಿ 43 ಹೋಬಳಿಗಳೂ (ರೆವಿನ್ಯೂ ಸರ್ಕಲ್), 1,362 ಜನವಸತಿಯ ಗ್ರಾಮಗಳೂ (ಇದಲ್ಲದೆ, ಈಗ ಬೇಚರಾಕ್ ಇಲ್ಲವೇ ಜನವಸತಿ ಇಲ್ಲದ, ಆದರೆ ಕಂದಾಯ ದಾಖಲೆಯಲ್ಲಿರುವ 44 ಗ್ರಾಮಗಳೂ), 22 ಪಟ್ಟಣಗಳೂ ಇವೆ. ಜಿಲ್ಲೆಯ ತಾಲೂಕುಗಳಲ್ಲಿ (1) ಧಾರವಾಡ (ಧಾರವಾಡ, ಹುಬ್ಬಳ್ಳಿ, ಕಲಘಟಗಿ ಮತ್ತು ನವಲಗುಂದ ತಾ॥ ಗಳು), (2) ಗದಗ (ಗದಗ, ಮುಂಡರಗಿ, ನರಗುಂದ ಮತ್ತು ರೋಣ ತಾ॥ ಗಳು), (3) ಹಾವೇರಿ (ಬ್ಯಾಡಗಿ, ಹಾವೇರಿ, ಹಿರೇಕೆರೂರು ಮತ್ತು ರಾಣೆಬೆನ್ನೂರು ತಾ॥ ಗಳು), ಮತ್ತು (4) ಸವಣೂರು (ಹಾನಗಲ್, ಕುಂದಗೋಳ, ಸವಣೂರು, ಶಿಗ್ಗಾಂವಿ ಮತ್ತು ಶಿರಹಟ್ಟಿ ತಾ॥ ಗಳು), ಹೀಗೆ ನಾಲ್ಕು ಉಪವಿಭಾಗಗಳಿವೆ. ಜಿಲ್ಲಾಧಿಕಾರಿಯ ಅಧೀನದಲ್ಲಿ ಈ ಉಪವಿಭಾಗಗಳಿವೆ. ಜಿಲ್ಲಾಧಿಕಾರಿಯ ಮೇಲೆ ಹತೋಟಿ ಹೊಂದಿರುವವರು ವಿಭಾಗಾಧಿಕಾರಿ ಅಥವಾ ಡಿವಿಜನಲ್ ಕಮಿಶನರ್, ಇವರ ಕೇಂದ್ರ ಬೆಳಗಾವಿ. ಈ ವಿಭಾಗದಲ್ಲಿ ಧಾರವಾಡ ಸೇರಿ ನಾಲ್ಕು ಜಿಲ್ಲೆಗಳಿವೆ.

### ಜಿಲ್ಲಾಧಿಕಾರಿ

ಜಿಲ್ಲಾಧಿಕಾರಿಗಳು ಅಥವಾ ಡೆಪ್ಯುಟಿ ಕಮಿಶನರ್ ಜಿಲ್ಲೆಯ ಆಡಳಿತ ಚಕ್ರದ ಅಚ್ಚು ಇದ್ದಂತೆ ಇರುತ್ತಾರೆ. ಬ್ರಿಟಿಷರ ಕಾಲದಲ್ಲಿ ಅವರಿಗೆ ಕಲೆಕ್ಟರ್ ಎನ್ನುತ್ತಿದ್ದು ಕಂದಾಯ ಸಂಗ್ರಾಹಕ ಎಂಬ ಅರ್ಥದಲ್ಲಿ ಈ ಪದ ಬಳಕೆಯಾದರೂ ಅವರು ಜಿಲ್ಲಾ ದಂಡಾಧಿಕಾರಿ (ಮ್ಯಾಜಿಸ್ಟ್ರೇಟ್)ಯೂ ಆಗಿದ್ದಾರೆ. ಜಿಲ್ಲೆಯು ಆಡಳಿತದ ಒಂದು ಮುಖ್ಯ ಘಟಕವಾಗಿದ್ದು ರಾಜ್ಯ ಸಚಿವಾಲಯದಲ್ಲಿ ಇರುವ ಎಲ್ಲ ಇಲಾಖೆಗಳ ಹಾಗೂ ಎಲ್ಲ ರಾಜ್ಯಮಟ್ಟದ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳ ಕೆಲಸವನ್ನು ಸಮನ್ವಯಗೊಳಿಸುವ ಉಸ್ತುವಾರಿ ಅಧಿಕಾರ ಜಿಲ್ಲಾಧಿಕಾರಿಗೆ ಇದೆ. ಅದಲ್ಲದೆ ಸರ್ಕಾರದ ಎಲ್ಲ ಆಸ್ತಿಪಾಸ್ತಿಗಳು ಜಿಲ್ಲಾಧಿಕಾರಿಯ ಅಧೀನದಲ್ಲಿರುತ್ತವೆ. ಜಿಲ್ಲಾ ಪರಿಷತ್ತಿನ ಕಕ್ಷೆಗೆ ಸ್ಥಳೀಯ ಸಂಸ್ಥೆಗಳು ಹೋಗುವ ಮೊದಲು (1983) ಅವುಗಳಿಗೆ ಮಾರ್ಗದರ್ಶಕರು ಜಿಲ್ಲಾಧಿಕಾರಿಗಳೇ ಆಗಿದ್ದರು.

ಭೂಕಂದಾಯದಲ್ಲಿ ಕೃಷಿ ಭೂಮಿ ಮೇಲೆ ಆಕರಿಸಿದ ಕಂದಾಯ, ಕೃಷಿಯೇತರ ಆಕರಣೆಗಳು, ಹಾಗೂ ಇತರ ಆಕರಣೆಯ ಮೊತ್ತಗಳನ್ನು ಸಂಗ್ರಹಿಸಿ ಅದರ ಲೆಕ್ಕವಿಡುವುದು ಆತನ ಜವಾಬ್ದಾರಿ. ಭೂಕಂದಾಯ ಅಧಿನಿಯಮಗಳಿಗೆ ಹಾಗೂ ಉಪನಿಯಮಗಳಿಗೆ ಅನುಗುಣವಾಗಿ ನೀರಾವರಿ ದರ ಮುಂತಾದವುಗಳನ್ನು ಗೊತ್ತುಪಡಿಸಲು ಜಿಲ್ಲಾಧಿಕಾರಿಗೆ ಹೆಚ್ಚಿನ ಅಧಿಕಾರವಿದೆ. ಭೂ ಸುಧಾರಣಾ ಅಧಿನಿಯಮ, ಭೂಮಿ ಸ್ವಾಧೀನ ಅಧಿನಿಯಮ, ಧಾರ್ಮಿಕ ಹಾಗೂ ದತ್ತಿಗಳ ಅಧಿನಿಯಮ, ನೀರಾವರಿ ಅಧಿನಿಯಮ, ಭೂ ಮಂಜೂರಾತಿ ಅಧಿನಿಯಮ, ಋಣ ಪರಿಹಾರ ಅಧಿನಿಯಮ, ತುಂಡು ಹಿಡುವಳಿಗಳ ನಿಷೇಧ ಅಧಿನಿಯಮ ಇವುಗಳ ಕಾರ್ಯಾಚರಣೆಗಳು ಅವರ ಕಂದಾಯ ಸಂಬಂಧೀ ಅಧಿಕಾರಗಳು. ಭೂ ದಾಖಲೆಗಳ ರಕ್ಷಣೆ ಹಾಗೂ ಹಕ್ಕು ಬದಲಾವಣೆಗಳ ನಿರ್ವಹಣೆ ಹಾಗೂ ಭೂಹೀನರಿಗೆ ಜಮೀನು ಮಂಜೂರಾತಿಗಳೂ ಅವರದೇ ಅಧಿಕಾರಗಳು. ಪಡಿತರ ವಿತರಣೆ, ಆಹಾರ ಧಾನ್ಯ ಮತ್ತು ಅವಶ್ಯ ವಸ್ತುಗಳ ನಿಯಂತ್ರಣ, ಶಾಂತಿಭಂಗದ ಪ್ರಕರಣಗಳ ಹತೋಟಿ, ಪ್ರವಾಹ, ಬೆಂಕಿ ಅನಾಹುತ, ಕ್ಷಾಮ, ದಂಗೆ ಮತ್ತು ಸಾಂಕ್ರಾಮಿಕ ರೋಗಗಳ ಅನಾಹುತಗಳ ಕಾಲದಲ್ಲಿ ತುರ್ತು ಪರಿಹಾರಗಳ ನಿರ್ದೇಶಕರು ಅವರೇ. ಕ್ಷಾಮ ಬಂದಾಗ ಕುಡಿಯುವ ನೀರು, ದನಕರುಗಳಿಗೆ ಮೇವು ಮುಂತಾದ ವ್ಯವಸ್ಥೆಗೆ ಇವರೇ ಜವಾಬ್ದಾರರು. ಭೂಸ್ವಾಧೀನ, ಗೋಮಾಳಗಳ ರಕ್ಷಣೆ, ಕುಟುಂಬ ಕಲ್ಯಾಣ ಚಟುವಟಿಕೆಯಲ್ಲಿ ಆರೋಗ್ಯ ಇಲಾಖೆಯ ಜೊತೆ ಸಹಕರಿಸುವುದು, ಜನಗಣತಿ, ಜಾನುವಾರುಗಳ ಗಣತಿ, ಸಾಕ್ಷರತಾ ಚಟುವಟಿಕೆ ಸಣ್ಣ ಉಳಿತಾಯ ಯೋಜನೆಗೆ ಚಾಲನೆ ನೀಡುವುದು ಇವರ ಇತರ ಕರ್ತವ್ಯಗಳು.

ಸರ್ಕಾರದ ಆರ್ಥಿಕ ಹಾಗೂ ಸಾಮಾಜಿಕ ನೀತಿ ನಿಯಮಗಳ ಅನುಷ್ಠಾನದ ಜೊತೆ ಲೋಕಸಭೆ, ಶಾಸನ ಸಭೆ, ವಿಧಾನ ಪರಿಷತ್ತು, ಸ್ಥಳೀಯ (ಪಂಚಾಯತಿ) ಸಂಸ್ಥೆಗಳು ಹಾಗೂ ಸಹಕಾರಿ ಸಂಘಗಳ ಚುನಾವಣೆ ಉಸ್ತುವಾರಿ ಇವರದೇ ಜವಾಬ್ದಾರಿ. ಆದಾಯ, ಜಾತಿ, ವಾಸ್ತವ್ಯ ಹಾಗೂ ಸಾಲ್ವೆನ್ಸಿ ಪತ್ರಗಳ ದೃಢೀಕರಣ, ನಾಟಕಾದಿ ಮನರಂಜನಾ ಪ್ರದರ್ಶನಗಳಿಗೆ ಅನುಮತಿ ನೀಡುವುದು, ಆಯುಧಗಳಿಗೆ ಪರವಾನಗಿ ನೀಡುವುದು ವೃದ್ಧಾಪ್ಯ, ವಿಧವಾ, ಅಂಗವಿಕಲ ಹಾಗೂ ಸ್ವಾತಂತ್ರ್ಯಯೋಧರ ಪಿಂಚಣಿ ಮಂಜೂರಾತಿ ಹಾಗೂ ದುರ್ಬಲ ವರ್ಗದವರಿಗೆ ನ್ಯಾಯ ದೊರಕಿಸುವ ಚಟುವಟಿಕೆಗಳು, ಜೊತೆಯಲ್ಲಿ ಸಣ್ಣ, ಅತೀ ಸಣ್ಣ ರೈತರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ದೊರೆಯಬೇಕಾದ ಸೌಲಭ್ಯಗಳ ವಿತರಣೆ ಮಾಡುವ ಅಧಿಕಾರಿ ಇವರೇ. ರಾಜ್ಯದ ಗಡೀಪ್ರದೇಶಗಳ ಅಭಿವೃದ್ಧಿ, ಜವಾಹರ್ ರೋಜ್‌ಗಾರ್ ಯೋಜನೆಯ ಅನುಷ್ಠಾನಕ್ಕೂ ಜಿಲ್ಲಾಧಿಕಾರಿಯೇ ಜವಾಬ್ದಾರರು.

ಜಿಲ್ಲಾಧಿಕಾರಿಯು ಅಭಿವೃದ್ಧಿಪರವಾದ ಅನೇಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಜವಾಬ್ದಾರರಾಗಿದ್ದು ಅವರಿಗೆ ವಿಶೇಷ ಜಿಲ್ಲಾಧಿಕಾರಿಯ ಸಹಕಾರವಿತ್ತು. ಆದರೆ ಅನೇಕ ಅಭಿವೃದ್ಧಿಪರ ಚಟುವಟಿಕೆಗಳನ್ನು ಈಗ ಜಿಲ್ಲಾ ಪಂಚಾಯತ್ (ಹಿಂದೆ, 1987 ರಿಂದ ಜಿಲ್ಲಾ ಪರಿಷತ್ತು)ಗೆ ವರ್ಗಾಯಿಸಿದೆ (ಸ್ಥಳೀಯ ಸ್ವಯಮಾಧಿಕಾರ-ಅಧ್ಯಾಯ 12 ನೋಡಿ). ಇದರಿಂದ ಇವರ ವಶವಿದ್ದ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಘ (ಡಿ.ಆರ್.ಡಿ.ಎಸ್.) ಕೂಡ ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಆಗಿದೆ.

ಜಿಲ್ಲಾಧಿಕಾರಿಯು ಜಿಲ್ಲಾ ದಂಡಾಧಿಕಾರಿಯಾಗಿದ್ದರೂ ನ್ಯಾಯಾಂಗ ಮತ್ತು ಕಾರ್ಯಾಂಗಗಳನ್ನು ಪ್ರತ್ಯೇಕಿಸುವುದರಿಂದ ಜಿಲ್ಲಾ ನ್ಯಾಯಾಧೀಶರ ಕಕ್ಷೆಗೆ ನ್ಯಾಯ ವಿತರಣೆಯ ಅಧಿಕಾರ ವರ್ಗಾಯಿತವಾಗಿದೆ. ಆದರೆ ಜಿಲ್ಲಾಧಿಕಾರಿಯು ವಿಚಾರಣಾ ಹಂತದಲ್ಲಿ ಪಾಲುಗೊಳ್ಳದಿದ್ದರೂ ಕರ್ನಾಟಕ ಪೋಲೀಸ್ ಅಧಿನಿಯಮ ಮತ್ತು ದಂಡ ಪ್ರಕ್ರಿಯಾ ಸಂಹಿತೆಯಂತೆ (ಕ್ರಿಮಿನಲ್ ಪ್ರೊಸಿಜರ್ ಕೋಡ್), ಜಿಲ್ಲಾಧಿಕಾರಿಗೆ ವ್ಯಾಪಕ ಅಧಿಕಾರವಿದ್ದು ಶಾಂತಿಪಾಲನೆಯ ವಿಶೇಷ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಯು ಪೋಲೀಸ್‌ದಳಕ್ಕೆ ನಿರ್ದೇಶನ ನೀಡಬಹುದು. ಜಿಲ್ಲೆಯಲ್ಲಿರುವ ಸೆರೆಮನೆಗಳ ಉಸ್ತುವಾರಿಗೂ ಅವರಿಗೆ ಅಧಿಕಾರವಿದೆ. ಸಾರ್ವಜನಿಕ ಶಾಂತಿಯ ರಕ್ಷಣೆಗಾಗಿ

ಯಾವುದೇ ವ್ಯಕ್ತಿಯನ್ನು ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿ ಅಥವಾ ದಿಗ್ಬಂಧನದಲ್ಲಿ ಅವರು ಇಡಬಹುದು. ಅಸ್ಪೃಶ್ಯತಾ ನಿವಾರಣೆಗೆ ಸಂಬಂಧಿಸಿದ ಕಾನೂನುಗಳ ಅನುಷ್ಠಾನಗಳಿಗೂ ಅವರೇ ಜವಾಬ್ದಾರರು.

ಜಿಲ್ಲೆಯ ಪ್ರಗತಿಗೆ ಸಂಬಂಧಿಸಿದ ವಿವಿಧ ಶಾಸನಬದ್ಧ ಸಮಿತಿಗಳಿಗೆ ಜಿಲ್ಲಾಧಿಕಾರಿ ಪದನಿಮಿತ್ತ ಅಧ್ಯಕ್ಷರು. ಉಳಿತಾಯ ಯೋಜನೆಯ ಸಮಿತಿಯ ಸಹ ಅಧ್ಯಕ್ಷರಾಗಿ, ಸಾರಿಗೆ ಪ್ರಾಧಿಕಾರದ ಅಧ್ಯಕ್ಷರಾಗಿ, ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ, ಸಾಕ್ಷರತಾ ಆಂದೋಲನ ಸಮಿತಿಯ ಸಹ ಅಧ್ಯಕ್ಷರಾಗಿ ಕೂಡ ಅವರು ಕಾರ್ಯ ನಿರ್ವಹಿಸುತ್ತಾರೆ. ವೀಸಾ, ಪಾಸ್‌ಪೋರ್ಟ್‌ಗಳಿಗೆ ಸಂಬಂಧಿಸಿದ ನಿಯಮಗಳ ಕಾರ್ಯಾಚರಣೆಗೆ ಅವರೇ ಜವಾಬ್ದಾರರು.

ಜಿಲ್ಲಾಧಿಕಾರಿ ಜಾರಿ ಮಾಡಬೇಕಾದ ಅತ್ಯಂತ ಮುಖ್ಯ ಕಾನೂನುಗಳು ಇವು: (1) ಭೂಕಂದಾಯ ಅಧಿನಿಯಮ 1964 ಮತ್ತು 1966, (2) ಕರ್ನಾಟಕ ಭೂ ಮಂಜೂರಾತಿ ನಿಯಮ 1969, (3) ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ಮತ್ತು ಇದರ ಇತರ ನಿಯಮಾವಳಿಗಳು, (4) ಕರ್ನಾಟಕ ಋಣ ಪರಿಹಾರ ಅಧಿನಿಯಮ 1978, (5) ಕರ್ನಾಟಕ ಪರಿಶಿಷ್ಟ ಜಾತಿ-ವರ್ಗಗಳ (ಕೆಲವು ಜಮೀನುಗಳ) ಪರಭಾರೆ ನಿಷೇದ ಅಧಿನಿಯಮ 1975, (6) ಕರ್ನಾಟಕ ತುಂಡು ಹಿಡುವಳಿ ನಿಷೇಧ ಮತ್ತು ನಿಯೋಜನಾ ಅಧಿನಿಯಮ 1966, ಹಾಗೂ ತತ್ಸಂಬಂಧ ನಿಯಮಾವಳಿಗಳು, (7) ಕರ್ನಾಟಕ ಗ್ರಾಮಾಧಿಕಾರಿಗಳ ರದ್ಧತಿ ಕಾನೂನು 1961, (8) ಕರ್ನಾಟಕ ನೀರಾವರಿ ಅಧಿನಿಯಮ 1965, (9) ಕರ್ನಾಟಕ ನೀರು ಶುಲ್ಕ ಅಭಿವೃದ್ಧಿಕರ ಅಧಿನಿಯಮ, (10) ಕರ್ನಾಟಕ ಅರಣ್ಯ ಅಧಿನಿಯಮ, (11) ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ ಮತ್ತು ನಿಯಮಾವಳಿಗಳು, (12) ಕರ್ನಾಟಕ ಇನಾಂರದ್ದತಿ ಅಧಿನಿಯಮ 1977, (13) ಕರ್ನಾಟಕ ಧಾರ್ಮಿಕ ದತ್ತಿ ಹಾಗೂ ಇನಾಂ ರದ್ಧತಿ ಅಧಿನಿಯಮ 1955, (14) ಭೂಸ್ವಾಧೀನ ಕಾಯಿದೆ ಮತ್ತು ತಿದ್ದುಪಡಿ ಕಾಯಿದೆ 1984, (15) ಜನತಾ ಪ್ರಾತಿನಿಧ್ಯ ಕಾನೂನು, (16) ಕರ್ನಾಟಕ ಅಕ್ಕಿ ಸಂಸ್ಕರಣಾ ಕೈಗಾರಿಕಾ ಕಾನೂನು, (17) ಕರ್ನಾಟಕ ವಕ್ಫ್ ಕಾನೂನು, (18) ಕರ್ನಾಟಕ ಪೋಲೀಸ್ ಅಧಿನಿಯಮ 1963 ಮತ್ತು ತತ್ಸಂಬಂಧ ನಿಯಮಾವಳಿಗಳು, (19) ಕರ್ನಾಟಕ ಚಲನಚಿತ್ರ ನಿಯಂತ್ರಣ ಕಾನೂನು 1964 ಮತ್ತು ನಿಯಮಾವಳಿ 1971, (20) ಕರ್ನಾಟಕ ಟ್ರೆಜರಿ ಕಾನೂನು, (21) ಸಿಮೆಂಟ್ ನಿಯಂತ್ರಣ ಕಾನೂನು; (22) ಭಾರತೀಯ ತುರ್ತುಸ್ಥಿತಿ ಕಾಯಿದೆ, (23) ದಂಡಪ್ರಕ್ರಿಯಾ ಸಂಹಿತೆ, (24) ಸಿವಿಲ್ ಪ್ರಕ್ರಿಯಾ ಸಂಹಿತೆ, (25) ನಾಗರಿಕತ್ವ ಅಧಿನಿಯಮ 1955 ಮತ್ತು ನಿಯಮ 1956, (26) ಪೆಟ್ರೋಲಿಯಂ ಕಾನೂನು, (27) ಕರ್ನಾಟಕ ಸೀಮೆ ಎಣ್ಣೆ ಲೈಸನ್ಸ್ ಆದೇಶ, (28) ಕರ್ನಾಟಕ ಅವಶ್ಯ ವಸ್ತುಗಳ ವ್ಯಾಪಾರ ಪರವಾನಿಗೆ ಆದೇಶ 1959 ಮತ್ತು ನಿಯಮಗಳು, (29) ಭಾರತ ಬಂದೂಕು ಕಾನೂನು 1959 ಮತ್ತು ನಿಯಮಾವಳಿಗಳು, (30) ಸಿಡಿಮದ್ದುಗಳ ಕಾಯಿದೆ 1884 ಮತ್ತು ನಿಯಮಾವಳಿಗಳು 1981, (31) ಕರ್ನಾಟಕ ಮುನಿಸಿಪಲ್ ಕಾನೂನು 1964 ಮತ್ತು ನಿಯಮಾವಳಿಗಳು, (32) ಭಾರತೀಯ ಮನೋವಿಕಲರ ಅಧಿನಿಯಮ 1912, (33) ಮುದ್ರಣಾಲಯ ನೋಂದಣಿ ಮತ್ತು ಪುಸ್ತಕಗಳ ಕಾಯಿದೆ, (34) ಭಾಗೀದಾರಿಯ ವರ್ಗಾವಣೆ ಕಾಯಿದೆ, (35) ಮುಜರಾಯಿ ವರ್ಗಾವಣೆ ಕೈಪಿಡಿ ಹಾಗೂ (36) ಜೀತಪದ್ಧತಿ ನಿರ್ಮೂಲನ ಕಾಯಿದೆ 1976.

ಜಿಲ್ಲಾಪರಿಷತ್ತಿಗೆ ಅಭಿವೃದ್ಧಿ ಕಾರ್ಯಗಳನ್ನು ವಹಿಸಿ ಕೊಟ್ಟ ನಂತರವೂ ಕಂದಾಯ ಇಲಾಖೆ ಮುಖ್ಯಸ್ಥರಾದ ಜಿಲ್ಲಾಧಿಕಾರಿಯೇ ಜಿಲ್ಲೆಯಲ್ಲಿ ಸರಕಾರದ ಪ್ರತಿನಿಧಿಯಾಗಿದ್ದು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ (1) ಫಲಾನುಭವಿಗಳನ್ನು ಗುರುತಿಸುವುದು, (2) ಭೂಮಿಯ ನಿವೇಶನಗಳನ್ನು ಪೂರೈಸುವುದು, (3) ಸಾಲಗಳ ವಸೂಲಿ ಇವೆಲ್ಲ ಕಂದಾಯ ಇಲಾಖೆಯ ಮುಖ್ಯಸ್ಥರಾದ ಜಿಲ್ಲಾಧಿಕಾರಿಯದೇ ಕೆಲಸಗಳು.

ಜಿಲ್ಲಾಧಿಕಾರಿಯ ನೆರವಿಗೆ ಕೇಂದ್ರ ಸಹಾಯಕ (ಎಚ್.ಕ್ಯೂ.ಎ.) ರೆಂಬ ಪತ್ರಾಂಕಿತ 'ಎ' ವೃಂದದ ಅಧಿಕಾರಿ ಇದ್ದು ಅವರು ಜಿಲ್ಲಾ ದಂಡಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಾರೆ. ಇವರು ಜಿಲ್ಲಾಧಿಕಾರಿಯ ಕಂದಾಯ, ನ್ಯಾಯಾಡಳಿತ, ಶಾಂತಿಪಾಲನೆಗೆ ಸಂಬಂಧಿಸಿದ ಎಲ್ಲ ಅಧಿಕಾರಗಳ ಚಲಾವಣೆಯಲ್ಲೂ ಅವರಿಗೆ ಸಹಾಯಕರಾಗಿರುತ್ತಾರೆ. ಇವರು ಬಾಡಿಗೆ ನಿಯಂತ್ರಣಾಧಿಕಾರಿಯೂ ಆಗಿರುತ್ತಾರೆ. ಇದಲ್ಲದೆ ಕಂದಾಯ ವಿಭಾಗದಲ್ಲಿ ಒಬ್ಬ ಕಚೇರಿ ಸಹಾಯಕರಿರುತ್ತಾರೆ. ಜಿಲ್ಲಾಧಿಕಾರಿಗೆ ಒಬ್ಬ ಆಪ್ತಸಹಾಯಕರಿರುತ್ತಾರೆ. ಇಂಥದೇ ಹುದ್ದೆ ಕೇಂದ್ರ ಸಹಾಯಕರಿಗೆ ಕೂಡ ನೆರವಾಗಲು ಇರುತ್ತದೆ. ಅಲ್ಲದೆ ಕಂದಾಯ ವಿಭಾಗದಲ್ಲಿ ನಾಲ್ವರು ಶಿರಸ್ತೇದಾರರು,

ಒಬ್ಬ ಬಾಡಿಗೆ ನಿಯಂತ್ರಣ ಅಧಿಕಾರಿ ಹಾಗೂ ಇತರ ಸಿಬ್ಬಂದಿ ಇರುತ್ತದೆ. ರಾಷ್ಟ್ರೀಯ ಉಳಿತಾಯ ಯೋಜನೆಯ ನಿರ್ವಹಣೆಗೆ ಒಬ್ಬ ಉಪನಿರ್ದೇಶಕರಿರುತ್ತಾರೆ. ಇವರಿಗೆ ನೆರವಾಗಲು ಉಪವಿಭಾಗಕ್ಕೆ ಒಬ್ಬರಂತೆ ನಾಲ್ವರು ವಿಸ್ತರಣಾ ಅಧಿಕಾರಿಗಳಿದ್ದಾರೆ.

ಇದಲ್ಲದೆ ಜಿಲ್ಲಾ ಕಚೇರಿಯಲ್ಲಿ ಆಹಾರ ವಿಭಾಗದ ಉಸ್ತುವಾರಿಗೆ ಒಬ್ಬ ಆಹಾರ ಉಪನಿರ್ದೇಶಕರು ಒಬ್ಬ ಆಹಾರದ ವಿಭಾಗದ ತಹಶಿಲ್ದಾರರೂ ಇರುತ್ತಾರೆ. ಯೋಜನಾ ವಿಭಾಗದಲ್ಲಿ ಒಬ್ಬ ಜಿಲ್ಲಾ ಯೋಜನಾ ಅಧಿಕಾರಿ ಹಾಗೂ ಉಪನಿರ್ದೇಶಕರು ಮತ್ತು ಒಬ್ಬ ಸಾಂಖ್ಯಿಕ ಉಪಅಧಿಕಾರಿ ಇರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪುರೋಗಮನಕ್ಕಾಗಿ ಒಬ್ಬ ಸಮಾಜ ಕಲ್ಯಾಣ ಅಧಿಕಾರಿ, ಇಬ್ಬರು ಕಚೇರಿ ಅಧೀಕ್ಷಕರು ಇರುತ್ತಾರೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ವಿಭಾಗಕ್ಕೆ ಒಬ್ಬ ಕಚೇರಿ ಅಧೀಕ್ಷರು, ಒಬ್ಬ ಅಭಿವೃದ್ಧಿ ನಿರೀಕ್ಷಕ, ಒಬ್ಬ ಹಿಂದುಳಿದ ವರ್ಗಗಳ ನಿರೀಕ್ಷಕರು (ಇನ್ಸ್‌ಪೆಕ್ಟರ್) ಇರುತ್ತಾರೆ. ಇತರ ಸಮಾಜ ಕಲ್ಯಾಣ ಕಾರ್ಯದ ವಿಭಾಗಕ್ಕೆ ಒಬ್ಬ ಉಪ ನಿರ್ದೇಶಕ, ಒಬ್ಬ ಸಮಾಜ ಕಲ್ಯಾಣ ಅಧಿಕಾರಿ, ಒಬ್ಬ ಕಚೇರಿ ಅಧೀಕ್ಷಕ, ಇಬ್ಬರು ಸಾಮಾಜಿಕ ಪೌಷ್ಠಿಕ ಆಹಾರ ಕಾರ್ಯಕ್ರಮದ ನಿರೀಕ್ಷಕರು ಇರುತ್ತಾರೆ. ಎಲ್ಲ ವಿಭಾಗಗಳಿಗೂ ಅಧೀನ ಸಿ ಮತ್ತು ಡಿ ವೃಂದದ ಸಿಬ್ಬಂದಿಯೂ ಇರುತ್ತಾರೆ.

ಜಿಲ್ಲಾಧಿಕಾರಿಯ ಕಚೇರಿಯಲ್ಲಿರುವ ವಿಶೇಷ ಜಿಲ್ಲಾಧಿಕಾರಿ (ಹಿಂದೆ ಎರಡು ಹುದ್ದೆಗಳಿದ್ದವು; ಜಿಲ್ಲಾ ಪಂಚಾಯತ್ ಸ್ಥಾಪನೆಯಾದ ಮೇಲೆ ಆರ್ಥಿಕ ವಿಸ್ತರಣೆಗೆ ಸಂಬಂಧಿಸಿದ ಹುದ್ದೆ ರದ್ದಾಗಿದೆ)ಗಳು ಕಂದಾಯ ವಿಚಾರಗಳಲ್ಲಿ ಜಿಲ್ಲಾಧಿಕಾರಿಗೆ ಸಹಾಯಕರಾಗಿದ್ದಾರೆ. ಭೂಮಿ, ಭೂಕಂದಾಯ, ನೀರಾವರಿ ತೆರಿಗೆ ಮತ್ತು ಸರಕಾರಕ್ಕೆ ಬರಬೇಕಾದ ಇತರ ಬಾಕಿಗಳ ವಸೂಲಿ, ಭೂಸ್ವಾಧೀನ, ಛಾಪಾಕಾಗದ ಮತ್ತು ನೋಂದಣಿ (ರಿಜಿಸ್ಟ್ರೇಶನ್), ಸಂಘ ಸಂಸ್ಥೆಗಳ ನೋಂದಣಿ ಕಾನೂನು (1960) ಕಾರ್ಯಾಚರಣೆ, ಭಾರತೀಯ ಭಾಗೀದಾರಿ ಕಾನೂನಿನಂತೆ (1932) ವ್ಯಾಪಾರೀ ಸಂಸ್ಥೆಗಳ ನೋಂದಣಿ, ಧಾರ್ಮಿಕ ಮತ್ತು ದತ್ತಿ ಹಾಗೂ ದಾನಗಳ ಉಸ್ತುವಾರಿ, ಭೂಹಿಡುವಳಿಗಳ ಗಣತಿ, ಅರಣ್ಯ, ಬಾಡಿಗೆ ನಿಯಂತ್ರಣ, ಭೂ ಸುಧಾರಣೆ ಹಾಗೂ ನೀರಾವರಿಗೆ ಸಂಬಂಧಿಸಿದ ವಿಷಯಗಳು, ನಗರಭೂಮಿ (ಮಿತಿ ಮತ್ತು ನಿಯಮ), ನಗರದಲ್ಲಿನ ಖಾಲಿ ನಿವೇಶನಗಳ ಮಾರಾಟ ಪ್ರತಿಬಂಧ ಅಧಿನಿಯಮ 1975 ರ ಕಾರ್ಯಾಚರಣೆ ಇವೆಲ್ಲವೂ ವಿಶೇಷ ಜಿಲ್ಲಾಧಿಕಾರಿಯ ಕರ್ತವ್ಯಗಳು. ಇವರಿಗೆ ನೆರವಾಗಲು ಒಬ್ಬ ಪತ್ರಾಂಕಿತ ವ್ಯವಸ್ಥಾಪಕ (ಮ್ಯಾನೇಜರ್), ಇಬ್ಬರು ಲೆಕ್ಕಪತ್ರ ಅಧೀಕ್ಷಕರೂ ಹಾಗೂ ಇತರ ಸಿಬ್ಬಂದಿಯೂ ಇದ್ದಾರೆ.

## ಉಪವಿಭಾಗಾಧಿಕಾರಿ

ಜಿಲ್ಲೆಯಲ್ಲಿ ಧಾರವಾಡ, ಹಾವೇರಿ, ಗದಗ ಮತ್ತು ಸವಣೂರುಗಳಲ್ಲಿ ನಾಲ್ಕು ಉಪವಿಭಾಗಾಧಿಕಾರಿಗಳ ಕಚೇರಿಗಳಿವೆ. (ಪ್ರತೀ ಉಪವಿಭಾಗದಲ್ಲಿ ಬರುವ ತಾಲೂಕುಗಳ ವಿವರ ಹಿಂದೆ ಹೇಳಿದೆ). ಇವರು ಜಿಲ್ಲಾಧಿಕಾರಿಗಳ ಅಧೀನರಾಗಿದ್ದು ತಹಶಿಲ್ದಾರರ ಮೇಲೆ ಹಾಗೂ ಮುನಿಸಿಪಲ್ ಕೌನ್ಸಿಲ್‌ಗಳ ಆಡಳಿತಾಧಿಕಾರಿಗಳ ಮೇಲೆ ಉಸ್ತುವಾರಿಯ ಅಧಿಕಾರ ಹೊಂದಿರುತ್ತಾರೆ. (ಹಿಂದೆ ಇವರನ್ನು 'ಪ್ರಾಂತ ಆಫೀಸರ್' ಎಂದು ಕರೆಯುವುದಿತ್ತು). ಇವರು ಉಪವಿಭಾಗದ ಕಂದಾಯ ಮತ್ತು ಅಭಿವೃದ್ಧಿ ಸಂಬಂಧಿ ಚಟುವಟಿಕೆಗಳ ಉಸ್ತುವಾರಿಯನ್ನೂ ಮಾಡುತ್ತಾರೆ. ಕರ್ನಾಟಕ ಭೂಕಂದಾಯ ಅಧಿನಿಯಮ 1964 ಹಾಗೂ ರಾಜ್ಯದ ಇತರ ಕಾನೂನುಗಳಿಗೆ ಸಂಬಂಧಿಸಿದಂತೆ ಎಲ್ಲ ಕಾನೂನುಗಳ ಕಾರ್ಯಾಚರಣೆಗೆ ಜಿಲ್ಲಾಧಿಕಾರಿಗೆ ಇರುವ ಅಧಿಕಾರ, ಜವಾಬ್ದಾರಿಗಳನ್ನು ಉಪವಿಭಾಗದಲ್ಲಿ ಇವರೂ ಹೊಂದಿರುತ್ತಾರೆ. ಇವರು ಕಂದಾಯ ವಿಚಾರಗಳಲ್ಲಿ ಮೇಲ್ಮನವಿಯ ಪ್ರಥಮ ಅಧಿಕಾರಿಯಾಗಿದ್ದು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ 56 ನೇಯ ಪರಿಚ್ಛೇದದಂತೆ ಇರುವ ಎಲ್ಲ ಅಧಿಕಾರಗಳನ್ನು ಚಲಾಯಿಸಬಲ್ಲ ಕೆಳಹಂತದ ಅಧಿಕಾರಿ ಇವರೇ. ಇವರು ಭೂಸ್ವಾಧೀನ ಅಧಿಕಾರಿಯೂ ಭೂ ಅಭಿವೃದ್ಧಿ ತೆರಿಗೆ (ಬೆಟರ್‌ಮೆಂಟ್ ಲೆವಿ) ಅಧಿಕಾರಿಯೂ ಆಗಿದ್ದಾರೆ. ಕರ್ನಾಟಕ ಭೂ ಸುಧಾರಣಾ ಕಾನೂನಿನಂತೆ (1961) ನೇಮಿಸಲ್ಪಟ್ಟ ಭೂನ್ಯಾಯ ಮಂಡಳಿಗೆ ಅಧ್ಯಕ್ಷರು ಇವರೇ. ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್)ಯು ನಡೆಸುವ ಚಟುವಟಿಕೆಗಳ ಮೇಲ್ವಿಚಾರಣೆ ಇವರಿಗೆ ಸೇರಿದ್ದರೂ 1987 ರ ಜಿಲ್ಲಾ ಪರಿಷತ್ ಕಾನೂನಿನ ನಂತರ ಅಭಿವೃದ್ಧಿಗೆ ಸಂಬಂಧಿಸಿದ ಅಧಿಕಾರಗಳು ಮೊಟಕಾಗಿವೆ. ವಿಧಾನ ಸಭಾ ಚುನಾವಣೆಯಲ್ಲಿ ಒಂದು ಅಥವಾ ಹೆಚ್ಚು ವಿಧಾನ ಸಭಾ ಕ್ಷೇತ್ರಗಳಿಗೆ ಅವರೇ ನಿರ್ವಾಚನ (ರಿಟರ್ನಿಂಗ್) ಅಧಿಕಾರಿ.

ವಿಭಾಗಾಧಿಕಾರಿಯು ನ್ಯಾಯವಿತರಣೆಯ ಅಧಿಕಾರವನ್ನು ಹೊಂದಿದ್ದು ಅವರು ಉಪವಿಭಾಗದ ದಂಡಾಧಿಕಾರಿಯೂ ಹೌದು. ಜಿಲ್ಲಾ ಅಥವಾ ವಿಭಾಗಾಧಿಕಾರಿ ಆದೇಶಿಸಿದಲ್ಲಿ ಯಾವುದೇ ಕಾನೂನು ಪ್ರಕರಣದ ಬಗ್ಗೆ ತನಿಖೆ ಮತ್ತು ವಿಚಾರಣೆ ಮಾಡುವ

ಅಧಿಕಾರ ಅವರಿಗಿದೆ. ತಾಲೂಕುಮಟ್ಟದ ಹಲವಾರು ಸಮಿತಿಗಳಿಗೆ ಅವರು ಪದನಿಮಿತ್ತ ಅಧ್ಯಕ್ಷರು ಅಲ್ಲದೇ ಜಿಲ್ಲಾಮಟ್ಟದ ವಿವಿಧ ಸಮಿತಿಗಳಿಗೆ ಅವರು ಸದಸ್ಯರು. ಉಪವಿಭಾಗಾಧಿಕಾರಿಗೆ ಒಬ್ಬ ನಿರ್ವಾಹಕ (ಶಿರಸ್ತೇದಾರ), ನಾಲ್ವರು ಪ್ರಥಮ ವರ್ಗದ ಸಹಾಯಕರು ಮತ್ತು ಇತರ ಸಿಬ್ಬಂದಿ ವರ್ಗದವರು ನೆರವಿಗೆ ಇರುತ್ತಾರೆ.

### ತಹಶಿಲ್ದಾರ

'ಮಾಮಲೇದಾರ' ರೆಂದು ಪರಿಚಿತರಾಗಿದ್ದ ತಹಶಿಲ್ದಾರರು ತಾಲೂಕಿನ ಮೇಲೆ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಉಪವಿಭಾಗಾಧಿಕಾರಿಯ ಅಧೀನರಾಗಿರುತ್ತಾರೆ. ಅವರು ಉಪವಿಭಾಗಾಧಿಕಾರಿಯ ಮೂಲಕ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರರಾಗಿದ್ದು ತಾಲೂಕಿನಲ್ಲಿ ಸರಕಾರದ ಪ್ರತಿನಿಧಿಯಾಗಿರುತ್ತಾರೆ. ತಾಲೂಕಿನಲ್ಲಿ ಕಂದಾಯ ಸಂಗ್ರಹದ ಜವಾಬ್ದಾರಿ ಇವರದಾಗಿದ್ದು ಕಂದಾಯ ಪರಿವರ್ತನೆ (ಮ್ಯುಟೇಶನ್), ಕಂದಾಯ ಸಂಬಂಧಿ ತಕರಾರುಗಳ ವಿಚಾರಣೆ ಮತ್ತು ತೀರ್ಪುನೀಡುವಿಕೆ, ಹಕ್ಕುಪತ್ರ (ಪಟ್ಟಾ)ಗಳ ತನಿಖೆ, ಹಾಗೂ ಗ್ರಾಮಗಳಲ್ಲಿನ ಬೆಳೆಯ ಪರಿಸ್ಥಿತಿಯನ್ನು ಅಂದಾಜು ಮಾಡುವುದು ಇವರ ಜವಾಬ್ದಾರಿ. ಗ್ರಾಮಲೆಕ್ಕಿಗರೂ ಹೋಬಳಿ(ಸರ್ಕಲ್)ಗಳ ಕಂದಾಯ ನಿರೀಕ್ಷಕರೂ (ರೆವಿನ್ಯೂ ಇನ್ಸ್‌ಪೆಕ್ಟರರೂ) ಇವರ ಅಧೀನರು. ಸರಕಾರಿ ಭೂಮಿಯ ಒತ್ತುವರಿ ಪರಿಹಾರ, ಭೂ ಸುಧಾರಣಾ ಕಾನೂನಿನ ಭಂಗ ಪ್ರಕರಣಗಳ ಬಗ್ಗೆ ಕ್ರಮ ಕೈಗೊಳ್ಳುವುದು, ಕೃಷಿ ಭೂಮಿಗೆ ಮಂಜೂರಾದ ಸಾಲದ ಬಗ್ಗೆ ತನಿಖೆ, ವಸೂಲಾತಿ ಕ್ರಮ, ಅದೇ ರೀತಿ ಕಂದಾಯ, ನೀರಾವರಿ ಶುಲ್ಕ, ಪೋಟ್ ಹಿಸ್ಸಾ ಅಳತೆಯ ವೆಚ್ಚ, ಮುಂತಾದ ಸರಕಾರೀ ಆದಾಯಗಳ ವಸೂಲಾತಿ ಇವರ ಜವಾಬ್ದಾರಿ. ಭೂಕಂದಾಯ ಅಧಿನಿಯಮ, ಭೂಸುಧಾರಣಾ ಅಧಿನಿಯಮ ಹಾಗೂ ತಾಲೂಕಿನ ಆಡಳಿತಕ್ಕೆ ಸಂಬಂಧಿಸಿದ ಇತರ ಕಾನೂನುಗಳನ್ನು ಕಾರ್ಯಗತಗೊಳಿಸುವವರು ಇವರೇ. ಆಹಾರ ಧಾನ್ಯ ಎತ್ತುವಳಿ (ಲೆವಿ), ನ್ಯಾಯ ಬೆಲೆ ಅಂಗಡಿಗಳ ಮೂಲಕ ಆಹಾರ ಹಾಗೂ ಬಳಕೆ ವಸ್ತುಗಳ ಸರಿಯಾದ ವಿತರಣೆ, ಬತ್ತದ ಗಿರಣಿಗಳ ಮಾಲೀಕರ ಮತ್ತು ಸಹಕಾರೀ ಮಾರಾಟ ಸಂಘಗಳ ಬಳಿ ಇರುವ ದಾಸ್ತಾನಿನ ತನಿಖೆ ಇವರದೇ ಹೊಣೆಗಾರಿಕೆಗಳು. ಅವಶ್ಯ ವಸ್ತುಗಳ ಅಧಿನಿಯಮ ಮತ್ತು ತತ್ಸಂಬಂಧ ನಿಯಮಾವಳಿಗಳಂತೆ ತಹಶಿಲ್ದಾರರಲ್ಲಿ ಶಾಸನದತ್ತವಾದ ಅನೇಕ ಅಧಿಕಾರಗಳಿವೆ. ವೃದ್ಧರಿಗೆ ಪಿಂಚಣಿ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಮಾಸಾಶನ ಮಂಜೂರು ಮಾಡುವ ಅಧಿಕಾರ ತಹಶಿಲ್ದಾರರದೇ. ತಮ್ಮ ತಾಲೂಕಿನಲ್ಲಿ ಶಾಂತಿಪಾಲನೆ ಮಾಡುವ ದಂಡಾಧಿಕಾರಿ (ಮೆಜಿಸ್ಟೀರಿಯಲ್)ಯ ಜವಾಬ್ದಾರಿಯೂ ಇವರಿಗಿದೆ. ಚುನಾವಣಾ ಉಪ ಅಧಿಕಾರಿಯಾಗಿ ಇವರು ಮತದಾರರ ಪಟ್ಟಿ ತಯಾರಿಸಬೇಕಲ್ಲದೆ ಚುನಾವಣಾ ಯಂತ್ರದ ಉಸ್ತುವಾರಿ ನೋಡಿಕೊಳ್ಳಬೇಕು. ಇವರ ಕಚೇರಿಯಲ್ಲಿ ಶಿರಸ್ತೇದಾರ ಅಥವಾ ಉಪತಹಶೀಲ್ದಾರರು ಇವರಿಗೆ ನೆರವಾಗಿ ಕಚೇರಿಯ ಕಲಾಪಗಳನ್ನು ನಿರ್ವಹಿಸುತ್ತಾರೆ. ಕಂದಾಯ ನಿರೀಕ್ಷಕರು, ವಿಶೇಷ ಕಂದಾಯ ನಿರೀಕ್ಷಕರು, ದಾಖಲೆಗಳ ನಿರ್ವಾಹಕ (ರೆಕಾರ್ಡ್ ಕೀಪರ್) ಮತ್ತು ಇತರ ನೌಕರರು ಇವರ ಸಿಬ್ಬಂದಿಗೆ ಸೇರಿದ್ದಾರೆ.

### ಕ್ಷೇತ್ರಾಭಿವೃದ್ಧಿ ಅಧಿಕಾರಿ

ಪ್ರತೀ ತಾಲೂಕು ಒಂದು ಸಮುದಾಯ ಅಭಿವೃದ್ಧಿ ಘಟಕವಾಗಿದೆ. ಅದಕ್ಕೆ ಒಬ್ಬ ಕ್ಷೇತ್ರಾಭಿವೃದ್ಧಿ ಅಧಿಕಾರಿ ಇದ್ದು (ಬಿ.ಡಿ.ಓ.) ತಾಲೂಕಿನ ಸಕಲ ಅಭಿವೃದ್ಧಿಯ ಉಸ್ತುವಾರಿ ಅವರಿಗೆ ಸೇರಿದೆ. ಹಿಂದೆ ಇದ್ದ ತಾ॥ ಅಭಿವೃದ್ಧಿ ಮಂಡಳಿಗೆ ಇವರೇ ಕಾರ್ಯನಿರ್ವಾಹಕರಾಗಿದ್ದರು. ಇವರು ಹಿಂದೆ ಇದ್ದ ಜಿಲ್ಲಾ ಪರಿಷತ್‌ಗೆ ಅಧೀನರಾಗಿದ್ದಾಗ ತಾಲೂಕು ಅಭಿವೃದ್ಧಿ ಸಮಿತಿಗೆ ಕಾರ್ಯದರ್ಶಿಗಳೂ ಆಗಿದ್ದರು. ಈಗ ಜಿಲ್ಲಾ ಪಂಚಾಯತ್ ವ್ಯವಸ್ಥೆಯಂತೆ ರೂಪು ತಾಳಿರುವ ತಾಲೂಕು ಪಂಚಾಯತಿಗೆ ಕಾರ್ಯನಿರ್ವಾಹಕ ಅಧಿಕಾರಿಯೂ ಇವರೇ ಆಗಿರುವರು. ಇವರಿಗೆ ನೆರವಾಗಲು ಒಬ್ಬ ಕಚೇರಿಯ ವ್ಯವಸ್ಥಾಪಕ (ಮ್ಯಾನೇಜರ್) ಹಾಗೂ ಇತರ ಸಿಬ್ಬಂದಿ ಇರುತ್ತದೆ.

### ಕಂದಾಯ ನಿರೀಕ್ಷಕ

ಪ್ರತೀ ಹೋಬಳಿಗೆ (ರೆವಿನ್ಯೂ ಸರ್ಕಲ್) ಒಬ್ಬ ಕಂದಾಯ ಅಥವಾ ರಾಜಸ್ವ ನಿರೀಕ್ಷಕ (ರೆವಿನ್ಯೂ ಇನ್ಸ್‌ಪೆಕ್ಟರ್) ಇದ್ದು ಇವರು ತಹಶಿಲ್ದಾರರಿಗೆ ಕಂದಾಯ ವಸೂಲಿಗೆ ನೆರವಾಗುತ್ತಿದ್ದು ಗ್ರಾಮ ಲೆಕ್ಕಿಗನ ಕಾರ್ಯದ ಉಸ್ತುವಾರಿ ನೋಡುತ್ತಾರೆ. ಜಿಲ್ಲೆಯ ಪ್ರತೀ ತಾಲೂಕಿನಲ್ಲಿ ತಲಾ ಎರಡರಂತೆ ನಾಡಕಚೇರಿಗಳನ್ನು ತೆರೆದಾಗ ಅಲ್ಲಿ ಕಂದಾಯ ನಿರೀಕ್ಷಕರ ಬದಲಿಗೆ ಶಿರಸ್ತೇದಾರರನ್ನು ನೇಮಿಸಿದ್ದಾರೆ. ಗ್ರಾಮಲೆಕ್ಕಿಗ ಮತ್ತು ತಹಶಿಲ್ದಾರರ ನಡುವೆ ಕೊಂಡಿಯಂತೆ ಇರುವ ಕಂದಾಯ ನಿರೀಕ್ಷಕ ಭೂಕಂದಾಯ ಅಧಿನಿಯಮ (1964)

ಮತ್ತು ಭೂ ಸುಧಾರಣ ಅಧಿನಿಯಮ 1961 ಇವುಗಳ ಕಾರ್ಯಾಚರಣೆಗೆ ಜವಾಬ್ದಾರರು. ಕಂದಾಯ, ಅಭಿವೃದ್ಧಿ ಶುಲ್ಕ ('ಬೆಟರ್‌ಮೆಂಟ್ ಲೆವಿ') ನೀರಾವರಿ ತೆರಿಗೆ ಹಾಗೂ ಭೂಸಂಬಂಧೀ ಸರಕಾರದ ವರಮಾನ ಹಾಗೂ ತಗಾಯಿ ಸಾಲಗಳ ಕಂತುಗಳನ್ನು ಗ್ರಾಮಲೆಕ್ಕಿಗನು ಸರಿಯಾಗಿ ವಸೂಲು ಮಾಡುವಂತೆ ನೋಡುವುದು, ಗ್ರಾಮ ಲೆಕ್ಕಿಗರ ದಫ್ತರ್ ಮತ್ತು ಲೆಕ್ಕದ ಪುಸ್ತಕಗಳ ವೀಕ್ಷಣೆ, ಸರಕಾರೀ ಭೂಮಿಗಳ ಗಡಿರೇಖೆಗಳ ಪರಿಶೀಲನೆ, ಇವೆಲ್ಲ ಇವರ ಜವಾಬ್ದಾರಿ. ಸರಕಾರ ನೀಡಿದ ಭೂಮಿಯ ಪತ್ರಗಳ ತಯಾರಿಕೆ, ಭೂ ಸ್ವಾಧೀನ ಕ್ರಮಗಳು ಹಾಗೂ ಕಂದಾಯ ಸಂಬಂಧಿ ಇತರ ವಿಚಾರಗಳಿಗೆ ಇವರೇ ಜವಾಬ್ದಾರರು.

**ನಾಡಕಚೇರಿಗಳು**

ಆಡಳಿತವನ್ನು ವಿಕೇಂದ್ರೀಕರಣಗೊಳಿಸುವ ದೃಷ್ಟಿಯಿಂದ ಪ್ರಾಯೋಗಿಕವಾಗಿ ಪ್ರತೀ ತಾಲೂಕಿನ ಒಂದು ಹೋಬಳಿ ಕೇಂದ್ರದಲ್ಲಿ 1986ರ ಆಗಸ್ಟ್ 15ರಂದು ನಾಡಕಚೇರಿಗಳನ್ನು ತೆರೆದರು. ಇದರ ಮುಖ್ಯಸ್ಥ ಒಬ್ಬ ಶಿರಸ್ತೇದಾರ ಅಥವಾ ಉಪತಹಶಿಲ್ದಾರನಿದ್ದು ತಾಲೂಕು ಮಟ್ಟದಲ್ಲಿ ತಹಶಿಲ್ದಾರರಿಗಿದ್ದ 21 ಅಧಿಕಾರಗಳನ್ನು ನಾಡಕಚೇರಿಗೆ ವರ್ಗಾಯಿಸಲಾಯಿತು. ಈ ಕಚೇರಿಯಲ್ಲಿ ಉಪತಹಶಿಲ್ದಾರನಿಗೆ ನೆರವಾಗಲು ಒಬ್ಬ ಸಹಾಯಕ, ಒಬ್ಬ ಬೆರಳಚ್ಚುಗಾರ ಮತ್ತು ಒಬ್ಬ 'ಡಿ' ವೃಂದದ ನೌಕರನಿದ್ದು ವೃದ್ಧರಿಗೆ ಪಿಂಚಣಿ ಹಾಗೂ ಅಂಗವಿಕಲರಿಗೆ ಭತ್ಯೆ ಮಂಜೂರಾತಿ, ಬೆಂಕಿ ಅಥವಾ ಪ್ರವಾಹ ಪೀಡಿತರಿಗೆ ಪರಿಹಾರ ನೀಡಿಕೆ, ಹಕ್ಕು ಬದಲಾವಣೆ (ಮ್ಯುಟೇಶನ್) ಪ್ರಕರಣಗಳ ಇತ್ಯರ್ಥ, ಆಹಾರ ಧಾನ್ಯ ಸಂಗ್ರಹದ ಝಡ್ತಿ ಹಾಗೂ ಜಪ್ತಿ, ಸರಕಾರೀ ವರಮಾನ ವಸೂಲಿಮಾಡಿ ಟ್ರೆಜರಿಗೆ ಜಮಾ ಮಾಡುವುದು, ಡಿ.ಸಿ.ಬಿ. (ತಗಾದೆ, ವಸೂಲಿ ಮತ್ತು ಬಾಕಿ ತೋರಿಸುವ ತಖ್ತೆ) ಲೆಕ್ಕಪತ್ರ ಇಡುವುದು, 1965 ರ ನೀರಾವರಿ ಅಧಿನಿಯಮದಂತೆ ಅಭಿವೃದ್ಧಿ ತೆರಿಗೆ ವಸೂಲಿ, ದೃಢೀಕೃತ ದಾಖಲೆ (ಉತಾರ) ನೀಡುವುದು, ಇವೆಲ್ಲ ನಾಡಕಚೇರಿಗೆ ಒಪ್ಪಿಸಿದ ಕರ್ತವ್ಯಗಳಲ್ಲಿ ಕೆಲವು. 1987ರ ಆಗಸ್ಟ್ 15ರಿಂದ ಪ್ರತೀ ತಾಲೂಕಿನ ಇನ್ನೊಂದು ಹೋಬಳಿಯಲ್ಲಿ ನಾಡಕಚೇರಿಯನ್ನು ತೆರೆದರು. 1986 ರಲ್ಲಿ ನಾಡಕಚೇರಿ ತೆರೆದ ಹೋಬಳಿ ಕೇಂದ್ರಗಳು : ಗರಗ, ಛಬ್ಬಿ, ಅಣ್ಣಿಗೇರಿ, ದುಮ್ಮವಾಡ, ಬೆಟಗೇರಿ, ಹೊಳೆಆಲೂರ, ಕೊಣ್ಣೂರ, ಡಂಬಳ, ಹತ್ತಿಮತ್ತೂರ, ಧುಂಡಶಿ, ಅಕ್ಕಿಆಲೂರ, ಲಕ್ಷ್ಮೇಶ್ವರ, ಸಂಶಿ, ಗುತ್ತಲ, ಮೆಡ್ಲೇರಿ, ರಟ್ಟೀಹಳ್ಳಿ, ಮತ್ತು ಕಾಗಿನೆಲ್ಲಿ. 1987ರಲ್ಲಿ ನಾಡಕಚೇರಿ ತೆರೆದ ಹೋಬಳಿ ಕೇಂದ್ರಗಳು : ಅಳ್ನಾವರ, ಶಿರಗುಪ್ಪ, ತಬಕದಹೊನ್ನಿಹಳ್ಳಿ, ನರೇಗಲ್ಲ, ಬಂಕಾಪೂರ, ಬೊಮ್ಮನಹಳ್ಳಿ, ಕರ್ಜಗಿ, ಕುಪ್ಪೇಲೂರ ಮತ್ತು ಹಂಸಭಾವಿ.

**ಗ್ರಾಮಲೆಕ್ಕಿಗ**

ಹಿಂದೆ ಇದ್ದ ವಂಶಪಾರಂಪರಿಕ ಶಾನುಭಾಗ ಅಥವಾ ಕುಲಕರ್ಣಿಯ ಬದಲಿಗೆ ನೇಮಕವಾದ ಗ್ರಾಮಲೆಕ್ಕಿಗ (ತಲಾಟಿ, ವಿಲೇಜ್ ಎಕೌಂಟೆಂಟ್)ರು ಜಿಲ್ಲಾಧಿಕಾರಿಗಳಿಂದ ನೇಮಿಸಲ್ಪಡುತ್ತಾರೆ. ವಂಶ ಪಾರಂಪರ್ಯದ ಕುಲಕರ್ಣಿ ಹುದ್ದೆ 1961ರಲ್ಲಿ ರದ್ದು ಮಾಡಿದ್ದರು. ಇವರು ಒಂದು ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಬ್ಬರಂತೆ ನೇಮಿಸಲ್ಪಟ್ಟಿದ್ದು ಜಿಲ್ಲಾಧಿಕಾರಿ ಆಜ್ಞಾಪಿಸಿದ ತನ್ನ ಗ್ರಾಮಗಳ ಪರಿಧಿಯ ಸ್ಥಳದಲ್ಲಿ ವಾಸಮಾಡಬೇಕು. ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರಂತೆ ಇವರು ಕಾರ್ಯನಿರ್ವಹಿಸಬೇಕಾಗಿದ್ದು ಸರಕಾರವು ಕಾಲಕಾಲಕ್ಕೆ ಸೂಚಿಸಿದ ಕಂದಾಯ ಸಂಬಂಧಿ ಕಾಗದ ಪತ್ರಗಳನ್ನು ದಾಖಲಾತಿಗಳನ್ನೂ ಸಿದ್ಧಪಡಿಸಬೇಕು. ತಮ್ಮ ಸುಪರ್ದಿಯ ಗ್ರಾಮಗಳ ಕಂದಾಯ ದಫ್ತರನ್ನು ಇವರು ಇಟ್ಟುಕೊಂಡಿದ್ದು ಗ್ರಾಮ ಚಾವಡಿಯಲ್ಲಿ ಕೆಲಸ ಮಾಡುತ್ತಾರೆ. ಸರಕಾರ ಮತ್ತು ಗ್ರಾಮಗಳ ನಡುವಣ ಕೊಂಡಿ ಇವರು. ಕಂದಾಯ ವಸೂಲಿ, ಬೆಳೆಗಳ ನೋಂದಣಿ, ಮಹಜರ್ (ಪಂಚನಾಮೆ)ಗಳ ತಯಾರಿ, ಕಂದಾಯ ವಸೂಲಿಗೆ ನೋಟೀಸು ಜಾರಿ, ಮುಂತಾದವು ಇವರ ಕೆಲಸಗಳು. ಇದಲ್ಲದೆ ಹಿಂದೆ 1983ರ ಕಾನೂನಿನಂತೆ ಮಂಡಲ ಪಂಚಾಯತಿಗೆ, ಈಗ ಗ್ರಾಮ ಪಂಚಾಯತಿಗೆ ಇವರೇ ಕಾರ್ಯದರ್ಶಿಯಾಗಿದ್ದು ಬಿ.ಡಿ.ಓ. ಅವರ ಆದೇಶದಂತೆ ಅಭಿವೃದ್ಧಿ ಕಾರ್ಯಗಳನ್ನು ನಿರ್ದೇಶಿಸಬೇಕು. (ಎಲ್ಲ ಮಂಡಲಗಳಲ್ಲಿ ಇದೇ ವ್ಯವಸ್ಥೆ ಇಲ್ಲ). ಗ್ರಾಮಪಂಚಾಯತಿಯ ನಿರ್ಣಯಗಳ ಕಾರ್ಯಾಚರಣೆ ಇವರ ಜವಾಬ್ದಾರಿ. (1959 ರ ಸ್ಥಳೀಯ ಸಂಸ್ಥೆಗಳ ಕಾನೂನಿನಂತೆ 12,000 ಕ್ಕೂ ಕಡಿಮೆ ಆದಾಯವಿರುವ ಪಂಚಾಯತಿಗೆ ಗ್ರಾಮಲೆಕ್ಕಿಗರೇ ಪದನಿಮಿತ್ತ ಕಾರ್ಯದರ್ಶಿಗಳು). ಮಂಡಲ ಪಂಚಾಯತಿಯಲ್ಲಿ ಇದ್ದ ಹಾಗೂ ಗ್ರಾಮಪಂಚಾಯತಿಯಲ್ಲಿ ಈಗ ಇರುವ ಇವರ ಅಧಿಕಾರದ ವಿವರಗಳನ್ನು ಅಧ್ಯಾಯ 12ರಲ್ಲಿ ನೋಡಬಹುದು. ಹಿಂದಿನ ಕುಲಕರ್ಣಿಯಂತೆ ಇವರಿಗೆ ಆನುವಂಶಿಕ ಭೂಮಿ ಇರದೆ ನಿಯಮಿತ ವೇತನವು ಸರಕಾರದ ಸೇವಾ ನಿಯಮಗಳಂತೆ ಸಲ್ಲುತ್ತದೆ.

**ಗ್ರಾಮ ಸಹಾಯಕರು :** ಹಿಂದೆ ಗ್ರಾಮದಲ್ಲಿ ಇದ್ದ ಪಾಟೀಲ ಮತ್ತು ಕುಲಕರ್ಣಿಗೆ ಸಹಾಯ ಮಾಡಲು ತಳವಾರ, ಹಳಬ, ಓಲೆಕಾರ ಮುಂತಾದ ನೌಕರರಿದ್ದು ಈಗ ಗ್ರಾಮಲೆಕ್ಕಿಗರಿಗೆ ನೆರವಾಗಲು ಗ್ರಾಮಸಹಾಯಕರನ್ನು (ಸಿಪಾಯಿ) ನೇಮಿಸಲಾಗಿದೆ. ಹಿಂದೆ ಪರಂಪರಾಗತವಾಗಿದ್ದ ಈ ಹುದ್ದೆಗಳನ್ನು 1961 ರ ಗ್ರಾಮ ನೌಕರರ ರದ್ದತಿ ಅಧಿನಿಯಮದಂತೆ ರದ್ದು ಮಾಡಿದರು. ಗ್ರಾಮಲೆಕ್ಕಿಗನ ಸಂದೇಶವಾಹಕನಾಗಿ, ದಫ್ತರ ಗಂಟು ಸಾಗಿಸುವ ಹಾಗೂ ಭೂಮಿ ಅಳತೆಯ ಸರಪಣಿ ಮುಂತಾದ ಸಲಕರಣೆಗಳನ್ನು ಸಾಗಿಸುವ ಕೆಲಸ ಗ್ರಾಮ ಸಹಾಯಕರದು. ಇವರಿಗೆ ಮಾಸಿಕ ಭತ್ಯೆ ಸಲ್ಲುತ್ತದೆ.

**ತರಬೇತಿ**

ಧಾರವಾಡದಲ್ಲಿರುವ ಜಿಲ್ಲಾ ಆಡಳಿತ ತರಬೇತಿಯ ಸಂಸ್ಥೆಯು ಮೈಸೂರಲ್ಲಿರುವ ಆಡಳಿತ ತರಬೇತಿ ಸಂಸ್ಥೆಯ ನಿರ್ದೇಶಕ ಉಸ್ತುವಾರಿಯಲ್ಲಿ ನಡೆಯುತ್ತದೆ. ಸರಕಾರೀ ಇಲಾಖೆಗಳಲ್ಲಿರುವ ಎಲ್ಲ 'ಸಿ' ಮತ್ತು 'ಡಿ' ವೃಂದದ ನೌಕರರಿಗೆ ಪ್ರಥಮ ಬಾರಿ ಹುದ್ದೆಗೆ ಸೇರುವಾಗ ತರಬೇತಿ ಮತ್ತು ಪುನಶ್ಚೇತನ ತರಬೇತಿಗಳನ್ನು ಜಿಲ್ಲೆಯಲ್ಲಿ ಇದು ನೀಡುತ್ತದೆ. ಗ್ರಾಮಪಂಚಾಯತಿ ನೌಕರರಿಗೂ, ಗ್ರಾಮಲೆಕ್ಕಿಗರಿಗೂ ಕುಟುಂಬ ಕಲ್ಯಾಣದ ಕ್ಷೇತ್ರ ಕಾರ್ಯಕರ್ತರಿಗೂ, ಅರಣ್ಯ ಇಲಾಖಾ ನೌಕರರಿಗೂ ವಿಶೇಷ ತರಬೇತಿಯನ್ನು ಇಲ್ಲಿ ನೀಡಲಾಗುತ್ತದೆ. ಅಬಕಾರಿ ಇಲಾಖಾ ನೌಕರರಿಗೆ ಅಲ್ಪಾವಧಿ ತರಬೇತಿ ಕಾರ್ಯಕ್ರಮವಿದೆ. ಸಂಸ್ಥೆಯ ಮುಖ್ಯಸ್ಥರು ಪ್ರಾಂಶುಪಾಲರು. ಅವರಿಗೆ ಒಬ್ಬ ಪತ್ರಾಂಕಿತ ತರಬೇತಿದಾರರು ನೆರವು ನೀಡುತ್ತಾರೆ. ಇವರನ್ನು ಈಗ ವೈಸ್ ಪ್ರಿನ್ಸಿಪಾಲ್ ಎಂದು ಹೆಸರಿಸಲಾಗಿದೆ. ಕರ್ನಾಟಕ ಆಡಳಿತ ಸೇವೆ ಮತ್ತು ಭಾರತದ ಆಡಳಿತ ಸೇವೆಯಲ್ಲಿ ಕರ್ನಾಟಕಕ್ಕೆ ನೇಮಿಸಲಾದ ನೌಕರರಿಗೆ ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲೇ ತರಬೇತಿ ನೀಡುತ್ತಾರೆ.

## ಭೂಕಂದಾಯ

ಐತಿಹಾಸಿಕ ಕಾಲದಲ್ಲಿ ಭೂಕಂದಾಯವೇ ಸರಕಾರದ ಮುಖ್ಯ ಆದಾಯದ ಅಂಗವಾಗಿತ್ತು. ಇತರ ಅನೇಕ ತೆರಿಗೆಗಳೂ ಸುಂಕಗಳೂ ರೂಢಿಯಲ್ಲಿ ಇದ್ದರೂ ಭೂಕಂದಾಯ ರಾಜಸ್ವದ ಮುಖ್ಯ ಅಂಗವಾಗಿತ್ತು. ವ್ಯಾಪಾರಕ್ಕೆಂದು ಈ ದೇಶಕ್ಕೆ ಬಂದ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರಕ್ಕಿಂತ ಕಂದಾಯ ವಸೂಲಿಯೇ ದೊಡ್ಡ ಲಾಭದ ಅಂಶವೆಂದು ಮನಗಂಡು ಬಂಗಾಳದ ದಿವಾನಿ ಹಕ್ಕನ್ನು ಪಡೆದುದನ್ನು ಇಲ್ಲಿ ನೆನೆಯಬಹುದಾಗಿದೆ. ರಾಜನು ತಮಗೆ ರಕ್ಷಣೆ ಒದಗಿಸಿದ್ದಕ್ಕೆ ಪ್ರತಿಯಾಗಿ ತಮ್ಮ ಭೂಮಿಯ ಆದಾಯ ಷಷ್ಠಾಂಶ (1/6) ವನ್ನು ಆತನಿಗೆ ಭೂ ತೆರಿಗೆಯಾಗಿ ನೀಡಲಾರಂಭಿಸಬೇಕೆಂದು ಮನು ಹೇಳುತ್ತಾನೆ. ಎಲ್ಲ ಭೂಮಿಯು ರಾಜನಿಗೆ ಸೇರಿದ್ದು ಅವನು ಅದನ್ನು ಉಪಭೋಗಿಸಲು ಜನರಿಗೆ ಕೊಟ್ಟು ಕೃಷಿಕರ ಮೇಲೆ ಕಂದಾಯ ಹೇರಿದರೆಂದು ಹೇಳುವ ಅಭಿಪ್ರಾಯವೂ ಇದೆ. ಒಂದು ರಾಜ್ಯವನ್ನು ಒಬ್ಬ ರಾಜ ಗೆದ್ದುಕೊಂಡಾಗ ಎರಡನೇಯ ವಿಧಾನದಿಂದ ಕಂದಾಯ ಗೊತ್ತುಮಾಡಿದ್ದು ನಿಜವಾಗಿರಬಹುದು. ಆದರೆ ಮೂಲತಃ ಭೂಮಿಯು ಅದನ್ನು ಕೃಷಿಗೆ ಸಿದ್ಧಮಾಡಿದವರಿಗೇ ಸೇರಿದ್ದು, ತಮ್ಮ ವಿತ್ತಜೀವಿತಗಳ ರಕ್ಷಣೆಗೆ ಸರಕಾರ, ರಾಜತ್ವ ಎಂಬ ವ್ಯವಸ್ಥೆ ಮೂಡಿದಾಗ, ಅಥವಾ ಜನರೇ ಸಾಮೂಹಿಕವಾಗಿ ಮೂಡಿಸಿದಾಗ ಕಂದಾಯ ಕೊಡುವ ನಿರ್ಣಯ ಮಾಡಿರಬೇಕು.

ಮುಂದೆ ಕೃಷಿ ವಿಸ್ತರಣೆಗಾಗಿ ಪಾಳು ನೆಲದಲ್ಲಿ ಕೃಷಿಯನ್ನು ಮಾಡಲು ಉತ್ಸುಕರಾದವರಿಗೋ ಹೊಸ ವಲಸೆಗಾರರಿಗೋ ಬುದ್ಧಿವಂತರಾದ ಅಗ್ರಹಾರದ ಬ್ರಾಹ್ಮಣರಿಗೋ ಕೊಟ್ಟುದಿದೆ. ಅಂಥವರಿಗೆ ಕೆಲವು ವರ್ಷ ಕಂದಾಯದಲ್ಲಿ ವಿನಾಯತಿ ಇರುತ್ತಿತ್ತು. ರಾಜನಿಗೆ ತೃಪ್ತಿ ನೀಡಿದ ಸೇವೆಗಾಗಿ (ಧಾರ್ಮಿಕ ಅಥವಾ ಇನ್ನಾವುದಾದರೂ) ಭೂಮಿಯನ್ನು ಉಂಬಳಿಯಾಗಿ ನೀಡಿದ್ದಿದೆ. ಕಂದಾಯವಿಲ್ಲದೆ ನೀಡಿದ 'ಸರ್ವಮಾನ್ಯ' ಭೂಮಿಗಳೂ ಉಂಟು; ಅಥವಾ ನಾಮ ಮಾತ್ರ ಕಂದಾಯಕ್ಕೆ (ಕ್ವಿಟ್ ರೆಂಟ್)ಗೆ ಭೂಮಿ ನೀಡಿ ಧಾರ್ಮಿಕ, ರಾಜಕೀಯ, ಸೈನಿಕ, ಮುಂತಾದ ಸೇವೆಗಳನ್ನು ಮಾಡುವ ಕಟ್ಟುಪಾಡುಗಳನ್ನು ಸರಕಾರ ಹೊರಿಸಿದ್ದೂ ಉಂಟು. ದೇವಾಲಯದ ಸೇವೆ, ಧಾರ್ಮಿಕ ಅಥವಾ ಶೈಕ್ಷಣಿಕ ಸೇವೆ (ಅಗ್ರಹಾರಗಳ ಬ್ರಾಹ್ಮಣರು)ಗಾಗಿ ನೀಡಿದ ಭೂಮಿಗಳಿಗೆ ಕಂದಾಯದ ವಿನಾಯತಿ ಇತ್ತು. ಯುದ್ಧದಲ್ಲಿ ಮಡಿದ ವೀರರ ಕುಟುಂಬೀಯರಿಗೆ 'ಬಾಳ್ಗಳ್ಚು' ('ಖಡ್ಗ ತೊಳೆಯುವ' ಉದ್ದೇಶ) ಅಥವಾ ನೆತ್ತರು ಕೊಡಿಗೆ ('ನೆತ್ತರುಕೆಯ್')ಯಾಗಿ ಭೂಮಿಯನ್ನು ನೀಡಿದ್ದು ವೀರಗಲ್ಲುಗಳಲ್ಲಿ ಕಂಡುಬಂದರೂ ಅದಕ್ಕೆ ಕಂದಾಯವಿರಲಿಲ್ಲವೆಂದು ಹೇಳಲಾಗದು. ಪೇಶ್ವೆಯರ ಕಾಲದಲ್ಲಿ ಯುದ್ಧದಲ್ಲಿ ಸತ್ತವರ ಕುಟುಂಬಕ್ಕೆ 'ಬಾಲ್‌ಪರ್ವೇಶಿ' ಎಂಬುದಾಗಿ ಭೂಮಿಯನ್ನು ದಾನಮಾಡುತ್ತಿದ್ದರು. ಅದರ ಕಂದಾಯ ಅವರಿಗೆ ಸಲ್ಲುತ್ತಿತ್ತು. 'ಮೊಕಾಸಾ' ಎಂಬ ನಾಮ ಮಾತ್ರ ಕಂದಾಯದ ಭೂಮಿಯೂ ದಾನವಾಗಿ ಸಲ್ಲುವುದಿತ್ತು.

ದಂಡನಾಯಕರಿಗೆ, ಪಾಳಯಗಾರರಿಗೆ, ದೇಸಾಯಿ ಅಥವಾ ದೇಶಮುಖರಿಗೆ ಹಲವು ಗ್ರಾಮಗಳ ಗುಂಪು, ನಾಡು, ದೇಶ (ಒಂದು ಆಡಳಿತ ಘಟಕ) ನೀಡಿ, ಕಂದಾಯ ಸಂಗ್ರಹಿಸುವ ಜವಾಬ್ದಾರಿ ವಹಿಸಿದ್ದುಂಟು. ಅವರು ಕಂದಾಯವನ್ನು ಸಂಗ್ರಹಿಸಿ ಕಪ್ಪ ಇಲ್ಲವೇ ಪೊಗದಿಯ ರೂಪದಲ್ಲಿ ಕೊಡುವುದು, ಜೊತೆಗೆ ರಾಜನಿಗಾಗಿ ಖಚಿತ ಸಂಖ್ಯೆಯ ಸೈನ್ಯವನ್ನು ಅವನು ಕರೆದಾಗ ಒಯ್ಯಲು ತರಬೇತಿ ಮಾಡಿ ಸಿದ್ಧವಿಡುವುದು ಅವರ ಜವಾಬ್ದಾರಿ. ಸೇನೆಯಲ್ಲದ ಕೇವಲ ಆಡಳಿತದ ಜವಾಬ್ದಾರಿ ಮಾತ್ರ ಹೊತ್ತು ಭೂಮಿಯನ್ನು ಹೊಂದಿದ್ದ ಕರಣಿಕ (ಕುಲಕರ್ಣಿ) ಇಲ್ಲವೆ ಪಾಂಡೆ, ನಾಡಕರ್ಣಿ, ದೇಶಪಾಂಡೆ ಮುಂತಾದ ಅಧಿಕಾರಿಗಳಿದ್ದರು. ಗೌಡ ಅಥವಾ ಪಾಟೀಲ, ದೇಸಾಯಿ ಅಥವಾ ದೇಶಮುಖ ಅಥವಾ ನಾಡಗೌಡ ಸೇವೆಯನ್ನು ಭರ್ತಿಮಾಡಿ ಕಾದಿಡುವ ಜವಾಬ್ದಾರಿಯನ್ನೂ ಹೊಂದಿದ್ದರು. ವಿದ್ವಾಂಸರಿಗೆ, ವೈದ್ಯರಿಗೆ, ಸಂಗೀತಗಾರರಿಗೆ, ಕಲಾವಿದರಿಗೆ, ದೇವಾಲಯದ ಸೇವಕರಿಗೆ (ಅರ್ಚಕ, ಅಡಿಗೆಯವ, ಓಲಗದವ, ಕಸುಗುಡಿಸುವವ, ದಂಡಿಗೆ ಹೊರುವವ, ಹೀಗೆ ಎಲ್ಲರಿಗೂ) ಭೂಮಿಯನ್ನು ಉಂಬಳಿಯಾಗಿ ಕೊಡುತ್ತಿದ್ದರು. ಅವರಿಗೆ ಕಂದಾಯ ಪೂರ್ತಿ ಇರಬಹುದು, ಅಥವಾ ನಾಮಮಾತ್ರ ಇರಬಹುದು. ವತನು, ಜಾಗೀರು, ಇನಾಮು, ಉಂಬಳಿ ಮುಂತಾದ ಹೆಸರಿನ ಭೂಮಿಗಳು ಇಂಥವು.

ಭೂಮಿಯ ಅಭಿವೃದ್ಧಿಗಾಗಿ ಸರಕಾರವೇ ಕೆರೆಗಳನ್ನು ಕಟ್ಟಿಸಿದ ಉದಾಹರಣೆಗಳುಂಟು. ಬಾದಾಮಿ ಚಾಳುಕ್ಯರ ಶಿಗ್ಗಾಂವಿ ತಾಮ್ರಪಟದಲ್ಲಿ 14 ಕೆರೆಗಳ ಉಲ್ಲೇಖವಿದೆ. ಕಟ್ಟಿದ ಕೆರೆಯ ರಕ್ಷಣೆ ದುರಸ್ತಿಗಾಗಿ ಸರಕಾರವೇ ವ್ಯವಸ್ಥೆ ಮಾಡಿದ್ದುಂಟು. ಕೆರೆಕಟ್ಟಿದವನಿಗೆ ಆರಂಭದ ಕೆಲವು ವರ್ಷ, ಅಥವಾ ಕೆರೆಯ ಪರಿಸರದ ನೀರಾವರಿ ಭೂಮಿಯ ಕೆಲವು ಭಾಗದಲ್ಲಿ ಕಾಯಂ ಆಗಿ ಕಂದಾಯ ವಿನಾಯತಿ ನೀಡಿದ್ದುಂಟು. ನೀರಲಗಿ ಎಂಬ ಊರಿನ ಮನೆ ತೆರಿಗೆಯನ್ನು ಆ ಊರ ಪಿರಿಯ ಕೆರೆಯ ದುರಸ್ತಿಗಾಗಿ 1052 ರಲ್ಲಿ ಸರಕಾರ ಬಿಟ್ಟುಕೊಟ್ಟಿತು. ಡಂಬಳದ ಕೆರೆಯ ದುರಸ್ತಿಗೆ 'ಪಣ್ಣಯ' ಎಂಬ ಸುಂಕವನ್ನು ವಸೂಲಿ ಮಾಡಿ ಅಲ್ಲಿಯ ವ್ಯಾಪಾರಸ್ಥರ ವಶಕ್ಕೆ ಕೊಡಲಾಗಿತ್ತು (1184). 1818 ರಲ್ಲಿ ಜಿಲ್ಲೆಯಲ್ಲಿ 3150 ಕೆರೆಗಳು ಇದ್ದುವೆಂದು ಬ್ರಿಟಿಷರ ವರದಿ ಹೇಳುತ್ತದೆ.

ಭೂಮಿಯನ್ನು ಅಳತೆ ಮಾಡುವ 153 ಅಂಗುಲ ಉದ್ದಕ್ಕೆ ಸಮನಾದ ಅಳತೆಯನ್ನು ಬಾದಾಮಿ ಚಾಳುಕ್ಯರು ರೂಪಿಸಿದ್ದು ನೆರೆಯ ಬಳ್ಳಾರಿ ಜಿಲ್ಲೆಯ ಕುರುಗೋಡಿನ ಶಾಸನದಿಂದ ಕಂಡು ಬಂದಿದೆ. ಇದು ಇಮ್ಮಡಿ ಪುಲಿಕೇಶಿಯ ಕಾಲದ್ದು (640). ಕಲ್ಯಾಣದ ಚಾಳುಕ್ಯರ ಕಾಲದ ಒಂದು ಅಳತೆಗೋಲಿನ ಪ್ರಾತಿನಿಧಿಕ ರೇಖಾ ಕೆತ್ತನೆಯನ್ನು ಡಂಬಳದ ಸೋಮೇಶ್ವರ ದೇವಾಲಯದಲ್ಲಿ ಗುರುತಿಸಿದ್ದು ಇದು 12 ನೇಯ ಶತಮಾನದ್ದಾಗಿದೆ; 275 ಅಂಗುಲ ಉದ್ದವಿದೆ. ರೋಣ ತಾಲೂಕಿನ ಕೋಡಿಕೊಪ್ಪದ ಮೂಲಬ್ರಹ್ಮೇಶ್ವರ ದೇಗುಲದ ಹೊರಭಿತ್ತಿಯ ಮೇಲೆ ಕಲ್ಯಾಣದ ಚಾಳುಕ್ಯರ ಕಾಲದ ಒಂದು ಅಳತೆಮಾನವಿದ್ದು ಇದು 130 ಗೇಣಿನಷ್ಟಿತ್ತು. ಮತ್ತರು, ಕಮ್ಮ (ಕಂಬ), ಮತ್ತು ನಿವರ್ತನ ಎಂಬ ಭೂಮಾನಗಳು ವಿಜಯನಗರದ ಮೊದಲು ಕಾಣಬರುತ್ತವೆ. ಕಮ್ಮ ಎಂದರೆ 0.166 ಗುಂಟೆ ಹಾಗೂ ಮತ್ತರು ಸುಮಾರು 3.75 ಎಕರೆಗೆ ಸಮ ಎಂದು ಲಕ್ಷ್ಮೇಶ್ವರದ 1123 ರ ಶಾಸನದಿಂದ ರಾಜೇಂದ್ರಪ್ಪ ಎಣಿಕೆ ಹಾಕಿದ್ದಾರೆ. ಒಂದು ಮತ್ತರಿಗೆ 900 ಕಮ್ಮ ಎಂದು ತಿಳಿದು ಬಂದಿದೆ. ಲಿಂಗಮುದ್ರೆಯ ಕಲ್ಲು, ವಾಮನಮುದ್ರೆಯ ಕಲ್ಲು ಎಂಬ ಹೆಸರಿನ ಬಾಂದು ಇಲ್ಲವೆ ಗಡಿಕಲ್ಲು ಕೂಡ ಶಾಸನಗಳಲ್ಲಿ ಕಂಡುಬಂದಿದೆ. ಭೂಮಿಯನ್ನು ಅಳೆದು ಪ್ರತೀಯೊಂದು ಹಿಡುವಳಿಯ ಕಂದಾಯವನ್ನು ಗೊತ್ತು ಮಾಡುವ ಪದ್ಧತಿ 1500 ವರ್ಷಗಳಷ್ಟು ಹಿಂದಿನಿಂದಲೂ ಧಾರವಾಡ ಜಿಲ್ಲೆಯಲ್ಲಿ ಇತ್ತು. ಭೂಮಿಯ ದಫ್ತರನ್ನು 'ಕಡಿತ' ಎಂದು ಕರೆಯುತ್ತಿದ್ದು ಕಲ್ಯಾಣ ಚಾಳುಕ್ಯ ಹಾಗೂ ಹೊಯ್ಸಳ ಶಾಸನಗಳಲ್ಲಿ ಇದರ ಉಲ್ಲೇಖವಿದೆ. ಇವನ್ನು 'ಕಡಿತವರ್ಗಡೆ' (ಪೆರ್ಗಡೆ-ಹೆಗ್ಗಡೆ) ಎಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದ. ವಿಜಯನಗರದ ಕಾಲದಲ್ಲಿ ಬೀಜವರಿ ಎಂದರೆ ಹೊಲದ ಬಿತ್ತಿಗೆ ಸಾಮರ್ಥ್ಯದ ಬಳಕೆಯಂತೆ ಭೂಮಿಯ ಗಾತ್ರವನ್ನು ತಿಳಿಸುವ ರೂಢಿಯಿತ್ತು. 'ಕೂರಿಗಿ', 'ಗುಳ' ಎಂಬ ಅಳತೆಗಳನ್ನೂ ಶಾಸನಗಳು ಉಲ್ಲೇಖಿಸುತ್ತವೆ. 32 ಗುಳ ಒಂದು ಕೂರಿಗೆಗೆ ಸಮನಾಗಿತ್ತು. ಮಾರು ಇನ್ನೊಂದು ಅಳತೆ. ಅಠವಣೆ ಎಂದು ಕಂದಾಯ ಇಲಾಖೆಗೆ ಹೆಸರಿತ್ತು.

ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಭೂಮಿಯನ್ನು ವ್ಯವಸ್ಥಿತವಾಗಿ ಅಳತೆ ಮಾಡಿ ರಾಯರೇಖೆ ಎಂದು ಪ್ರಸಿದ್ಧವಾದ ಕಂದಾಯ ಪದ್ಧತಿ ರೂಪಿಸಿದ್ದರು. ಬಂಕಾಪುರದ ಭೂಕಂದಾಯ ದಾಖಲೆಗಳನ್ನು ಗಮನಿಸಿದ ಡಾ: ಕೆ.ವಿ. ಕುರಿಯನ್ ಹೇಳುವಂತೆ, ಸೂಲೂ ಅಪ್ಪಾಜಿ ಎಂಬಾತನು ಕೃಷ್ಣದೇವರಾಯನ ಕಾಲದಲ್ಲಿ ಈ ಕೆಲಸ ಆರಂಭಿಸಿ ಅಚ್ಯುತರಾಯನ ಕಾಲದಲ್ಲಿ ಮುಗಿಸಿದ್ದು (1530-42) ಅವನ ಕೆಲಸವು ಮುಸ್ಲಿಂ ಇತಿಹಾಸದಲ್ಲಿ ಪ್ರಸಿದ್ಧವಾದ ಮಲಿಕ್ ಅಂಬರನ ಕೆಲಸಕ್ಕೆ ಸಮನೆಂದು ಕುರಿಯನ್ ಹೇಳುತ್ತಾರೆ. ಇದಲ್ಲದೆ ಬಹಮನಿ ಅರಸರ ಕಾಲದಲ್ಲಿ ಅವರ ವಶವಿದ್ದ ಪ್ರದೇಶದಲ್ಲಿ ವಿಠಲ ಪಂತ ಎಂಬಾತನು ಹೂಡಿದ್ದ ಕಂದಾಯ ನಿರ್ಣಯ ಕೆಲವು ಪ್ರದೇಶಗಳಲ್ಲಿ ಜಾರಿಯಲ್ಲಿತ್ತು. ವಿಠಲಪಂತೀ ಅಳತೆಗೋಲು ಅಮ್ಮಿನಭಾವಿಯ ಒಂದು ಸ್ಮಾರಕದಲ್ಲಿ ಗುರುತಿಸಲ್ಪಟ್ಟಿದೆ. ಈ

ಜಿಲ್ಲೆಯ 13 ಸಬ್ ಡಿವಿಜನ್‌ಗಳಲ್ಲಿ ರಾಯರೇಖೆ ಮತ್ತು ಐದು ಸಬ್ ಡಿವಿಜನ್‌ಗಳ ವಿಠಲ ಪಂತನನ ಪದ್ಧತಿ ಬ್ರಿಟಿಷರು ಬಂದಾಗ ರೂಢಿಯಲ್ಲಿತ್ತು. ಬ್ರಿಟಿಷರು ರಾಯರೇಖಾ ಮಾರು ಮತ್ತು ವಿಠಲ ಪಂತೀ ಮಾರು ಎಂಬ ಮಾಪನಗಳನ್ನು ಗುರುತಿಸಿದ್ದಾರೆ.

ವಿಜಯನಗರದ ಕಾಲದಲ್ಲಿ 'ಮಾರು' ಎಂಬುದು ಒಂದು ವಿಶಿಷ್ಟ ಮೊತ್ತದ ಕಂದಾಯವನ್ನು ತರುವ ಭೂಮಿ. ಭೂಮಿಯ ಫಲವಂತಿಕೆ ಅಥವಾ ಫಲದಾಯಿತ್ವಕ್ಕನುಗುಣವಾಗಿ 'ಮಾರ್'ನಲ್ಲಿ ವ್ಯತ್ಯಾಸವಾಗುತ್ತಿತ್ತು. ಕೂರಿಗೆ ಎಂಬ 4 ರಿಂದ 5 ಎಕರೆಗೆ ಸಮಾನ ಮಾನವೂ ಬಳಕೆಯಾಗುತ್ತಿತ್ತು. 'ವೀಜಿ' ಎಂಬ ಮೊದಲ ದರ್ಜೆ ಭೂಮಿಯ ಒಂದು ಮಾರ ನಾಲ್ಕು ಕೂರಿಗೆ, ಎಂದರೆ 16 ರಿಂದ 20 ಎಕ್ರೆಯಷ್ಟು ಆಗುತ್ತಿದ್ದು, ಎರಡನೇಯ ವರ್ಗದ ಒಂದು ಮಾರಿಗೆ ಎಂಟು ಕೂರಿಗೆ, ಎಂದರೆ 24 ರಿಂದ 30 ಎಕ್ರೆಗೆ ಸಮನಾದ ಭೂಮಿ ಆಗುತ್ತಿತ್ತು, ಮೂರನೇಯ ವರ್ಗದ ಭೂಮಿ ಕೀಳುಮಟ್ಟದ್ದಾಗಿ ಒಂದು ಮಾರಿಗೆ ಎಂಟು ಕೂರಿಗೆ ಎಂದರೆ 32 ರಿಂದ 40 ಎಕರೆಯಷ್ಟು ಭೂಮಿ ಆಗುತ್ತಿತ್ತು. ಬ್ರಿಟಿಷ್ ಅಧಿಕಾರಿಗಳ ವರದಿಯಂತೆ ಮಾರಿಗೆ ಗೊತ್ತುಪಡಿಸಿದ 'ರಖಂ' ನ್ಯಾಯಪರವಾಗಿತ್ತು. 1840 ರಲ್ಲಿ ಇದ್ದ ಬ್ರಿಟಿಷ್ ಕಲೆಕ್ಟರ್ ತಿಳಿಸುವಂತೆ ಬ್ರಿಟಿಷರ ಆಗಮನದವರೆಗೆ ಮುಂದಿನ ಎಲ್ಲ (ಮುಸ್ಲಿಂ, ಮರಾಠಾ ಇತ್ಯಾದಿ) ಆಡಳಿತಗಾರರು ಇದರ ಆಧಾರದಿಂದಲೇ ಕಂದಾಯ ನಿರ್ಣಯಿಸುತ್ತಿದ್ದರು. ವಿಜಯನಗರದ ಕಾಲದಲ್ಲಿ ಕೆರೆಗಳನ್ನು ಊರವರೇ ದುರಸ್ತಿ ಮಾಡಿಕೊಳ್ಳುತ್ತಿದ್ದರು. ಅಂಥ ಪ್ರಸಂಗಗಳಲ್ಲಿ ಮೂರರಿಂದ ಐದು ವರ್ಷ ಕಂದಾಯದಲ್ಲಿ ಮಾಫಿ (ಕಡಿತ) ಮಾಡುವಂತೆ ಕೌಲು (ಒಪ್ಪಂದ)ಗಳನ್ನು ಮಾಡಿಕೊಳ್ಳುತ್ತಿದ್ದರು. ಅನಾವೃಷ್ಟಿ, ಕ್ಷಾಮಗಳು ಬಂದಾಗ ಕಂದಾಯದಲ್ಲಿ ವಿನಾಯತಿ ನೀಡುವ ಪದ್ಧತಿ ವಿಜಯನಗರದ ಅರಸರ ಕಾಲದಲ್ಲಿ ಜಾರಿಯಲ್ಲಿ ಇತ್ತು, ಎಂಬ ಸಂಗತಿ ಜಿಲ್ಲೆಯಿಂದ ಹೊರಗಿನ ಪ್ರದೇಶಗಳ ಶಾಸನದಿಂದ ತಿಳಿಯುತ್ತದೆ. ವಿಜಯನಗರದ ಕಾಲದಲ್ಲೇ ಜಿಲ್ಲೆಯಲ್ಲಿ ಬಹಳಷ್ಟು ಕೆರೆಗಳ ರಚನೆಯಾಗಿರಬೇಕೆಂಬ ಅಭಿಪ್ರಾಯ ಬಂಕಾಪುರದ ಕಂದಾಯ ದಾಖಲೆಗಳಿಂದ ತಿಳಿಯುತ್ತದೆ. 14 ನೇಯ ಶತಮಾನದಲ್ಲಿ 12 ವರ್ಷಗಳ ಕಾಲ ಸತತವಾಗಿ ಬಂದ ಬರವೇ ಇದಕ್ಕೆ ಕಾರಣ. ಇದಲ್ಲದೆ ಬ್ರಿಟಿಷರು ಮುಂದೆ ಮಾಡಿದ ಕಂದಾಯ ನಿರ್ಣಯ (ಸೆಟ್ಲ್‌ಮೆಂಟ್) ವಿಜಯನಗರದ ಕಾಲದ ಕಂದಾಯ ಪದ್ಧತಿಯ ಪುನರಾವೃತ್ತಿಯೇ ಆಗಿತ್ತೆಂದು ಕುರಿಯನ್ ಹೇಳುತ್ತಾರೆ.

1670 ರಲ್ಲಿ ಆದಿಲ್‌ಷಾಹಿಗಳು ಕಂದಾಯವನ್ನು ಪುನರಾಕರಣೆ ಮಾಡಿದರು. ಅವರು ನಿರ್ಣಯಿಸಿದ ಕಂದಾಯದ ವ್ಯವಸ್ಥೆ 'ಅಸಲ್' ಎಂದು ಪರಿಚಿತವಾಗಿತ್ತು. ಮುಂದೆ ಈ ಪ್ರದೇಶ ಮುಘಲರ ಕೈಗೆ (1686) ಬಂದರೂ ಅವರ ಅಧೀನನಾದ ಸವಣೂರಿನ ನವಾಬನ ಆಡಳಿತಕ್ಕೆ ಜಿಲ್ಲೆಯು ಬಹುಮಟ್ಟಿಗೆ ಸೇರಿದ್ದರಿಂದ ಅವನು ವಿಜಾಪುರದವರ ಪದ್ಧತಿಯನ್ನೇ ಮುಂದುವರಿಸಿದನು. ಈ ಪದ್ಧತಿಯಲ್ಲಿ ಉತ್ತಮ ವರ್ಗದ ಮಾರ್‌ನಲ್ಲಿ 16 ಎಕ್ರೆ ಇದ್ದರೆ ಕೀಳುವರ್ಗದ ಮಾರ್‌ನಲ್ಲಿ 80 ಎಕ್ರೆಯಷ್ಟು ಭೂಮಿ ಇತ್ತು. ಒಂದು ಮಾರಿಗೆ ಗೊತ್ತುಪಡಿಸಿದ ದರವು ಐನಾತಿ ('ರಖಂ' ಬದಲಿಗೆ) ಎನಿಸಿತ್ತು. ಮುಂದೆ ನವಾಬ್ ಅಬ್ದುಲ್ ಹಕಿಂಖಾನನು (1749) ಇದನ್ನು ಎರಡುಪಟ್ಟು ಮಾಡಿದನು. ಪೇಶ್ವೆಯರ ಕಾಲದಲ್ಲಿ ಇದು ಮೂರು ಪಟ್ಟಾಯಿತು. 33 ಗ್ರಾಮ ('ಮೌಜೆ') ಮತ್ತು 11 ಉಪಗ್ರಾಮ ('ಮಜರೆ')ಗಳನ್ನು ಒಳಗೊಂಡ ಧಾರವಾಡ ಪರಗಣೆಯ ಒಟ್ಟು ಭೂಕಂದಾಯ ಐನಾತಿಯಂತೆ 6,000 ರೂ. ಇದ್ದು ಹಕೀಂಖಾನನ ಕಾಲದಲ್ಲಿ 12,000 ರೂ. ಆಗಿದ್ದು ಪೇಶ್ವೆಯರ ಕಾಲದಲ್ಲಿ 18,000 ಆಯಿತು ಎಂದು ಡಾ|| ಸಾವಂತ್ ಹೇಳಿದ್ದಾರೆ. ಈ ಧಾರವಾಡ ಪರಗಣೆಯಲ್ಲಿ ಒಟ್ಟು 602 ಮಾರು ಹಾಗೂ ಆರು ಬೇಳೆ ಭೂಮಿಯಿತ್ತು ಎಂದು ಅವರು ತಿಳಿಸಿದ್ದಾರೆ. (ಬೇಳೆ ಮಾರಿನ ಅಷ್ಟಾಂಶ-1/8 )

ಪೇಶ್ವೆಯರ ಕಾಲದಲ್ಲಿ ಭೂಮಿಯು 'ಪಟ್ಟಿ' ಎಂಬ ಒಳ್ಳೆಯ ಮಳೆಯ ಭೂಮಿ, 'ಕುಳ್' ಎಂಬುದು ಕೆರೆಯಿಂದ ನೀರಾವರಿ ಹೊಂದುವ ಭೂಮಿ, ಹಾಗೂ ಬಯಲುಸೀಮೆಯ ಥಲ್ (ಸ್ಥಳ) ಮತ್ತು ಹಕ್ಕಲ್ (ಒಣ) ಭೂಮಿಗಳೆಂದು ನಾಲ್ಕು ವರ್ಗಗಳಲ್ಲಿ ವಿಭಕ್ತವಾಗಿತ್ತು. ಪಾಟೀಲ, ಕುಲಕರ್ಣಿಗಳಲ್ಲಿ ಕೆಲವರಿಗೆ ಕಂದಾಯವಿಲ್ಲದ ಸರ್ವಮಾನ್ಯ ಜಮೀನನ್ನು ಕೊಡಲಾಗಿತ್ತು. ಕೆಲವೊಂದು ಇಂಥ ಅಧಿಕಾರಿಗಳಿಂದ ಕಡಿಮೆ ದರದ ('ಜುಡಿ') ಕಂದಾಯ ('ಕ್ವಿಟ್‌ರೆಂಟ್') ವಸೂಲಾಗುತ್ತಿತ್ತು. ಧಾರವಾಡ ಊರಲ್ಲಿನ ಪಟ್ಟಿ ಭೂಮಿ $16\frac{1}{2}$ ಮಾರಿನಷ್ಟು ಇದ್ದು ಅದರಿಂದ ಬರುವ ಕಂದಾಯ 3,500 ರೂ. ಆಗಿತ್ತು. ಅದೇ 10 ಮಾರ್ ಥಲ್ ಭೂಮಿಯಿಂದ 450 ರೂ. ಕಂದಾಯ ಬರುತ್ತಿತ್ತು. ನವಲೂರಿನಲ್ಲಿ ಇದ್ದ ಸುಮಾರು $20\frac{1}{2}$ ಮಾರುಪಟ್ಟಿ ಭೂಮಿಯಿಂದ ಒಟ್ಟು 9,250 ರೂ. ಕಂದಾಯ ಬರುತ್ತಿತ್ತು. ನವಲೂರಿನದೇ 36 ಮಾರು ಥಲ್ ಭೂಮಿಯಿಂದ $1,012\frac{1}{2}$ ರೂ. ಕಂದಾಯ ಬಂದರೆ, $37\frac{3}{4}$ ಮಾರು ಕುಳ್ ಭೂಮಿಯಿಂದ 531 ರೂ. ಕಂದಾಯ ಬರುತ್ತಿತ್ತು. ಇದು ಒಂದು ಪರಗಣೆಯ ಮಾದರಿ ಆಕರಣೆ ಮಾತ್ರ.

"ಹಳೆಯ ಭೂಮಿಯ ಅಳತೆಯು ವಿಸ್ತಾರದ ಅಳತೆಯಾಗಿರದೆ ಬೀಜವರಿ, ಎಂದರೆ ಒಂದು ವಿಶಿಷ್ಟ ಪರಿಮಾಣದ ಬೀಜವನ್ನು ಬಿತ್ತಲು ಬೇಕಾಗುವ ಕ್ಷೇತ್ರದ ಲೆಕ್ಕವಾಗಿತ್ತು" ಎಂದು ಬ್ರಿಟಿಷ್ ಅಧಿಕಾರಿ ಹೇಳಿದ್ದರೂ ಇದು ಪೂರ್ತಿ ನಿಜವಲ್ಲ. ಆದರೆ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಭೂಮಿಯ ಅಳತೆಗೆ ಭಿನ್ನಭಿನ್ನ ಮಾಪನಗಳಿದ್ದು ಮೊದಲ ಪ್ರಿನ್ಸಿಪಾಲ್ ಕಲೆಕ್ಟರ್ ಥ್ಯಾಕರೆ ಹೇಳುವಂತೆ, "ಧಾರವಾಡದಲ್ಲಿ ದೇಶದ ಇನ್ನೆಲ್ಲ ಜಿಲ್ಲೆಗಿಂತ ಒಂದು ಸಾಮಾನ್ಯ ಭೂಮಾಪನದ ಅವಶ್ಯಕತೆ ತೀರ ತೀವ್ರವಾದದ್ದು". ಅಳತೆಯ ಮಾನವು ಗ್ರಾಮದಿಂದ ಗ್ರಾಮಕ್ಕೆ ವ್ಯತ್ಯಾಸವಾಗುತ್ತಿತ್ತಷ್ಟೇ ಅಲ್ಲ ಒಂದೇ ಗ್ರಾಮದಲ್ಲೂ ಭಿನ್ನವಾದುದಾಗಿರುತ್ತಿತ್ತು. ಕೂರಿಗೆಯು ಎರಡು ಎಕ್ರೆಯಿಂದ ಒಂದು ಎಕ್ರೆಯ ನಡುವೆ ವಿವಿಧ ಗಾತ್ರಗಳದ್ದಿತ್ತು. ಹೀಗಾಗಿ ಎಕ್ರೆ ಎಂಬ ಖಚಿತ ಮಾನವನ್ನು ಬ್ರಿಟಿಷರು ಗುಲಗಂಜಿಕೊಪ್ಪ (ಧಾರವಾಡ ಬಳಿಯ ಗ್ರಾಮ)ದಿಂದ ಆರಂಭಿಸಿ (1821) ಎಲ್ಲೆಡೆ ಅದನ್ನೇ ಭೂಮಾಪನಕ್ಕೆ ಬಳಸಿದರು. ಥ್ಯಾಕರೆ ಸಾರ್ವತ್ರಿಕವಾಗಿ ಅಳತೆಯನ್ನು ಜಿಲ್ಲೆಯಲ್ಲಿ ಮುಗಿಸಿದ್ದ. 1851ರ ಸುಮಾರಿಗೆ ಈ ಸರ್ವೇಕ್ಷಣೆ (ಲೆಕ್ಕಾಚಾರ) ಮುಗಿಯಿತು. 1855 ರಲ್ಲಿ 10,76,350 ಎಕ್ರೆ ಭೂಮಿ ಜಿಲ್ಲೆಯಲ್ಲಿ ಕೃಷಿ ಪ್ರದೇಶವೆಂದು ಪರಿಗಣಿತವಾಯಿತು. ನಾನಾರೀತಿಯ ಉಂಬಳಿ, ಇನಾಮುಗಳಿಗಿದ್ದ ವಿನಾಯತಿ ಮತ್ತು ರಿಯಾಯತಿ ದರಗಳಿಂದ ಕಂದಾಯ ಕಡಿಮೆಯಾಗುವುದೆಂದು ಅದಕ್ಕಾಗಿ ನೇಮಿಸಲ್ಪಟ್ಟ ಇನಾಂ ಕಮಿಶನ್ 1843-44 ರಲ್ಲಿ 6.81 ಲಕ್ಷ ಎಕ್ರೆ ಭೂಮಿಯನ್ನು ಸೂಕ್ತ ದಾಖಲೆಗಳಿಲ್ಲವೆಂಬ ಕಾರಣಕ್ಕೆ ಪೂರ್ತಿ ಕಂದಾಯ ಆಕರಣೆಗೆ ಒಳಪಡಿಸಿತು. 1819 ರಲ್ಲಿ ಭೂಕಂದಾಯ ವಸೂಲಿಯನ್ನು ಹರಾಜು ಮಾಡುವ ಅಥವಾ ಯಾವುದೇ ಖಾಸಗಿ ಜಮೀನ್ದಾರನಿಗೆ ವಹಿಸಿ ಕೊಡುವ ಪದ್ಧತಿಯನ್ನು ನಿಲ್ಲಿಸಿ ಪ್ರತೀ ರೈತನಿಂದ ರೈತವಾರಿ ಪದ್ಧತಿಯಂತೆ ಕಂದಾಯ ಸಂಗ್ರಹಿಸುವ ಪದ್ಧತಿ ಜಾರಿಗೆ ತಂದರು. ಇಲ್ಲಿ ರೈತವಾರಿ ಎಂದರೆ ಪಟ್ಟೇದಾರನ ಹೆಸರಿನಿಂದ ಕಂದಾಯ ಸಂಗ್ರಹಿಸುವುದು ಎಂದು ತಿಳಿದುಕೊಳ್ಳಬೇಕು; ಏಕೆಂದರೆ ಭೂಮಿ ಸಾಗುವಳಿ ಮಾಡುವವನು ಎಷ್ಟೋ ಬಾರಿ ಲಾವಣಿದಾರನಾಗಿದ್ದು ಅವನೇ ಪಟ್ಟೇದಾರನಾಗಿರಲಿಲ್ಲ.

ತಮ್ಮ ಕಂದಾಯ ಆಕರಣೆಯ ಪದ್ಧತಿಯಂತೆ ಬ್ರಿಟಿಷರು ಈಗಿನ ಜಿಲ್ಲೆಯ ಪ್ರದೇಶದಲ್ಲಿ 1826-27 ರಲ್ಲಿ ಧಾರವಾಡ ಸಬ್‌ಡಿವಿಜನ್‌ನಿಂದ 72, 430 ಮಿಶ್ರಿಕೋಟಿಯಿಂದ 46,180, ನವಲಗುಂದದಿಂದ 83,110, ಬಂಕಾಪುರದಿಂದ 66,630, ಡಂಬಳದಿಂದ 54,980, ಹಾನಗಲ್‌ನಿಂದ 57,960, ಹುಬ್ಬಳ್ಳಿಯಿಂದ 63,630, ರಾಣೆಬೆನ್ನೂರಿಂದ 75,400 ಗುತ್ತಲದಿಂದ 76,330,ರೋಣದಿಂದ 38,070 ಹಾಗೂ ಕೋಡದಿಂದ 64,040 ರೂಪಾಯಿಗಳ ಕಂದಾಯ ಸಂಗ್ರಹಿಸಿದ್ದು ಇದರಲ್ಲಿ ಸವಣೂರು, ನರಗುಂದ, ಗುಡಗೇರಿ, ಕುಂದಗೋಳ, ಲಕ್ಷ್ಮೇಶ್ವರ, ಶಿರಹಟ್ಟಿ ಪ್ರದೇಶಗಳು ಸೇರಿಲ್ಲ. ಈ ಬ್ರಿಟಿಷ್ ಸಬ್‌ಡಿವಿಜನ್‌ಗಳಲ್ಲಿ ವಸೂಲಾದ ಕಂದಾಯ ಏಳು ಲಕ್ಷ ರೂ.ಗಳನ್ನು ಮೀರಿತ್ತು. ಆಗಿನ ದರಗಳು ಬಾಗಾಯತಿಗೆ ಎಕ್ರೆಗೆ ರೂ. 4 ರಿಂದ 64, ಹಿಂಗಾರು ಬೆಳೆಗೆ ಎಕ್ರೆಗೆ ಎರಡಾಣೆಯಿಂದ 3 ರೂ.ವರೆಗೆ, ಮುಂಗಾರು ಬೆಳೆಗೆ ಅರ್ಧ ರೂ.ನಿಂದ 5 ರೂ. ಹಾಗೂ ಅಕ್ಕಿ ಬೆಳೆಯುವ ತರೀ ಜಮೀನಿನಲ್ಲಿ ಎಕ್ರೆಗೆ ರೂ. 1 ರಿಂದ 16 ರ ವರೆಗೆ ಇತ್ತು. ಇದರಲ್ಲಿ 1838-39 ರಲ್ಲಿ ವಸೂಲಾತಿ 8.65 ಲಕ್ಷ ರೂ. ಆದರೆ 1839-40 ರಲ್ಲಿ 11.53 ಲಕ್ಷ ರೂ. ಇತ್ತು.

1843 ರಿಂದ 1860 ರ ನಡುವೆ ಮೊದಲ ಬಾರಿ 30 ವರ್ಷಗಳ ಅವಧಿಗೆ ಸರ್ವೇಕ್ಷಣೆ ಮತ್ತು ಕಂದಾಯ ನಿರ್ಣಯ ನಡೆಸಿದರು. ಇದರಿಂದ 1861 ರಲ್ಲಿ ಒಟ್ಟು ವಸೂಲಿ 16.65 ಲಕ್ಷ ಇತ್ತು. ಎರಡನೇಯ ಬಾರಿ ಇದೇ ಪ್ರಕ್ರಿಯೆಯು 1874 ರಿಂದ 1901 ರ ವರೆಗೆ ಸಾಗಿತು. 1881 ರಲ್ಲಿ ವಸೂಲಾತಿ 23.95 ಲಕ್ಷ ರೂ. ಇತ್ತು. ಬೆಳೆಯಾದ ಭೂಮಿ ಜಿಲ್ಲೆಯಲ್ಲಿ 15 ಲಕ್ಷ ಎಕ್ರೆ.

1882-83 ರಲ್ಲಿ ಜಿಲ್ಲೆಯಲ್ಲಿ 1,284 ಬ್ರಿಟಿಷ್ ಗ್ರಾಮಗಳಿದ್ದು ಅಲ್ಲಿ 1,353 ಪಾಟೀಲರು ಕೆಲಸ ಮಾಡುತ್ತಿದ್ದು ಇವರಲ್ಲಿ 184 ಜನ ವೇತನ ಪಡೆಯುವವರೂ, 1,169 ಪರಂಪರಾಗತ ಭೂಮಿ ಹೊಂದಿದ ಅಧಿಕಾರಿಗಳೂ ಆಗಿದ್ದರು. ಇದಲ್ಲದೆ 970 ಜನ ಕುಲಕರ್ಣಿಗಳಿದ್ದು ಇವರಲ್ಲಿ 171 ವೇತನ ಪಡೆಯುವವರೂ, 799 ಜನ ಪರಂಪರಾಗತರೂ ಆಗಿದ್ದರು. ಇದರಲ್ಲದೆ 4,619 ಗ್ರಾಮ ಸಹಾಯಕರಿದ್ದರು. (ಇವರು ಬೇಡ ಇಲ್ಲವೆ ಕುರುಬ ಜಾತಿಯವರು, ಎಂದು ಗ್ಯಾಸೆಟಿಯರ್ ತಿಳಿಸುತ್ತದೆ). ಇವರ ಸರಾಸರಿ ವಾರ್ಷಿಕ ವೇತನ 101 ರೂ. ಇದ್ದು ಇದರಲ್ಲಿ 67,620 ರೂ. ಅವರ ಭೂಮಿಯ ಆದಾಯದಿಂದ ಪಾವತಿಯಾಗುತ್ತಿದ್ದರೆ 62,070 ನಗದಾಗಿ ಕೊಡಲಾಗುತ್ತಿತ್ತು. ಕಂದಾಯ ವಸೂಲಿಗೆ ಪಾಟೀಲ, ಕುಲಕರ್ಣಿ ಹಾಗೂ ಗ್ರಾಮ ಸಹಾಯಕರಿಗೆ ಕೊಡುವ ವೇತನದ ಒಟ್ಟು ಮೊತ್ತವು ಜಿಲ್ಲೆಯ ಒಟ್ಟು ಕಂದಾಯದ ಶೇ. 15 ರಷ್ಟಿತ್ತೆಂದು 1884 ರ ಗ್ಯಾಸೆಟಿಯರ್ ತಿಳಿಸುತ್ತದೆ. 1885 ರಲ್ಲಿ ಬಾದಾಮಿ

ತಾಲೂಕಿನಿಂದ 68 ಚದರ ಮೈಲು ಪ್ರದೇಶವನ್ನು ರೋಣ ತಾ।। ಗೆ ವರ್ಗಾಯಿಸಿದರು. ಜಿಲ್ಲೆಯ ವಿಸ್ತೀರ್ಣ 4,534 ಚ. ಮೈಲು ಇದ್ದುದು 4,602 ಚ. ಮೈಲಿ ಆಯಿತು.

ಪರಿಷ್ಕೃತ ಅಥವಾ ಎರಡನೇಯ ಸರ್ವೇಕ್ಷಣೆ 1894 ರಿಂದ 1901 ರವರೆಗೆ ನಡೆದಾಗ ಇದರಲ್ಲಿ ಮೊದಲ ಸರ್ವೇಕ್ಷಣೆ (1843-60) ರ ಅವಧಿಗಿಂತ 22,864 ಎಕ್ರೆ ಕೃಷಿ ಭೂಮಿಯ ವಿಸ್ತಾರ ಹೆಚ್ಚಿತು. ಒಟ್ಟು ವಿಸ್ತಾರ 16.69 ಲಕ್ಷ ಎಕ್ರೆಯಾಗಿ ಒಟ್ಟು ಆಕರಣೆ 18.95 ಲಕ್ಷ ರೂ. ಆಯಿತು (1901). 1921 ರಲ್ಲಿ ಜಿಲ್ಲೆಯಲ್ಲಿ 13,78,958 ಎಕ್ರೆ ಕೃಷಿ ಭೂಮಿ ಇದ್ದು ಆಗ ಭೂಕಂದಾಯ 30.17 ಲಕ್ಷ ರೂ. ಆಕರಣೆ ಆಗಿತ್ತು.

ಮುಂದೆ ಎರಡನೇಯ ಪರಿಷ್ಕೃತ ಸರ್ವೇಕ್ಷಣೆ ಮತ್ತು ಕಂದಾಯ ನಿರ್ಣಯವು 1906ರಿಂದ 1916ರ ನಡುವೆ ಆರಂಭವಾಯಿತು. ಸವಣೂರು ಸಂಸ್ಥಾನದಲ್ಲಿ 1916-18 ರ ಪರಿಷ್ಕರಣ ನಡೆಸಿದರು. ಆದರೆ ಇದು ಪೂರ್ತಿಯಾಗಲಿಲ್ಲ. 1942 ರಲ್ಲಿ ಈ ಕೆಲಸವನ್ನು ಮುಂದೂಡಲು ಮುಂಬೈ ಸರಕಾರ ನಿರ್ಧರಿಸಿತು. ಆದರೆ ಸ್ವಾತಂತ್ರ್ಯ ಬಂದು ಜಿಲ್ಲೆಯನ್ನು ಕರ್ನಾಟಕಕ್ಕೆ ವರ್ಗಾಯಿಸಿದ ನಂತರ ಮೈಸೂರು ಭೂಕಂದಾಯ ಅಧಿನಿಯಮ 1964 ಮತ್ತು ನಿಯಮಗಳನ್ನು ಜಾರಿಗೆ ತಂದು ಇದರ 114 ನೇಯ ಪರಿಚ್ಛೇದದಂತೆ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಭೂಮಿಯ ಕಂದಾಯದ ಪರಿಷ್ಕರಣಕ್ಕೆ ಸರಕಾರವು ಆದೇಶ ನೀಡಿತು.

ಹಳೆಯ ಪದ್ಧತಿಗಿಂತ ಹೊಸ ಪದ್ಧತಿಯಲ್ಲಿ ಅನೇಕ ವ್ಯತ್ಯಾಸಗಳಿವೆ. ಆಕರಣೆಯ ಘಟಕವು ಹಿಂದೆ ಒಂದು ತಾಲೂಕಾಗಿದ್ದರೆ ಈಗ ವಿಶಿಷ್ಟ ಗುಣಗಳ ಒಂದು ಪ್ರದೇಶ (ಜೋನ್)ವಾಗಿ ಗುರುತಿಸಿದೆ. ಇದು ತಾಲೂಕಿಗಿಂತ ವಿಸ್ತೃತವಾಗಿರಬಹುದು. ಇದು ಒಂದು ಪ್ರದೇಶದ ನೆಲದ ಸ್ಥಿತಿಯ ಸಾತತ್ಯಉಳ್ಳ (ಸಮಾನ ಗುಣದ) ಪ್ರದೇಶವಾಗಿದ್ದು (ಕಂಟಿಗ್ಯುವಸ್), ಭೂಸ್ಥಿತಿಗತಿ, ಮಣ್ಣಿನ ಗುಣ, ಹವಾಮಾನ ಮತ್ತು ಮಳೆಯ ಪರಿಮಾಣಕ್ಕೆ ಸಂಬಂಧಿಸಿ ಸಮಾನಧರ್ಮದ್ದಾಗಿರಬೇಕು. ಈ ಪ್ರದೇಶವನ್ನು ಮಣ್ಣಿನಗುಣ, ಮುಖ್ಯ ಬೆಳೆಗಳು, ಅವುಗಳ ಬೆಲೆ ಮುಂತಾದವುಗಳ ಆಧಾರದ ಮೇಲೆ ಕಿರು ಘಟಕಗಳಾಗಿ ಗುರುತಿಸಲಾಗುವುದು. ಅಧಿನಿಯಮದ 114 ರಿಂದ 126 ರ ವರೆಗಿನ ಪರಿಚ್ಛೇದಗಳಲ್ಲಿ ಹೇಳಿದಂತೆ ಮಾಡಲಾದ 21 ರಿಂದ 37 ರವರೆಗಿನ ನಿಯಮಗಳಂತೆ ಭೂಕಂದಾಯ ನಿಷ್ಕರ್ಷೆ ಮಾಡುವ ವಿಧಾನಗಳನ್ನು ಹೇಳಿದೆ. 1964 ರ ಅಧಿನಿಯಮದ ಪ್ರಕರಣ 2 (27) ರಂತೆ ಮಣ್ಣಿನ ಗುಣವನ್ನು ಶೇಕಡಾ ವಾರಾಗಿ ಗುರುತಿಸಬೇಕೆಂದಿದೆ. ಒಂದು ಭೂಘಟಕದಲ್ಲಿ ಯಾವುದೇ ಒಂದು ವರ್ಗದ ಭೂಮಿಯ ಎಕರೆಯ ಸರಾಸರಿ ಇಳುವರಿಯನ್ನು ಗುರುತಿಸಿ ಅದರ ಶೇ. 4 ನ್ನು ಕಂದಾಯವೆಂದು ಲೆಕ್ಕ ಹಾಕಬೇಕು. ಆಯಾ ವರ್ಗದಲ್ಲಿ ಆಯಾ ಭೂಮಿಯ ಶೇಕಡಾ ನೂರು ವರ್ಗೀಕರಣದ ಮೌಲ್ಯವನ್ನು ಹೊಂದಿರಬೇಕು.

ಒಂದೊಂದು ವರ್ಗವನ್ನು ಗುರುತಿಸುವಾಗ ಭೂಮಿಯ ಭೌತಿಕಸ್ಥಿತಿ, ಹವೆ ಮತ್ತು ಮಳೆಯು ಪ್ರಮಾಣ, ಭೂಮಿಗೆ ಮಾರುಕಟ್ಟೆಯ ನಿಕಟತೆ, ಅಲ್ಲಿಂದ ಸಾರಿಗೆ ಅನುಕೂಲ, ಪಶುಸಂಗೋಪನೆಯ ಸ್ಥಿತಿಗತಿ, ಜನಸಂಖ್ಯೆ ಮತ್ತು ಕಾರ್ಮಿಕರ ಲಭ್ಯತೆ, ಕೃಷಿ ಸವಲತ್ತುಗಳ ಲಭ್ಯತೆ, ಕೃಷಿಗೊಳಪಡುವ ಭೂ ಪ್ರದೇಶದಲ್ಲಿ ಕಳೆದ 30 ವರ್ಷಗಳಲ್ಲಿ ಆಗಿರಬಹುದಾದ ಏರುಪೇರು (ವ್ಯತ್ಯಾಸ), ಕೂಲಿದರ, ಬೆಲೆಗಳು, ಮುಖ್ಯ ಬೆಳೆಯ ಇಳುವರಿಯ ಪ್ರಮಾಣ (ಅಂದಾಜು ಕಟಾವಿನ ಲೆಕ್ಕಾಚಾರ), ಆರಂಭಕ್ಕೆ ಕೂಲಿಯ ದರಸಹಿತ ಆಗುತ್ತಿರುವ ಸಾಮಾನ್ಯ ವೆಚ್ಚ, ಭೂಮಿಗೆ ಬರಬಹುದಾದ ಲಾವಣಿ (ಗೇಣಿ)ಯ ಮೌಲ್ಯ ಹಾಗೂ ಭೂಮಿಯ ಮಾರಾಟದ ಮೌಲ್ಯ ಮೊದಲಾದವುಗಳನ್ನು ಗಣಿಸಲಾಗುವುದು.

ಅಧಿನಿಯಮದಂತೆ ಕಂದಾಯ ನಿಷ್ಕರ್ಷೆ ಮಾಡುವ ಅಧಿಕಾರಿಯು ತನ್ನ ವರದಿ ಮತ್ತು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗೆ ಒಪ್ಪಿಸಿ, ಜಿಲ್ಲಾಧಿಕಾರಿಯು ಇವೆರಡನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿ, ತನ್ನ ಕಚೇರಿಯಲ್ಲೂ ಪ್ರತೀ ಗ್ರಾಮದ ಚಾವಡಿಯಲ್ಲೂ ಪ್ರದರ್ಶಿಸಿ ಸಂಬಂಧಿತ ರೈತರಿಗೆ ತಿಳಿಯುವಂತೆ ಮಾಡಬೇಕು. ಈ ಬಗ್ಗೆ ತಕರಾರುಗಳಿದ್ದರೆ ಮೂರು ತಿಂಗಳೊಳಗೆ ಸರಕಾರದ ಗಮನಕ್ಕೆ ಬರುವಂತಾಗಬೇಕು. ಇಂಥ ತಕರಾರುಗಳ ಅಹವಾಲು ಭೂಸರ್ವೇಕ್ಷಣೆ ಮತ್ತು ಭೂ ದಾಖಲೆಗಳ ನಿರ್ದೇಶಕರ ಮೂಲಕ ಸರಕಾರದ ಗಮನಕ್ಕೆ ಜಿಲ್ಲಾಧಿಕಾರಿಯಿಂದ ಬರುವಂತಾಗಬೇಕು. ಪ್ರಸ್ತಾಪ ಮತ್ತು ತಕರಾರುಗಳನ್ನು ವಿಧಾನಮಂಡಳ ಪರಿಶೀಲಿಸಿ ಒಪ್ಪಿಗೆ ಸೂಚಿಸಿದ ನಂತರ ಈ ಬಗ್ಗೆ ಸರಕಾರದ ಆದೇಶ ಹೊರಡುತ್ತದೆ. ಇದು ಕಾರ್ಯಾಚರಣೆಗೆ ಬರುವ ದಿನಾಂಕವನ್ನು ರಾಜ್ಯ ಪತ್ರದಲ್ಲಿ (ಗೆಜೆಟ್) ಪ್ರಕಟಿಸಬೇಕು. ಗ್ರಾಮ ಚಾವಡಿಯಲ್ಲೂ ಇದು ಪ್ರಕಟವಾಗಿ ಪ್ರತೀ ಭೂಮಿಯ ವಿಸ್ತಾರ, ಸರ್ವೇನಂಬರ್, ನಿಷ್ಕರ್ಷೆಯಾದ ಕಂದಾಯ

ಹಾಗೂ ಖಾತೇದಾರನ ಹೆಸರನ್ನು ನಮೂದಿಸಿದ ಪ್ರತೀಗ್ರಾಮದ ಭೂವ್ಯವಸ್ಥೆಯ ವಹಿ (ಸೆಟ್ಲ್‌ಮೆಂಟ್ ರಿಜಿಸ್ಟರ್) ಸಿದ್ಧವಾಗಿ, ಇದರ ಒಂದು ಪ್ರತಿ ಗ್ರಾಮಲೆಕ್ಕಿಗನಲ್ಲೂ ಇನ್ನೊಂದು ಭೂ ದಾಖಲೆಗಳ ಉಪನಿರ್ದೇಶಕರ ಕಚೇರಿಯಲ್ಲೂ ಕಾಯಂ ಆಗಿ ಇರುವುದು.

1964 ರ ಅಧಿನಿಯಮದ 147 ಪರಿಚ್ಛೇದದಂತೆ ಪ್ರತೀವರ್ಷ ಮಳೆಯ ಸರಾಸರಿ ಹಾಗೂ ಗ್ರಾಮದ ಜಮೀನುಗಳ ಸರಾಸರಿ ಇಳುವರಿ ಆಧಾರದ ಮೇಲೆ ಆಣೇವಾರಿ ಆದೇಶಗಳನ್ನು ಜಿಲ್ಲಾಧಿಕಾರಿಗಳು ಹೊರಡಿಸುವರು. ಸರಾಸರಿ ಇಳುವರಿ ಶೇ. 25 ಕ್ಕಿಂತ ಕಡಿಮೆ ಇದ್ದಲ್ಲಿ ಕಂದಾಯ ಪೂರ್ತಿ ಮನ್ನಾ, ಶೇ. 37 ಹಾಗೂ 25 ರ ನಡುವೆ ಇಳುವರಿ ಬಂದರೆ ತಹಕೂಬ, 37 ರಿಂದ 50 ಶೇ. ಬಂದರೆ ಅರ್ಧ ತಹಕೂಬ, ಶೇ. 50 ಹಾಗೂ ಅದಕ್ಕಿಂತ ಹೆಚ್ಚು ಬಂದರೆ ಪೂರ್ತಿ ವಸೂಲಿಗೆ ಆದೇಶ ನೀಡುವರು.

**ಕೋಷ್ಟಕ 9.1 : ಧಾರವಾಡ ಜಿಲ್ಲೆಯ II ಮತ್ತು III ಪರಿಷ್ಕೃತ ಕಂದಾಯ ನಿಷ್ಕರ್ಷೆ (1964) ಯಂತೆ ಗೊತ್ತುಮಾಡಲಾದ ಪ್ರಮಾಣಿತ ದರಗಳು**

| ತಾಲ್ಲೂಕಿನ ಹೆಸರು | ಪ್ರದೇಶ (ಗುಂಪು) | ಗ್ರಾಮಗಳ ಸಂಖ್ಯೆ | ಕಂದಾಯದ ಪ್ರಮಾಣಿತ ದರ | | |
|---|---|---|---|---|---|
| | | | ಖುಷ್ಕಿ | ತರಿ | ಬಾಗಾಯತು |
| ಧಾರವಾಡ | 1 | 73 | 1.67 | 9.47 | 9.47 |
| | 2 | - | 3.79 | 7.56 | 7.56 |
| | 3 | - | 3.83 | 6.59 | 6.59 |
| | 4 | 90 | 3.61 | 6.35 | 6.35 |
| ಶಿಗ್ಗಾಂವಿ | 1 | 70 | 1.67 | 9.47 | 9.47 |
| | 2 | - | 3.79 | 7.56 | 7.56 |
| | 3 | 92 | 3.83 | 6.59 | 6.59 |
| ಹಾನಗಲ್ | 1 | 131 | 1.67 | 9.47 | 9.47 |
| | 2 | 23 | 3.79 | 7.56 | 7.56 |
| | 3 | 19 | 3.83 | 6.59 | 6.59 |
| ಹಿರೇಕೆರೂರು | 1 | 22 | 1.67 | 9.47 | 9.47 |
| | 2 | 123 | 3.79 | 7.56 | 7.56 |
| ಕಲಘಟಗಿ | 1 | 112 | 1.67 | 9.47 | 9.47 |
| (ಜೋನ್ ನಂ.ಕಿ 5) | 4 | 15 | 3.69 | 6.35 | 6.35 |
| ಹುಬ್ಬಳ್ಳಿ | 1 | - | 3.64 | 7.08 | 15.27 |
| | 2 | 47 | 3.40 | 7.08 | 16.27 |
| | 3 | - | 3.14 | 7.08 | 15.27 |
| | 4 | 34 | 2.98 | 7.08 | 15.27 |
| ಕುಂದಗೋಳ | 2 | 40 | 3.40 | 7.08 | 16.27 |
| | 4 | 10 | 2.98 | 7.08 | 15.27 |

| 1 | 2 | 3 | 4 | 5 | 6 |
|---|---|---|---|---|---|
| ಹಾವೇರಿ | 1 | 125 | 3.64 | 7.08 | 15.27 |
| ಬ್ಯಾಡಗಿ | 1 | 34 | 3.64 | 7.08 | 15.27 |
| | 3 | 34 | 3.14 | 7.08 | 15.27 |
| | 1 | 112 | 3.64 | 7.08 | 15.27 |
| ರಾಣೆಬೆನ್ನೂರು (ಜೋನ್ ನಂ.೬6 ) | 1 | 112 | 3.64 | 7.08 | 15.27 |
| ನರಗುಂದ | 1 | 10 | 3.13 | 3.13 | 3.13 |
| | 5 | 49 | 1.92 | 1.92 | 1.92 |
| ಗದಗ | 1 | 38 | 3.13 | 3.13 | 3.13 |
| | 2 | 10 | 2.90 | 2.90 | 2.90 |
| | 4 | 10 | 2.26 | 7.97 | 2.26 |
| | 6 | 3 | 1.70 | 1.70 | 1.70 |
| ಶಿರಹಟ್ಟಿ | 1 | 3 | 3.13 | 3.13 | 3.13 |
| | 3 | 45 | 2.72 | 7.97 | 2.72 |
| | 4 | 44 | 2.26 | 7.97 | 2.26 |
| ರೋಣ | 2 | 49 | 2.90 | 2.90 | 2.90 |
| | 4 | 35 | 2.26 | 7.97 | 2.26 |
| | 5 | 10 | 1.92 | 1.92 | 1.92 |
| ಮುಂಡರಗಿ | 4 | 44 | 2.26 | 7.97 | 2.26 |
| | 6 | 9 | 1.70 | 1.70 | 1.70 |

**ನೀರಿನ ಕರ**

ಕರ್ನಾಟಕ ಸರಕಾರದ 1980 ಅಧಿಸೂಚನೆಯನ್ವಯ ಕರ್ನಾಟಕ ನೀರಾವರಿ (ನೀರಿನ ದರ ಆಕರಣೆ) ನಿಯಮಗಳು 1965 ರ ನಿಯಮ 4 ಕ್ಕೆ ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿ ಪ್ರಕಾರ ನೀರಾವರಿ ದರ (ವಾಟರ್ ರೇಟ್) ಬೇಡಿಕೆಯ ಪತ್ರಿಕೆಯನ್ನು ತಯಾರಿಸಿ ತಹಶೀಲದಾರರಿಗೆ ಕಳಿಸುವ ಹೊಣೆಗಾರಿಕೆ ಆಯಾ ಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರದ್ದಾಗಿರುತ್ತದೆ. ಈ ಬೇಡಿಕೆ ಪತ್ರಿಕೆಯನ್ನು ತಯಾರಿಸುವ ಪೂರ್ವದಲ್ಲಿ ನಿಯಮ 4 ರ ಪ್ರಕಾರ ಈ ಕೆಳಗಿನಂತೆ ಕ್ರಮ ಜರುಗಿಸಬೇಕಾಗುತ್ತದೆ.

ನೀರಾವರಿ (ಲೋಕೋಪಯೋಗಿ) ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳಿಂದ ನೀರಾವರಿ ಅಗತ್ಯಕ್ಕೆ ಸರ್ವೆ ನಂಬರುಗಳ ಜಂಟಿ ತಪಾಸಣೆ ಮಾಡಿ ಆ ಸರ್ವೆ ನಂಬರುಗಳಿಗೆ ನೀರು ಮುಟ್ಟಿದ ಬಗ್ಗೆ ಮತ್ತು ಬೆಳೆದ ಬೆಳೆಗಳ ಬಗ್ಗೆ ಮಾಹಿತಿ ಪಡೆಯುವುದು. ಜಂಟಿ ತಪಾಸಣೆಯನ್ನು ಸಾಮಾನ್ಯವಾಗಿ ನೀರಾವರಿ ಆದ ರೈತರ ಸಮಕ್ಷಮ ನಡೆಸಿ ರೈತರ ಸಹಿಯನ್ನು ಪಡೆದುಕೊಳ್ಳಬೇಕು. ತಪಾಸಣೆ ಪತ್ರಿಕೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಸಂಬಂಧಿಸಿದ ತಹಶೀಲದಾರರಿಗೆ ಕಳಿಸುವುದು. ಜಂಟಿ ತಪಾಸಣೆಯಿಂದ ಕಂಡು ಬಂದ ನೀರಾವರಿ ಆದ ಸರ್ವೆ ನಂಬರುಗಳ ಪತ್ರಿಕೆ ಸರಿ ಇದೆ ಎಂದು ಮನವರಿಕೆ ಮಾಡಿಕೊಂಡ ನಂತರ ಪ್ರತೀಯೊಂದು ಸರ್ವೆ ನಂಬರಿನ ರೈತರಿಂದ ಸಂದಾಯ ಮಾಡಬೇಕಾದ ನೀರಿನ ದರದ ಪತ್ರಿಕೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನಿಯರರು ತಯಾರಿಸಿ ನಂತರ ಗ್ರಾಮಚಾವಡಿ, ಪಂಚಾಯತ ಕಾರ್ಯಾಲಯ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ಪ್ರಸಿದ್ಧಿಸಿ ಸಂಬಂಧಿಸಿದ ರೈತರಿಂದ ತಕರಾರುಗಳನ್ನು ಆಹ್ವಾನಿಸಬೇಕು. ತಕರಾರುಗಳು ಬಂದಲ್ಲಿ ಸಹಾಯಕ

ಕಾರ್ಯನಿರ್ವಾಹಕ ಅಭಿಯಂತರರು ತಹಶೀಲದಾರರೊಂದಿಗೆ ಅಂತಹ ಭೂಮಿಗಳ ತಪಾಸಣೆ ಮಾಡುವುದು. ಮತ್ತು ಸಂಬಂಧಿಸಿದ ರೈತರಿಗೆ ಅವಕಾಶ ಕೊಟ್ಟು ಅವರ ಹೇಳಿಕೆ ಕೇಳಿಕೊಂಡು ಅವಶ್ಯವಿದ್ದರೆ ನೀರಿನ ದರದ ಪತ್ರಿಕೆಯನ್ನು ಪರಿಷ್ಕರಿಸಿ ನೀರಿನ ದರದ ಪತ್ರಿಕೆಯನ್ನು ತಹಶೀಲದಾರರಿಗೆ ಕಳಿಸುವುದು. ಈ ಇಲಾಖೆಯವರು ಕಳಿಸಿದ ಪತ್ರಿಕೆಯನ್ವಯ ವಸೂಲಿ ಮಾಡುವ ಕರ್ತವ್ಯ ಕಂದಾಯ ಇಲಾಖೆಯದು ಆಗಿರುತ್ತದೆ.

**ಸರ್ಕಾರದ 24.7.1985 ರ ಆದೇಶದ ಪ್ರಕಾರ ನೀರಾವರಿಯಾಗುವ ಭೂಮಿಗಳ ಪರಿಷ್ಕೃತ ನೀರಾವರಿ ದರ ಈ ಕೆಳಗಿನಂತಿರುವುದು.**

| ಅ.ಸಂ. | ಬೆಳೆ | | ಪ್ರತೀ ಎಕರೆಗೆ ನೀರಿನ ದರ ರೂ.ಗಳಲ್ಲಿ |
|---|---|---|---|
| 1. | ಕಬ್ಬು | 12 ತಿಂಗಳ ಅವಧಿಯದು | 150.00 |
| 2. | ” | 12 ತಿಂಗಳ ಮೇಲೆ 18 ತಿಂಗಳ ಒಳಗೆ ಕಟಾವು ಆಗುವಂತಹದು | 225.00 |
| 3. | ಬತ್ತ | | 35.00 ಮೊದಲ ಬೆಳೆಗೆ<br>40.00 ನಂತರದ ಬೆಳೆಗಳಿಗೆ |
| 4. | ಗೋಧಿ | | 22.00 |
| 5. | ಜೋಳ | | 20.00 |
| 6. | ನೆಲಗಡಲೆ | | 24.00 |
| 7. | ತಂಬಾಕು | | 24.00 |
| 8. | ಹತ್ತಿ | | 40.00 |
| 9. | ಗೋವಿನ ಜೋಳ, ರಾಗಿ, ಸವಣೆ, ಸಜ್ಜೆ, ಬಟಾಣಿ ಗೆಣಸು, ಉಳ್ಳಾಗಡ್ಡಿ ಮುಂತಾದವು | | 20.00 |
| 10. | ದ್ವಿದಳ ಧಾನ್ಯ | | 15.00 |
| 11. | ತೋಟದ ಬೆಳೆಗಳು | | 40.00 |

ಸರಕಾರದ ಆದೇಶದ ಪ್ರಕಾರ ಈ ದರಗಳನ್ನು ಈ ಕೆಳಗಿನಂತೆ ಆಕರ ಮಾಡಬೇಕಾಗುತ್ತದೆ. (1) ಬೃಹತ್ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳ ಕೆಳಗೆ ನೀರಾವರಿ ಆಗತಕ್ಕ ಜಮೀನುಗಳಿಗೆ ದಿನಾಂಕ 1.7.85 ರಿಂದ ಮೇಲ್ಕಾಣಿಸಿದ ದರಗಳನ್ನು ಆಕರಣೆ ಮಾಡಬೇಕಾಗುತ್ತದೆ. 1.7.85 ರ ಪೂರ್ವದಲ್ಲಿ ಅಂದರೆ 1.7.78 ರಿಂದ 30.6.85 ರವರೆಗೆ ಹಳೆಯ ನೀರಿನ ದರ ಆಕರಣೆ ಮಾಡಬೇಕಾಗುತ್ತದೆ. (ದಿ: 1.6.76 ರ ದರದಂತೆ). (2) ನಿಶ್ಚಿತ ನೀರಾವರಿ ಆಗದೆ ಇರುವ ಮಧ್ಯಮ ನೀರಾವರಿ ಕಾಮಗಾರಿಗಳ ಕೆಳಗೆ ಬರುವ ಜಮೀನುಗಳಿಗೆ ನಿಗದಿಪಡಿಸಿದ ನೀರಿನ ದರದ ½ ದಷ್ಟು ಆಕರಣೆ ಮಾಡಬೇಕು. (3) ಚಿಕ್ಕ ನೀರಾವರಿ ಕೆರೆಗಳ ಕೆಳಗೆ ಬರುವ ಜಮೀನುಗಳಿಗೆ (ಹಾಯರ್ ರೀಚಸ್) ನಿಗದಿ ಪಡಿಸಿದ ನೀರಿನ ದರದ ½ ದಷ್ಟು ಹಾಗೂ ಇನ್ನೂ ಕೆಳಗಡೆ (ಲೋವರ್ ರೀಚಸ್) ಯಲ್ಲಿರುವ ಜಮೀನುಗಳಿಗೆ ನಿಗದಿಪಡಿಸಿದ ನೀರಿನ ದರದ ¼ ದಷ್ಟು ಆಕರಣೆ ಮಾಡಬೇಕು. ಕನಿಷ್ಠ ದರವು ತರಿ ಆಕಾರ ಮತ್ತು ಖುಷ್ಕಿ ಆಕಾರದ ನಡುವಿನ ಅಂತರ 1½ ಪಟ್ಟು ಇರಬೇಕು. ಗರಿಷ್ಠ ದರವು ತರಿ ಆಕಾರ ಮತ್ತು ಖುಷ್ಕಿ ಆಕಾರದ ನಡುವಿನ ಅಂತರದ 2 ಪಟ್ಟು ಇರಬೇಕು. ಹಾಯರ್ ಮತ್ತು ಲೋವರ್ ರೀಚಸ್‌ಗಳಲ್ಲಿಯಂತೆಯೇ, ಕಡಿತಗೊಂಡ ನೀರಿನ ದರಗಳ ಆಕರಣೆ 1.7.76 ರಿಂದ ಜಾರಿಯಲ್ಲಿ ಬರತಕ್ಕದ್ದು.

ಉಲ್ಲೇಖಿತ ಸರ್ಕಾರದ ಆದೇಶದ ಕಂಡಿಕೆ (5) ರಲ್ಲಿ ಆದೇಶಿಸಿದಂತೆ ಚಿಕ್ಕ ನೀರಾವರಿ ಕೆರೆಗಳ ಅಡಿಯಲ್ಲಿ ಬರತಕ್ಕ ಜಮೀನುಗಳಿಗೆ 30.6.76 ರ ವರೆಗೆ ಆಕರಣೆ ಆದ ನೀರಿನ ದರಗಳ ವಸೂಲಿ ಆಗದೆ ಬಾಕಿ ಇದ್ದರೆ ಆ ಬಾಕಿಯನ್ನು ಸರಕಾರದವರು ಮನ್ನಾ ಮಾಡಿದ್ದಾರೆ. ಸರಕಾರದ ಆದೇಶವನ್ನು ಈ ಬಗ್ಗೆ ದಿನಾಂಕ 24.7.1985 ರಂದು ನಿಗದಿಪಡಿಸಿದ್ದು ಆ ನೀರಿನ ದರಗಳನ್ನು ಜಾರಿಯಲ್ಲಿ

ತರಲು ಕರ್ನಾಟಕ ನೀರಾವರಿ (ನೀರಿನ ದರ ಆಕರಣೆ) ನಿಯಮಗಳು 1965 ಕ್ಕೆ ತಿದ್ದುಪಡಿಯನ್ನು ಸರಕಾರದವರು ದಿನಾಂಕ 4.11.87 ರಂದು ಹೊರಡಿಸಿದ್ದಾರೆ.

**ನಿರ್ವಹಣೆ ಕರ :** ಕರ್ನಾಟಕ ನೀರಾವರಿ ಕಾಯ್ದೆ 1965ರ ಕಲಂ 44ರ ಅನ್ವಯ ಮತ್ತು ಕರ್ನಾಟಕ ನೀರಾವರಿ ನಿಯಮಗಳು 1965 ರ ನಿಯಮ 21-ಎ ಅನ್ವಯ ಪ್ರತೀ ಎಕರೆಗೆ ಪ್ರತೀ ವರ್ಷಕ್ಕೆ ರೂ.4.00 ರಂತೆ ನಿರ್ವಹಣಾ ಕರವನ್ನು ತಹಶೀಲದಾರರು ಆಕರಣೆ ಮತ್ತು ವಸೂಲಿ ಮಾಡಬೇಕಾಗುತ್ತದೆ. ಆದರೆ ಸತತ ಎರಡು ವರ್ಷಕ್ಕಿಂತ ಕಡಿಮೆ ಇಲ್ಲದ ಅವಧಿಗೆ ಜಮೀನುಗಳಿಗೆ ನೀರು ಪೂರೈಕೆ ಆಗದಿದ್ದರೆ ಈ ನಿರ್ವಹಣಾ ಕರ ಆಕರಣೆ ಮಾಡುವಂತಿಲ್ಲ.

**ನೀರಿನ ದಂಡದ ಕರ :** ಕರ್ನಾಟಕ ನೀರಾವರಿ ಕಾಯ್ದೆ 1965 ರ ಕಲಂ 28 (5) ರನ್ವಯ ನೀರಾವರಿ ಅಧಿಕಾರಿಗಳಿಂದ ಪರವಾನಿಗೆ ಪಡೆಯದೆ ಸರಕಾರದ ಮೂಲಗಳಿಂದ ನೀರನ್ನು ಬಳಸಿಕೊಂಡರೆ ಆ ಬಗ್ಗೆ ದಂಡ ಸಂದಾಯ ಮಾಡಬೇಕಾಗುವುದು. ಇಂತಹ ದಂಡ ಸಾಮಾನ್ಯ ನೀರಿನ ದರದ 15 ಪಟ್ಟು ಆಗಿರುತ್ತದೆ. ಇದೇ ಕಾಯ್ದೆಯ ಕಾಲಂ 32(4) ರನ್ವಯ ಅಧಿಸೂಚಿತ ಬೆಳೆಗಳನ್ನು ಹೊರತುಪಡಿಸಿ ಬೇರೆ ಬೆಳೆಗಳನ್ನು ಬಿತ್ತಿದರೆ ಅಥವಾ ಬೆಳೆದರೆ ಸಾಮಾನ್ಯ ನೀರಿನ ದರದ 10 ಪಟ್ಟು ದಂಡ ಸಂದಾಯ ಮಾಡಬೇಕಾಗುವುದು. ಮೇಲ್ಕಾಣಿಸಿದ ನೀರಿನ ದಂಡದ ಕರಗಳು 1.7.1985 ರಿಂದ ಜಾರಿಯಲ್ಲಿ ಬಂದಿರುತ್ತವೆ.

**ಕೋಷ್ಟಕ 9.2 : ಧಾರವಾಡ ಜಿಲ್ಲೆಯಲ್ಲಿ ಕಳೆದ 10 ವರ್ಷಗಳಲ್ಲಿ ವಸೂಲಾದ ಭೂ ಕಂದಾಯ, ನೀರಾವರಿ ಕರ ಇತ್ಯಾದಿಗಳ ವಿವರ ಹೀಗಿದೆ.**

| | ವಸೂಲಿ ವಿವರ | ಬೇಡಿಕೆ (ಲಕ್ಷಗಳಲ್ಲಿ) | ವಸೂಲಿ (ಲಕ್ಷಗಳಲ್ಲಿ) | ಬಾಕಿ (ಲಕ್ಷಗಳಲ್ಲಿ) |
|---|---|---|---|---|
| | **1985** | | | |
| 1) | ಭೂ ಕಂದಾಯ | 92.09 | 49.05 | 43.04 |
| 2) | ನೀರಾವರಿ ಮತ್ತು ನಿರ್ವಹಣೆ ಕರ | 174.41 | 4.31 | 170.10 |
| 3) | ನೀರಾವರಿ ದಂಡದ ಕರ | 0.22 | - | 0.22 |
| 4) | ಸಾಲಗಳು | 37.41 | 0.06 | 37.35 |
| 5) | ಇತರೆ ಸರಕಾರಿ ಬಾಕಿ | 412.59 | 55.65 | 356.94 |
| | ಒಟ್ಟು | 716.75 | 109.07 | 607.68 |
| | **1986** | | | |
| 1) | ಭೂ ಕಂದಾಯ | 85.19 | 10.90 | 74.29 |
| 2) | ನೀರಾವರಿ ಮತ್ತು ನಿರ್ವಹಣೆ ಕರ | 170.10 | 52.54 | 117.56 |
| 3) | ನೀರಾವರಿ ದಂಡದ ಕರ | 0.22 | 0.22 | - |
| 4) | ಸಾಲಗಳು | 37.75 | 8.02 | 29.33 |
| 5) | ಇತರೆ ಸರಕಾರಿ ಬಾಕಿ | 359.27 | 47.87 | 311.40 |
| | ಒಟ್ಟು | 652.13 | 119.55 | 532.58 |

| | ವಸೂಲಿ ವಿವರ | ಬೇಡಿಕೆ (ಲಕ್ಷಗಳಲ್ಲಿ) | ವಸೂಲಿ (ಲಕ್ಷಗಳಲ್ಲಿ) | ಬಾಕಿ (ಲಕ್ಷಗಳಲ್ಲಿ) |
|---|---|---|---|---|
| | | **1987** | | |
| 1) | ಭೂಕಂದಾಯ | 167.32 | 148.62 | 18.70 |
| 2) | ನೀರಾವರಿ ಮತ್ತು ನಿರ್ವಹಣೆ ಕರ | 117.56 | 15.86 | 101.70 |
| 3) | ನೀರಾವರಿ ದಂಡದ ಕರ | - | - | - |
| 4) | ಸಾಲಗಳು | 29.92 | 7.08 | 22.84 |
| 5) | ಇತರೆ ಸರಕಾರಿ ಬಾಕಿ | 432.63 | 273.34 | 159.29 |
| | ಒಟ್ಟು | 747.43 | 444.90 | 302.53 |
| | | **1988** | | |
| 1) | ಭೂ ಕಂದಾಯ | 68.77 | 68.77 | - |
| 2) | ನೀರಾವರಿ ಮತ್ತು ನಿರ್ವಹಣೆ ಕರ | 129.08 | 24.79 | 104.29 |
| 3) | ನೀರಾವರಿ ದಂಡದ ಕರ | - | - | - |
| 4) | ಸಾಲಗಳು | 40.60 | 14.18 | 26.42 |
| 5) | ಇತರೆ ಸರಕಾರಿ ಬಾಕಿ | 424.61 | 313.99 | 110.62 |
| | ಒಟ್ಟು | 603.06 | 421.73 | 241.33 |
| | | **1989** | | |
| 1) | ಭೂ ಕಂದಾಯ | 40.90 | 40.90 | - |
| 2) | ನೀರಾವರಿ ಕರ ಮತ್ತು ನಿರ್ವಹಣೆ ಕರ | 134.43 | 36.46 | 97.97 |
| 3) | ನೀರಾವರಿ ದಂಡದ ಕರ | 98.77 | - | 98.77 |
| 4) | ಸಾಲಗಳು | 132.64 | 55.00 | 77.64 |
| 5) | ಇತರೆ ಸರಕಾರಿ ಬಾಕಿ | 308.28 | 271.06 | 37.22 |
| | ಒಟ್ಟು | 715.02 | 403.42 | 311.60 |
| | | **1990** | | |
| 1) | ಭೂ ಕಂದಾಯ | 55.76 | 35.15 | 20.61 |
| 2) | ನೀರಾವರಿ ಮತ್ತು ನಿರ್ವಹಣೆ ಕರ | 151.28 | 26.22 | 125.06 |
| 3) | ನೀರಾವರಿ ದಂಡದ ಕರ | 533.88 | - | 533.88 |
| 4) | ಸಾಲಗಳು | 179.54 | 6.33 | 173.21 |
| 5) | ಇತರೆ ಸರಕಾರಿ ಬಾಕಿ | 231.92 | 158.90 | 73.02 |
| | ಒಟ್ಟು | 1,152.38 | 226.60 | 925.78 |

| | ವಸೂಲಿ ವಿವರ | ಬೇಡಿಕೆ (ಲಕ್ಷಗಳಲ್ಲಿ) | ವಸೂಲಿ (ಲಕ್ಷಗಳಲ್ಲಿ) | ಬಾಕಿ (ಲಕ್ಷಗಳಲ್ಲಿ) |
|---|---|---|---|---|
| | | **1991** | | |
| 1) | ಭೂ ಕಂದಾಯ | 52.14 | 34.10 | 18.04 |
| 2) | ನೀರಾವರಿ ಮತ್ತು ನಿರ್ವಹಣೆ ಕರ | 126.51 | 19.76 | 106.75 |
| 3) | ನೀರಾವರಿ ದಂಡದ ಕರ | 691.42 | 0.01 | 691.41 |
| 4) | ಸಾಲಗಳು | 222.81 | 9.09 | 213.72 |
| 5) | ಇತರೆ ಸರಕಾರಿ ಬಾಕಿ | 190.46 | 122.54 | 67.92 |
| | ಒಟ್ಟು | 1,283.34 | 185.50 | 1,097.84 |
| | | **1992** | | |
| 1) | ಭೂ ಕಂದಾಯ | 99.75 | 99.27 | 0.48 |
| 2) | ನೀರಾವರಿ ಮತ್ತು ನಿರ್ವಹಣೆ ಕರ | 134.99 | 45.32 | 89.67 |
| 3) | ನೀರಾವರಿ ದಂಡದ ಕರ | 815.59 | 0.09 | 815.50 |
| 4) | ಸಾಲಗಳು | 233.63 | 21.92 | 211.71 |
| 5) | ಇತರೆ ಸರಕಾರಿ ಬಾಕಿ | 286.18 | 154.30 | 131.88 |
| | ಒಟ್ಟು | 1,570.14 | 320.90 | 1,249.24 |
| | | **1993** | | |
| 1) | ಭೂ ಕಂದಾಯ | 95.32 | 95.32 | - |
| 2) | ನೀರಾವರಿ ಮತ್ತು ನಿರ್ವಹಣೆ ಕರ | 119.48 | 18.15 | 101.33 |
| 3) | ನೀರಾವರಿ ದಂಡದ ಕರ | 815.50 | - | 815.50 |
| 4) | ಸಾಲಗಳು | 235.35 | 6.10 | 229.25 |
| 5) | ಇತರೆ ಸರಕಾರಿ ಬಾಕಿ | 217.20 | 106.28 | 110.92 |
| | ಒಟ್ಟು | 1,482.85 | 225.85 | 1,257.00 |
| | | **1994** | | |
| 1) | ಭೂ ಕಂದಾಯ | 100.84 | 76.73 | 24.11 |
| 2) | ನೀರಾವರಿ ಮತ್ತು ನಿರ್ವಹಣೆ ಕರ | 158.03 | 31.20 | 126.83 |
| 3) | ನೀರಾವರಿ ದಂಡದ ಕರ | 1,371.77 | 0.18 | 1,371.59 |
| 4) | ಸಾಲಗಳು | 231.53 | 12.96 | 218.57 |
| 5) | ಇತರೆ ಸರಕಾರಿ ಬಾಕಿ | 314.79 | 145.75 | 169.04 |
| | ಒಟ್ಟು | 2,176.96 | 266.82 | 1,910.14 |

**ಕೋಷ್ಟಕ 9.3 : 1993-94 ನೇ ಸಾಲಿನ ತಾಲೂಕುವಾರು ಕಂದಾಯ ವಸೂಲಿ ವಿವರ ಸಾಧಿಸಿದ ಪ್ರಗತಿ ವಿವರ :**

| ಅ.ನಂ. | ತಾಲೂಕು | ಸರಕಾರಿ ಬಾಕಿ ವಿವರ | ನಿವ್ವಳ ಬೇಡಿಕೆ | ವಸೂಲಿ | ಬಾಕಿ |
|---|---|---|---|---|---|
| 1 | 2 | 3 | 4 | 5 | 6 |
| 1) | ಧಾರವಾಡ | 1) ಭೂ ಕಂದಾಯ ವಸ್ಸುಗಳು | 14.72 | 14.72 | - |
| | | 2) ನೀರಾವರಿ ಕರ | 0.56 | 0.49 | 0.07 |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 10.44 | 0.41 | 10.03 |
| | | 5) ಇತರೆ ಬಾಕಿ | 28.50 | 24.82 | 3.68 |
| | | ಒಟ್ಟು | 54.22 | 40.44 | 13.78 |
| 2) | ಹುಬ್ಬಳ್ಳಿ | 1) ಭೂ ಕಂದಾಯ ವ ಸೆಸ್ಸುಗಳು | 12.82 | 12.82 | - |
| | | 2) ನೀರಾವರಿ ಕರ | 4.05 | 2.70 | 1.35 |
| | | 3) ನೀರಿನ ದಂಡದ ಕರ | 20.46 | - | 20.46 |
| | | 4) ಸಾಲಗಳು | 2.76 | 0.20 | 2.56 |
| | | 5) ಇತರೆ ಬಾಕಿ | 31.43 | 17.88 | 13.55 |
| | | ಒಟ್ಟು | 71.52 | 33.60 | 37.92 |
| 3) | ಕಲಘಟಗಿ | 1) ಭೂ ಕಂದಾಯ ವ ಸೆಸ್ಸುಗಳು | 1.70 | 1.70 | - |
| | | 2) ನೀರಾವರಿ ಕರ | - | - | - |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 2.83 | 0.38 | 2.45 |
| | | 5) ಇತರೆ ಬಾಕಿ | 19.34 | 6.87 | 14.55 |
| | | ಒಟ್ಟು | 23.87 | 6.87 | 17.00 |
| 4) | ನವಲಗುಂದ | 1) ಭೂ ಕಂದಾಯ ವ ಸೆಸ್ಸುಗಳು | 3.72 | 3.72 | - |
| | | 2) ನೀರಾವರಿ ಕರ | 56.98 | 6.43 | 50.55 |
| | | 3) ನೀರಿನ ದಂಡದ ಕರ | 471.90 | - | 471.90 |
| | | 4) ಸಾಲಗಳು | 7.93 | 0.32 | 7.61 |
| | | 5) ಇತರೆ ಬಾಕಿ | 7.62 | 5.71 | 1.91 |
| | | ಒಟ್ಟು | 548.15 | 16.18 | 531.97 |
| 5) | ಸವಣೂರ | 1) ಭೂ ಕಂದಾಯ ವ ಸೆಸ್ಸುಗಳು | 1.38 | 1.38 | - |

| 1 | 2 | 3 | 4 | 5 | 6 |
|---|---|---|---|---|---|
| | | 2) ನೀರಾವರಿ ಕರ | 0.31 | 0.08 | 0.23 |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 6.46 | 0.42 | 6.04 |
| | | 5) ಇತರೆ ಬಾಕಿ | 13.73 | 7.29 | 6.44 |
| | | ಒಟ್ಟು | 21.88 | 9.17 | 12.71 |
| 6) | ಕುಂದಗೋಳ | 1) ಭೂ ಕಂದಾಯ ವ ಸೆಸ್ಸುಗಳು | 4.38 | 4.38 | - |
| | | 2) ನೀರಾವರಿ ಕರ | - | - | - |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 18.75 | 1.20 | 17.59 |
| | | 5) ಇತರೆ ಬಾಕಿ | 13.73 | 7.29 | 6.44 |
| | | ಒಟ್ಟು | 21.88 | 9.17 | 12.71 |
| 7) | ಶಿರಹಟ್ಟಿ | 1) ಭೂ ಕಂದಾಯ ವ ಸೆಸ್ಸುಗಳು | 3.05 | 3.05 | - |
| | | 2) ನೀರಾವರಿ ಕರ | 1.10 | 0.48 | 0.62 |
| | | 3) ನೀರಿನ ದಂಡವ ಕರ | - | - | - |
| | | 4) ಸಾಲಗಳು | 29.08 | 1.89 | 27.19 |
| | | 5) ಇತರೆ ಬಾಕಿ | 10.59 | 6.48 | 4.11 |
| | | ಒಟ್ಟು | 43.82 | 11.90 | 31.92 |
| 8) | ಹಾನಗಲ್ | 1) ಭೂ ಕಂದಾಯ ವ ಸೆಸ್ಸುಗಳು | 2.62 | 2.62 | - |
| | | 2) ನೀರಾವರಿ ಕರ | 9.81 | 5.20 | 4.61 |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 3.59 | 0.13 | 3.46 |
| | | 5) ಇತರೆ ಬಾಕಿ | 14.52 | 14.17 | 0.35 |
| | | | 30.54 | 22.12 | 8.42 |
| 9) | ಶಿಗ್ಗಾಂವಿ | 1) ಭೂ ಕಂದಾಯ ವ ಸೆಸ್ಸುಗಳು | 1.75 | 1.75 | - |
| | | 2) ನೀರಾವರಿ ಕರ | - | - | - |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 5.30 | 1.04 | 4.26 |
| | | 5) ಇತರೆ ಬಾಕಿ | 3.51 | 3.26 | 0.25 |
| | | ಒಟ್ಟು | 10.56 | 6.05 | 4.51 |

| 1 | 2 | 3 | 4 | 5 | 6 |
|---|---|---|---|---|---|
| 10) | ಗದಗ | 1) ಭೂ ಕಂದಾಯ ವ ಸೆಸ್ಸುಗಳು | 35.51 | 11.40 | 24.11 |
| | | 2) ನೀರಾವರಿ ಕರ | 0.05 | 0.05 | - |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 54.17 | 0.13 | 54.04 |
| | | 5) ಇತರೆ ಬಾಕಿ | 39.47 | 3.92 | 35.55 |
| | | ಒಟ್ಟು | 129.20 | 15.50 | 113.70 |
| 11) | ಮುಂಡರಗಿ | 1) ಭೂ ಕಂದಾಯ ವ ಸೆಸ್ಸುಗಳು | 1.57 | 1.57 | - |
| | | 2) ನೀರಾವರಿ ಕರ | 3.73 | 0.65 | 3.08 |
| | | 3) ನೀರಿನ ದಂಡದ ಕರ | 0.24 | 0.02 | 0.22 |
| | | 4) ಸಾಲಗಳು | 4.09 | 0.25 | 3.84 |
| | | 5) ಇತರೆ ಬಾಕಿ | 8.07 | 1.35 | 6.72 |
| | | ಒಟ್ಟು | 17.70 | 3.84 | 13.86 |
| 12) | ನರಗುಂದ | 1) ಭೂ ಕಂದಾಯ ವ ಸೆಸ್ಸುಗಳು | 3.19 | 3.19 | - |
| | | 2) ನೀರಾವರಿ ಕರ | 67.36 | 12.55 | 54.81 |
| | | 3) ನೀರಿನ ದಂಡದ ಕರ | 851.18 | - | 851.18 |
| | | 4) ಸಾಲಗಳು | 0.85 | 0.85 | - |
| | | 5) ಇತರೆ ಬಾಕಿ | 4.72 | 0.43 | 4.29 |
| | | ಒಟ್ಟು | 927.30 | 17.02 | 910.28 |
| 13) | ರೋಣ | 1) ಭೂ ಕಂದಾಯ ವ ಸೆಸ್ಸುಗಳು | 3.67 | 3.67 | - |
| | | 2) ನೀರಾವರಿ ಕರ | 5.70 | 1.03 | 4.67 |
| | | 3) ನೀರಿನ ದಂಡದ ಕರ | 26.16 | 0.16 | 26.00 |
| | | 4) ಸಾಲಗಳು | 66.07 | 1.38 | 64.69 |
| | | 5) ಇತರೆ ಬಾಕಿ | 23.93 | 5.45 | 18.48 |
| | | ಒಟ್ಟು | 125.53 | 11.69 | 113.84 |
| 14) | ಹಾವೇರಿ | 1) ಭೂ ಕಂದಾಯ ವ ಸೆಸ್ಸುಗಳು | 3.47 | 3.47 | - |
| | | 2) ನೀರಾವರಿ ಕರ | 0.48 | 0.48 | - |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 2.03 | 2.03 | - |
| | | 5) ಇತರೆ ಬಾಕಿ | 13.16 | 9.18 | 3.98 |
| | | ಒಟ್ಟು | 19.14 | 15.16 | 3.98 |

| 1 | 2 | 3 | 4 | 5 | 6 |
|---|---|---|---|---|---|
| 15) | ಬ್ಯಾಡಗಿ | 1) ಭೂ ಕಂದಾಯ ವ ಸೆಸ್ಸುಗಳು | 3.10 | 3.10 | - |
| | | 2) ನೀರಾವರಿ ಕರ | - | - | - |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 6.20 | 1.35 | 4.85 |
| | | 5) ಇತರ ಬಾಕಿ | 13.62 | 9.08 | 4.54 |
| | | ಒಟ್ಟು | 22.92 | 13.53 | 9.39 |
| 16) | ಹಿರೇಕೆರೂರ | 1) ಭೂ ಕಂದಾಯ ವ ಸೆಸ್ಸುಗಳು | 1.79 | 1.79 | - |
| | | 2) ನೀರಾವರಿ ಕರ | 2.35 | 0.88 | 1.47 |
| | | 3) ನೀರಿನ ದಂಡದ ಕರ | - | - | - |
| | | 4) ಸಾಲಗಳು | 7.39 | 0.36 | 7.05 |
| | | 5) ಇತರೆ ಬಾಕಿ | 8.86 | 5.59 | 3.26 |
| | | ಒಟ್ಟು | 20.39 | 8.60 | 11.79 |
| 17) | ರಾಣೆಬೆನ್ನೂರ | 1) ಭೂ ಕಂದಾಯ ವ ಸೆಸ್ಸುಗಳು | 2.40 | 2.40 | - |
| | | 2) ನೀರಾವರಿ ಕರ | 5.55 | 0.18 | 5.37 |
| | | 3) ನೀರಿನ ದಂಡದ ಕರ | 1.83 | - | 1.83 |
| | | 4) ಸಾಲಗಳು | 3.55 | 0.64 | 2.91 |
| | | 5) ಇತರೆ ಬಾಕಿ | 56.47 | 20.57 | 35.90 |
| | | ಒಟ್ಟು | 69.80 | 23.79 | 46.01 |

**ಇನಾಂಗಳ ರದ್ದತಿ**

ಧಾರವಾಡ ಜಿಲ್ಲೆಯಲ್ಲಿ ಈ ಕೆಳಗೆ ಕಾಣಿಸಿದ ಇನಾಮುಗಳು ಇದ್ದವು: (1) ಮುಂಬಯಿ ಪರಗಣಾ ಮತ್ತು ಕುಲಕರ್ಣಿಕಿ ವತನ ಇನಾಂ; (2) ಮುಂಬಯಿ ವೈಯಕ್ತಿಕ (ಪರ್ಸನಲ್) ಇನಾಂ; (3) ಮುಂಬಯಿ ಸೇವಾ (ಸರ್ವೀಸ್) ಇನಾಂ (ಸಮಾಜಕ್ಕೆ ಉಪಯುಕ್ತವಾಗಲು); (4) ಮುಂಬಯಿ ವಿಲೀನ ಸಂಸ್ಥಾನಗಳ ಮತ್ತು ಪ್ರದೇಶಗಳ (ಜಹಗೀರುಗಳ) ಇನಾಂ; (5) ಮುಂಬಯಿ ವಿಲೀನ ಸಂಸ್ಥಾನಗಳ ಮಿಸಲೇನಿಯಸ್ ಇನಾಂ; ಮತ್ತು (6) ಮುಂಬಯಿ ಸರಂಜಾಮು ಜಹಗೀರುಗಳ ಮತ್ತು ಇತರ ರಾಜಕೀಯ ಸ್ವರೂಪದ ಇನಾಂ. 1843-44 ರ ಇನಾಂ ಕಮಿಶನ್ ಬಹುಪಾಲು ಇನಾಂಗಳನ್ನು ರದ್ದುಮಾಡಿದ ವಿಚಾರ ಅಧ್ಯಾಯ ಎರಡರಲ್ಲಿ ಗಮನಿಸಿದೆ.

1) **ಪರಗಣಾ ಮತ್ತು ಕುಲಕರ್ಣಿಕಿ ವತನ:** ಜಿಲ್ಲೆಯಲ್ಲಿದ್ದ ಆನುವಂಶಿಕ ಅಧಿಕಾರಿಗಳನ್ನು ಪರಗಣಾ ಮತ್ತು ಕುಲಕರ್ಣಿ ವತನದಾರರೆಂದು ಕರೆಯಲಾಗುತ್ತಿತ್ತು. ಅವರಲ್ಲಿ ಕೆಲವರ ಹುದ್ದೆಗಳು (1) ದೇಶಮುಖ, ದೇಸಾಯಿ, ನಾಡಗೌಡ, ಹೆಡ್ ಪಾಟೀಲ (2) ದೇಶಪಾಂಡೆ, ಕುಲಕರ್ಣಿ, ಹೆಡ್ ಕುಲಕರ್ಣಿ ಎಂದು ಇದ್ದವು. ಹೆಡ್ ಪಾಟೀಲರು ಸರಕಾರದ ಬಾಕಿ ಹಣ ವಸೂಲಿ ಮಾಡುವ ಜವಾಬ್ದಾರಿಯನ್ನು ಹೊಂದಿದ್ದರು. ಹೆಡ್ ಕುಲಕರ್ಣಿಗಳು ಲೆಕ್ಕಪತ್ರಗಳನ್ನು ಇಡುವುದು ಹಾಗೂ ಸಂಬಂಧಪಟ್ಟ ಪತ್ರ ವ್ಯವಹಾರ ಮಾಡುವ ಜವಾಬ್ದಾರಿಯನ್ನು ಹೊಂದಿದ್ದರು. ಇವರ ಈ ಕೆಲಸಗಳ ಸಲುವಾಗಿ ಇನಾಂಗಳನ್ನು ಹಾಕಿ ಕೊಡಲಾಗಿತ್ತು. ಈ ಇನಾಮನ್ನು ಬಿ.ಪಿ. ಮತ್ತು ಕೆ.ಡಬ್ಲ್ಯೂ.ಎ. ಆಕ್ಟ್ 1950 ರ ಪ್ರಕಾರ ದಿನಾಂಕ 1.5.1951 ರಂದು ರದ್ದುಪಡಿಸಲಾಗಿರುವುದು. ಇದರಿಂದಾಗಿ

1,73,311-17 ಎಕರೆ ಜಮೀನು ಸರಕಾರದ ವಶಕ್ಕೆ ಬಂದಿತು. ಇದರಲ್ಲಿ 1,73,308-32 ಎಕ್ರೆ ಜಮೀನನ್ನು ಪುನರ್ಹಂಚಿಕೆ (ರಿಗ್ರ್ಯಾಂಟ್) ಮಾಡಿದೆ.

2) **ವೈಯಕ್ತಿಕ ಇನಾಂ :** ಮುಂಬಯಿ ವೈಯಕ್ತಿಕ (ಪರ್ಸನಲ್) ಇನಾಂ ('ಜೂಟ್ ಇನಾಮ್ಸು') 1953 ರ ವರೆಗೆ ಪ್ರಚಲಿತದಲ್ಲಿತ್ತು. ದಿನಾಂಕ 1.8.1952 ರಿಂದ ಜಾರಿಯಲ್ಲಿ ಬರುವಂತೆ ಮುಂಬಯಿ ಪರ್ಸನಲ್ ಇನಾಂ ರದ್ಧತಿ ಕಾಯ್ದೆ 1953 ರ ಪ್ರಕಾರ ಈ ಇನಾಂಗಳನ್ನು ರದ್ದುಪಡಿಸಲಾಗಿರುವುದು. ಈ ಇನಾಂ ರದ್ದತಿಯಿಂದ 5,065-34 ಎಕರೆ ಜಮೀನು ಸರಕಾರದ ವಶಕ್ಕೆ ಬಂದಿತು. ಇದರಲ್ಲಿ ಪುನಃ ಹಂಚಿದ ಜಮೀನು 5,065-34 ಎಕ್ರೆ.

3) **ಸೇವಾ ಇನಾಂ :** ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸಮುದಾಯ (ಕಮ್ಯುನಿಟಿ)ಕ್ಕೆ ಉಪಯೋಗವಾಗುವಂತಹ ಸೇವೆಗಳನ್ನು ಮಾಡುತ್ತಿದ್ದ ಜೋಯಿಸ, ಜಂಗಮ, ಖಾಜಿ, ಮುಲ್ಲಾ ಮುಂತಾದವರಿಗೆ ಮುಂಬಯಿ ಸೇವಾ (ಸರ್ವೀಸ್) ಇನಾಂಗಳನ್ನು ಒದಗಿಸಲಾಗಿತ್ತು. ಈ ಇನಾಂ ದಿನಾಂಕ 1.4.1954 ರಿಂದ ಅನ್ವಯವಾಗುವಂತೆ ಮುಂಬಯಿ ಸರ್ವೀಸ್ ಇನಾಂ (ಗ್ರಾಮದ ಕಮ್ಯುನಿಟಿಗೆ ಉಪಯುಕ್ತವಾಗುವ) ರದ್ದತಿ ಕಾಯ್ದೆ 1953 ರ ಪ್ರಕಾರ ರದ್ದುಪಡಿಸಲಾಗಿರುವುದು. ಇದರಿಂದಾಗಿ 19,774-28 ಎಕರೆ ಜಮೀನು ಸರಕಾರದ ವಶಕ್ಕೆ ಬಂದಿತು ; 19,729-04 ಎಕ್ರೆ ಪುನಃ ಹಂಚಲ್ಪಟ್ಟಿತು.

4) **ಸಂಸ್ಥಾನಗಳ ವಿವಿಧೋದ್ದೇಶ ಇನಾಂ :** (1) ಸವಣೂರ (2) ಶಿರಹಟ್ಟಿ (3) ಕುಂದಗೋಳ (4) ಮುಂಡರಗಿ (5) ಶಿಗ್ಗಾಂವ (6) ನರಗುಂದ ತಾಲೂಕುಗಳಲ್ಲಿ ಹಿಂದಿನ ಸಂಸ್ಥಾನಗಳ ಪ್ರದೇಶಗಳ ವಿವಿಧೋದ್ದೇಶ (ಮಿಸಲೇನಿಯಸ್) ಗ್ರಾಮಗಳಿದ್ದವು. ವಿಲೀನ ಸಂಸ್ಥಾನಗಳಿಗೊಳಪಟ್ಟ ಜಮೀನುಗಳ ಹಸ್ತಾಂತರವನ್ನು ದಿನಾಂಕ 1.8.1955 ರಿಂದ ಮುಂಬಯಿ ವಿಲೀನ ಸಂಸ್ಥಾನ ಮಿಸಲೇನಿಯಸ್ ಹಸ್ತಾಂತರ ರದ್ದತಿ ಕಾಯ್ದೆ 1955 ರ ಪ್ರಕಾರ ರದ್ದುಪಡಿಸಿದರು. ಈ ಇನಾಂ ರದ್ದತಿಯಿಂದ 30,394-03 ಎಕರೆ ಜಮೀನು ಸರಕಾರದ ವಶಕ್ಕೆ ಬಂದಿತು. ಈ ಪೈಕಿ 30,393-29 ಎಕ್ರೆ ಪುನರ್ ಪ್ರದಾನ (ವಿತರಣೆ) ಆಗಿದೆ.

5) **ಸಂಸ್ಥಾನಗಳ ಜಹಗೀರಿ ಇನಾಂಗಳು :** ಮುಂಬಯಿ ರಾಜ್ಯದಲ್ಲಿ ವಿಲೀನಗೊಂಡ ಸಂಸ್ಥಾನಗಳಲ್ಲಿ ಇದ್ದಂಥ ಜಹಗೀರುಗಳಿಗೆ ಇದು ಅನ್ವಯಿಸುತ್ತದೆ. ವಿಲೀನಗೊಂಡ ಸಂಸ್ಥಾನಗಳಿಗೊಳಪಟ್ಟ ಜಮೀನುಗಳ ಹಸ್ತಾಂತರವು ಮುಂಬಯಿ ವಿಲೀನ ಸಂಸ್ಥಾನಗಳ ಮತ್ತು ಪ್ರದೇಶಗಳ (ಜಹಗೀರ) ರದ್ದತಿ ಕಾಯ್ದೆ 1953 ರ ಪ್ರಕಾರ ರದ್ದುಪಡಿಸಲ್ಪಟ್ಟಿರುವುದು. ಈ ಇನಾಂ ರದ್ಧತಿಯಿಂದ 241-21 ಎಕರೆ ಜಮೀನು ಸರಕಾರದ ವಶಕ್ಕೆ ಬಂದಿತು. ಇದನ್ನೆಲ್ಲ ಮತ್ತೆ ಹಂಚಲಾಗಿದೆ.

6) **ಸರಂಜಾಮ ಜಹಗೀರುಗಳು, ರಾಜಕೀಯ ಸ್ವರೂಪದ ಇನಾಂಗಳು :** ಹಿಂದಿನ ಸರಕಾರದಲ್ಲಿ ಅಂದರೆ ರಾಜರ (ಸಂಸ್ಥಾನಿಕರ) ಆಳ್ವಿಕೆ ಕಾಲದಲ್ಲಿ ರಾಜ್ಯದ ಆರ್ಥಿಕ ಭದ್ರತೆಯನ್ನು ಕಾಯ್ದುಕೊಂಡು ಹೋಗುವ ಸಲುವಾಗಿ ಹಾಗೂ ಕೃಷಿಕರಿಂದ ತಾತ್ಪೂರ್ತಿಕವಾಗಿ ಕಂದಾಯ ವಸೂಲಿ ಮಾಡುವ ಉದ್ದೇಶದಿಂದ ಕೆಲವರನ್ನು ನೇಮಿಸಿ ಅವರಿಗೆ ಪ್ರತಿಫಲವಾಗಿ ಇನಾಂಗಳನ್ನು ಕೊಡಲಾಗಿತ್ತು. ಇನಾಂದಾರರು ರಾಜರಿಗೆ ನಿಷ್ಠರಾಗಿ ಸಂಸ್ಥಾನದ ಘನತೆ ಹೆಚ್ಚಿಸುವರೆಂಬ ಕಲ್ಪನೆ ಇತ್ತು. ಈ ರೀತಿ ಇನಾಂಗಳನ್ನು ಹೊಂದಿದವರಿಗೆ ಕಂದಾಯ ವಸೂಲಿ ಜೊತೆ ಆಡಳಿತ ನಡೆಸುವ ಕೆಲವೊಂದು ಅಧಿಕಾರಗಳನ್ನು ಕೊಡಲಾಗುತ್ತಿತ್ತು. ಮುಸಲ್ಮಾನರ ಆಳ್ವಿಕೆಯಲ್ಲಿ ಈ ರೀತಿ ಇನಾಂಗಳಿಗೆ 'ಜಹಗೀರ್' ಅಂತಲೂ ಮರಾಠಾ ಆಳ್ವಿಕೆಯಲ್ಲಿ 'ಸರಂಜಾಮ' ಅಂತಲೂ ಕರೆಯಲಾಗುತ್ತಿತ್ತು. ಧಾರವಾಡ ಜಿಲ್ಲೆಯಲ್ಲಿ (1) ಹೆಬ್ಬಳ್ಳಿ ಹಾಗೂ (2) ಗಜೇಂದ್ರಗಡ ಹೀಗೆ ಎರಡು ಸರಂಜಾಮಗಳಿದ್ದವು. ಮುಂಬಯಿ ಸರಂಜಾಮ ಜಹಗೀರ ಮತ್ತು ಇತರೇ ರಾಜಕೀಯ ಸ್ವರೂಪದ ಇನಾಂ ರದ್ದತಿ ಕಾಯ್ದೆ 1952 ರ ಪ್ರಕಾರ ದಿನಾಂಕ 1.11.1952 ಕ್ಕೆ ಅನ್ವಯವಾಗುವಂತೆ ಇಂತಹ ಇನಾಮುಗಳನ್ನು ರದ್ದುಪಡಿಸಲಾಯಿತು. ಇದರಿಂದಾಗಿ 47,873-27 ಎಕರೆ ಜಮೀನು ಸರ್ಕಾರದ ವಶಕ್ಕೆ ಬಂದಿತು. ಈ ಎಲ್ಲ ಜಮೀನು ಪುನರ್ಹಂಚಿಕೆಯಾಗಿದೆ.

**ಜಮಾಬಂದಿ ಪದ್ಧತಿ**

ಜಮಾ ಎಂದರೆ ಸರಕಾರಕ್ಕೆ ಬರಬೇಕಾದ ಪಾಲು, 'ಬಂದ' ಎಂದರೆ ಸರಕಾರಕ್ಕೆ ಬರುವ ಆದಾಯ ನಿಗದಿಪಡಿಸುವುದು, ಎಂದು ಅರ್ಥ. ರಾಜನಿಗೆ ಬರಬೇಕಾದ ಪಾಲನ್ನು (ರಾಜಸ್ವ) ನಿಗದಿಪಡಿಸುವುದು ಬಹು ಹಿಂದಿನಿಂದಲೂ ನಡೆದು ಬಂದಿದೆ. ಅದೇ ರೀತಿ

ಸರಕಾರಕ್ಕೆ ಬರುವ ಕಂದಾಯ (ರಾಜಸ್ವ) ನಿಗದಿಪಡಿಸುವುದೇ ಜಮಾಬಂದಿ. ಆಕಾರ ಬಂದ್ ಶಬ್ದವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. 'ಆಕಾರ' (ಆಕರಣೆ) ಎಂದರೆ ಒಂದು ನಿರ್ದಿಷ್ಟ ಜಮೀನಿನಲ್ಲಿ ಉತ್ಪತ್ತಿಯ ಒಂದಂಶವನ್ನು ಸರ್ಕಾರದ ಪಾಲೆಂದು ನಿಗದಿಪಡಿಸಿ ಹಣದ ರೂಪದಲ್ಲಿ ವಸೂಲ ಮಾಡಬೇಕಾದ ಮೊಬಲಗೆಷ್ಟು ಎಂದು ಹೇಳುವುದು. 'ಬಂದ್' ಎಂದರೆ ನಿರ್ಧಾರ ಪಡಿಸುವುದು. ಈ ಆಕರಣೆಯೇ ಭೂ ಕಂದಾಯ. ಕರ್ನಾಟಕ ರಾಜ್ಯವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಪ್ರತಿ 30 ವರ್ಷಗಳಿಗೊಮ್ಮೆ ಪ್ರತೀಯೊಂದು ಜಮೀನನ್ನು ಅಳತೆ ಮಾಡಿಸಿ ಅದರ ಫಲವತ್ತತೆ, ಉತ್ಪತ್ತಿ, ಮಳೆ ಇತ್ಯಾದಿಗಳ ಆಧಾರದ ಮೇಲೆ ಆಕಾರಬಂದ ತಯಾರಿಸಿ ಅದರ ಆಧಾರದ ಮೇಲೆ ಭೂ ಕಂದಾಯ ನಿರ್ಧರಿಸುವರು.

ಭೂ ಕಂದಾಯ ನಿಗದಿಯಾದ ಜಮೀನುಗಳ ಅದಿಭೋಗದಾರರು ಪ್ರತಿ ಕಂದಾಯ ಸಾಲಿಗೂ ಭೂ ಕಂದಾಯ ಕೊಡಬೇಕಾಗುತ್ತದೆ. ಪ್ರತಿಯೊಂದು ಜಮೀನಿನ ಅದಿಭೋಗದಾರನು ಪ್ರಸ್ತುತ ಕಂದಾಯ ಸಾಲಿಗೆ ಕೊಡಬೇಕಾದ ಭೂ ಕಂದಾಯವೆಷ್ಟು, ಸೆಸ್ಸುಗಳೆಷ್ಟು ಎಂಬುದನ್ನು ಜಿಲ್ಲಾಧಿಕಾರಿಗಳು ನಿರ್ಧರಿಸುವರು. ಜುಲೈ 1 ನೇ ತಾರೀಖಿನಿಂದ ಜೂನ್ 30 ನೇ ತಾರೀಖಿನ ಅವಧಿಗೆ ಕಂದಾಯ ವರ್ಷವೆನ್ನುವರು. ಪ್ರತೀಯೊಂದು ಅದಿಭೋಗದಾರನ ಲೆಕ್ಕವನ್ನು ಜಿಲ್ಲಾಧಿಕಾರಿಗಳು ಅಥವಾ ಉಪ ವಿಭಾಗಾಧಿಕಾರಿಗಳು ದೃಢೀಕರಿಸಬೇಕಾಗುತ್ತದೆ. ಈ ರೀತಿ ಕಂದಾಯ ಸಾಲಿನ ಲೆಕ್ಕಗಳನ್ನು ದೃಢೀಕರಿಸುವ ಕಾರ್ಯವನ್ನು ವಿಶೇಷಾರ್ಥದಲ್ಲಿ 'ಹುಜೂರ ಜಮಾಬಂದಿ' ಎಂದು ಕರೆಯುತ್ತಾರೆ.

ಹುಜೂರ ಜಮಾಬಂದಿಗೆ ಪೂರ್ವಭಾವಿಯಾಗಿ ಮಾಡುವುದೇ ತಾಲೂಕ ಅಥವಾ 'ದಿತ್ತಂ' ಜಮಾಬಂದಿ. ಇದನ್ನು ಆಯಾ ತಾಲೂಕಿನ ತಹಶೀಲದಾರರು ನಡೆಸುತ್ತಾರೆ. ಹುಜೂರ ಜಮಾಬಂದಿ ಡಿಸೆಂಬರ್ ಅಂತ್ಯದ ವೇಳೆಗೆ ಮುಗಿಯಬೇಕಾಗುತ್ತದೆ. ಅಂದರೆ ದಿತ್ತಂ ಜಮಾಬಂದಿಯನ್ನು ಅದಕ್ಕೆ ಒಂದು ತಿಂಗಳ ಪೂರ್ವದಲ್ಲಿಯೇ ಮುಗಿಸಬೇಕು. ತಾಲೂಕ ದಿತ್ತಂ ಜಮಾಬಂದಿಯಲ್ಲಿ (1) ಕಳೆದ ಕಂದಾಯ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸುವುದು ಹಾಗೂ (2) ಪ್ರಸ್ತುತ ಸಾಲಿನ ಕಂದಾಯ ಲೆಕ್ಕಗಳನ್ನು ಸಿದ್ಧಪಡಿಸುವುದು.

(ಅ) ಕಳೆದ ಸಾಲಿನ ಲೆಕ್ಕಗಳನ್ನು ಮುಕ್ತಾಯ ಮಾಡುವಾಗ (1) ರಸೀದಿ ಪುಸ್ತಕ, (2) ಖಿರ್ದಿ ಪುಸ್ತಕ, (3) ಖಾತೆ, (4) ಕಮ್ ಜಾಸ್ತಿ (ಹೆಚ್ಚು ಕಡಿಮೆ) ಘೋಷವಾರೆ, (5) ತಾಲೂಕ ಭೂ ಕಂದಾಯ ಡೇ ಬುಕ್ಕ (ದೈನಿಕ ವಹಿ), (6) ತಾಲೂಕು ಭೂ ಕಂದಾಯ ಲೆಡ್ಜರು (ಹೊತ್ತಿಗೆ), (7) ಡಿ.ಸಿ.ಬಿ. ರಿಜಿಸ್ಟರ, (8) ಕುಳ (ಹಿಡುವಳಿದಾರ) ವಾರ ಬಾಕಿ ಪಟ್ಟಿ, (9) ಇತರೇ ಸರಕಾರಿ ಬಾಕಿಗಳ ಖಾತೆಗಳು ಇವುಗಳನ್ನು ಪರಿಶೀಲಿಸಬೇಕು. (ಬ) ಪ್ರಸ್ತುತ ಸಾಲಿನ ಲೆಕ್ಕಗಳನ್ನು ಸಿದ್ಧಪಡಿಸುವಾಗ (1) ಚಾಲ್ತಿ ಸಾಲಿನ ಖಾತೆ, (2) ಚಾಲ್ತಿ ಸಾಲಿನ ಖಿರ್ದಿ, (3) ಹಕ್ಕು ದಾಖಲೆ ಆರ್.ಟಿ.ಸಿ., (4) ಹಕ್ಕು ದಾಖಲೆ ಬದಲಾವಣೆ ರಿಜಿಸ್ಟರ್, (5) ವಿವಾದಾಸ್ಪದ ಪ್ರಕರಣಗಳ ರಿಜಿಸ್ಟರ್, (6) ಇನಾಂ ರಿಜಿಸ್ಟರ್, (7) ಬಂಜರು ಭೂಮಿ ತಖ್ತೆ, (8) ಅತಿಕ್ರಮಣ ಪ್ರಸಂಗಗಳ ರಿಜಿಸ್ಟರ್, (9) ಕಮ್ ಜಾಸ್ತಿ ಘೋಷವಾರೆ, (10) ಆಕಾರ ಬಂದ, (11) ಚಾಲ್ತಿ ಸಾಲಿನ ಡಿ.ಸಿ.ಬಿ. ರಿಜಿಸ್ಟರ್, (12) ಚಾಲ್ತಿ ಸಾಲಿನ ಕುಳ (ಹಿಡುವಳಿದಾರ) ಬಾಕಿಪಟ್ಟಿ, (13) ಇತರೇ ಸರ್ಕಾರಿ ಬಾಕಿಗಳ ಖಾತೆಗಳು ಮುಂತಾದವುಗಳನ್ನು ಪರಿಶೀಲಿಸಬೇಕಾಗುತ್ತದೆ.

ಮೇಲ್ಕಂಡ ರಿಜಿಸ್ಟರುಗಳಲ್ಲದೆ ಪ್ರತೀಯೊಬ್ಬ ಗ್ರಾಮಲೆಕ್ಕಾಧಿಕಾರಿಯು ಪ್ರತೀಯೊಂದು ಗ್ರಾಮಕ್ಕೆ ಪ್ರತ್ಯೇಕವಾದ ಆದರ್ಶ ತಖ್ತೆ, ನಕಾಶೆ, ಟಿಪ್ಪಣಿ ಪುಸ್ತಕ, ಗ್ರಾಮಲೆಕ್ಕಿಗರ ದಿನಚರಿ, ಮೇಲಾಧಿಕಾರಿಗಳ ಭೇಟಿ ಪುಸ್ತಕ ಮುಂತಾದವುಗಳನ್ನು ನಿರ್ವಹಿಸಿದ್ದಾರೆಯೇ ಎಂಬುದನ್ನು ನೋಡಬೇಕು.

ಜಮಾಬಂದಿಯನ್ನು ಆಯಾ ಕಂದಾಯ ಆಡಳಿತ ಘಟಕದ ಕೇಂದ್ರಸ್ಥಾನದಲ್ಲಿ ಮಾಡಬೇಕೆಂದು ನಿಯಮವಿದೆ.

**ಭೂಕಂದಾಯ ವಸೂಲಿ**

ಪ್ರತೀವರ್ಷ ಜನವರಿ 1 ರಿಂದ ರೈತರಿಂದ ಭೂಕಂದಾಯ ಬಾಕಿ ಇದೆಯೆಂದು ಎಣಿಸಿ, ಜನವರಿಯಿಂದ ಜೂನ್ ಕೊನೆಯವರೆಗಿನ ಅವಧಿಯನ್ನು 'ಕಿಸ್ತು' ಅಥವಾ 'ಮೋಸಂ' ಎಂದು ಕರೆಯಲಾಗುವುದು. ಒಂದು ಖಚಿತ ಕಂತಿಗೆ ಪಾವತಿಯಾಗದ ಮೊತ್ತವು 'ಬಾಕಿ' ಎಂದು ಭಾವಿಸಲ್ಪಟ್ಟು ಬಾಕಿದಾರನು, 'ದೋಷಿ' ಎಂದು ಪರಿಗಣಿಸಲ್ಪಡುವನು. ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್

ತಿಂಗಳುಗಳ 20ಕ್ಕೆ ಕೊಡಬೇಕಾದ ಒಂದೊಂದು ಕಂತೂ ಸಕಾಲದಲ್ಲಿ ಪಾವತಿಯಾಗಬೇಕು. ವಸೂಲಾತಿ ಪ್ರಕ್ರಿಯೆಯು ಜನವರಿಯಲ್ಲಿ ರೈತನಿಗೆ 'ಡಿಮ್ಯಾಂಡ್ ನೋಟೀಸ್' ಅಥವಾ ಬೇಡಿಕೆ ಪತ್ರ ಬಂದಾಗ ಆರಂಭವಾಗಿ, ಮುಂದೆ ಸರಿಯಾದ ಅವಧಿಯಲ್ಲಿ ಬಾಕಿ ವಸೂಲಿ ಆಗದಿದ್ದರೆ, ಈ ವಿಚಾರ ಒಂದು ವಾರದೊಳಗೆ ತಹಶಿಲ್ದಾರರ ಗಮನಕ್ಕೆ ತಂದು ಬಾಕಿದಾರನ ಚರ ಆಸ್ತಿಯನ್ನು ಜಪ್ತಿ ಮಾಡಲು ಆಜ್ಞೆ ಪಡೆದುಕೊಳ್ಳಬೇಕು ಎಂದು ಕರ್ನಾಟಕ ಭೂಕಂದಾಯ ಅಧಿನಿಯಮ 1966 ರಲ್ಲಿ ಹೇಳಿದೆ. ಇಂಥ ಜಪ್ತಾದ ಆಸ್ತಿ ಮಾರಾಟಕ್ಕೆ ಇಡುವ ಮೊದಲು ಜಿಲ್ಲಾಧಿಕಾರಿ ಇಲ್ಲವೇ ಅವರಿಂದ ಅಧಿಕೃತರಾದ ಯಾವುದೇ ಅಧಿಕಾರಿ ಈ ಬಗ್ಗೆ ಸೂಕ್ತ ಪ್ರಕಟಣೆ (ನೋಟೀಸು) ಜಾರಿ ಮಾಡಬೇಕು. ಮಾರಾಟದಿಂದ ಬಂದ ಮೊತ್ತ ಬಾಕಿ ಇರುವ ಮೊತ್ತಕ್ಕಿಂತ ಕಡಿಮೆಯಾದರೆ ಬಾಕಿದಾರನ ಇನ್ನಷ್ಟು ಆಸ್ತಿ ಜಪ್ತಿ ಮಾಡಬಹುದು. ಎಲ್ಲಾ ರಾಜಸ್ವ, ಎಂದರೆ, ನೀರಾವರಿ ದರ, ಸೆಸ್ಸುಗಳು, ಫೀಜುಗಳು, ಕಂತುಗಳು, ದಂಡಗಳು ಇವೆಲ್ಲವನ್ನೂ ವಸೂಲಾತಿ ಮಾಡಲು ಕಂದಾಯ ವಸೂಲಾತಿಗೆ ಇರುವ ವಿಧಾನವನ್ನೇ ಅನುಸರಿಸಬೇಕು.

### ಕಂದಾಯ ವಿನಾಯತಿ

ಮಳೆಯ ಪರಿಸ್ಥಿತಿ ಅನುಕೂಲಕರವಿಲ್ಲದಾಗ ಅಥವಾ ಇನ್ನಾವುದೇ ಅನಿರೀಕ್ಷಿತ ವಿಕೋಪ ಕಾಣಿಸಿಕೊಂಡಾಗ, ಬೆಳೆಗೆ ಹಾನಿಯಾದಲ್ಲಿ ಸರಕಾರವು ಈ ಬಗ್ಗೆ ಗಮನ ಹರಿಸಿ ಕಂದಾಯದ ಭಾರವನ್ನು ಇಳಿಸುವ ಅಥವಾ ಕಡಿಮೆ ಮಾಡುವ ನಿಲುವನ್ನು ಸದಾ ಹೊಂದಿದೆ. ಮಳೆಯ ಅಭಾವ ತಲೆದೋರಿದಾಗ ಜಿಲ್ಲಾಧಿಕಾರಿಯು ಎಲ್ಲಾ ಅಂತಹ ಪರಿಸ್ಥಿತಿ ಇರುವ ಹೋಬಳಿ (ರೆವಿನ್ಯೂ ಸರ್ಕಲ್)ಗಳಲ್ಲಿ ಕಟಾವು ನಡೆಸಿ ಬೆಳೆಯ ಪರಿಸ್ಥಿತಿಯನ್ನು ತಿಳಿಯಲು ಪ್ರಯೋಗಾತ್ಮಕ ಕ್ರಮಗಳನ್ನು ಕೈಗೊಳ್ಳಲು ಆದೇಶ ನೀಡುತ್ತಾನೆ. ಇನ್ನಾವ ಕಾರಣದಿಂದ ಬೆಳೆಗೆ ಹಾನಿಯಾದಾಗಲೂ ಇದೇ ರೀತಿ ಸರ್ವೇಕ್ಷಣೆ ಮಾಡಲಾಗುತ್ತದೆ. ತಹಶಿಲ್ದಾರನು ಇಂಥ ಪರಿಸ್ಥಿತಿ ಇರುವ ಕನಿಷ್ಠ ಶೇಕಡಾ ಐದು ಗ್ರಾಮಗಳಲ್ಲಿ ಕಟಾವಿನ ಪ್ರಯೋಗ ನಡೆಸಿ ಬೆಳೆಯು ಎಕರೆಗೆ ಇಷ್ಟು ಎಂದು ಆಣೆವಾರಿ ಅಂದಾಜು ಮಾಡಬೇಕು. ಕಂದಾಯ ಅಧೀಕ್ಷಕರು ಇಂಥ ಶೇಕಡಾ 20ಗ್ರಾಮಗಳಲ್ಲಿ ಇಂಥ ಪ್ರಾಯೋಗಿಕ ಕಟಾವು ಮಾಡಿ ಎಕರೆವಾರು ಅಂದಾಜು ಮಾಡಬೇಕು. ಗ್ರಾಮಲೆಕ್ಕಿಗರು ತಮ್ಮ ಕಕ್ಷೆಯಲ್ಲಿ ಬರುವ ಎಲ್ಲ ಗ್ರಾಮಗಳಲ್ಲಿ ಇಂಥ ಅಂದಾಜು ಮಾಡಿ ವರದಿ ಮಾಡಬೇಕು. ಆದರೆ ತಹಶಿಲ್ದಾರರು, ಕಂದಾಯ ನಿರೀಕ್ಷಕರೂ ಕಟಾವು ಮಾಡಿ ನೋಡಿದ್ದ ಗ್ರಾಮಗಳನ್ನು ಗ್ರಾಮಲೆಕ್ಕಿಗರು ಹೊರತುಪಡಿಸಬೇಕು. ಕಂದಾಯ ವಸೂಲಿ ತಹಕೂಬ (ನಿಲುಗಡೆ) ಅಥವಾ ವಿನಾಯತಿಯನ್ನು ಕರ್ನಾಟಕ ಕಂದಾಯ ನಿಯಮದ ಉಪನಿಯಮ (1) ರಂತೆ, ಬಾವಿಯಿಂದ, ಕೆರೆಯಿಂದ, ನದಿಯಿಂದ ಹಾಗೂ ಅನ್ಯ ಮೂಲಗಳಿಂದ ನೀರಾವರಿ ಸವಲತ್ತು ಹೊಂದಿರುವ ಭೂಮಿಗಳನ್ನು ವರ್ಗೀಕರಿಸಿ ಪ್ರತೀ ವರ್ಗದ ಭೂಮಿಗೆ ಪ್ರತ್ಯೇಕವಾಗಿ ಈ ಬಗ್ಗೆ ನಿರ್ಣಯ ಕೈಗೊಳ್ಳಬೇಕು. ಕರ್ನಾಟಕ ಭೂ ಕಂದಾಯ ನಿಯಮ 1966 ರಂತೆ ಬೆಳೆಯ ಪ್ರಮಾಣವು ಶೇಕಡಾ 25 ಕ್ಕಿಂತ ಕಡಿಮೆ ಇಲ್ಲದೆ ಹಾಗೂ ಶೇಕಡಾ 37 ಕ್ಕೆ ಹೆಚ್ಚಿಲ್ಲದಿದ್ದರೆ ವಸೂಲಾತಿಯನ್ನು ಪೂರ್ತಿ ತಹಕೂಬ ಮಾಡಲಾಗುವುದು. ಬೆಳೆಯ ಪ್ರಮಾಣ 37 ಕ್ಕಿಂತ ಹೆಚ್ಚು 50 ಕ್ಕಿಂತ ಕಡಿಮೆ ಇದ್ದರೆ ಅರ್ಧ ವಸೂಲಾತಿಯನ್ನು ತಹಕೂಬ ಮಾಡಲಾಗುವುದು. ಆದರೆ ಶೇ.50 ಕ್ಕಿಂತ ಹೆಚ್ಚು ಬೆಳೆ ಬಂದಿದ್ದರೆ ಪೂರ್ತಿ ವಸೂಲಾತಿ ಮಾಡಲಾಗುವುದು. ಬಾಕಿ ವಸೂಲಿ ಹೀಗೆ ನಡೆಯುತ್ತದೆ. ತಹಕೂಬ ಮಾಡಿ ಬಾಕಿ ಇರುವ ಭೂಕಂದಾಯದ ಮೊತ್ತವನ್ನು ಯಾವುದೇ ವರ್ಷ ಬೆಳೆಯ ಪ್ರಮಾಣ ಶೇಕಡಾ 75 ಕ್ಕಿಂತ ಹೆಚ್ಚು ಬಂದಾಗ ಒಂದು ವರ್ಷದ ಪೂರ್ತಿ ಬಾಕಿ, ಬೆಳೆಯ ಶೇ. 75 ಕ್ಕಿಂತ ಕಡಿಮೆ ಆದರೆ, 67 ಕ್ಕಿಂತ ಹೆಚ್ಚಾಗಿದ್ದರೆ, ಒಂದು ವರ್ಷದ ಬಾಕಿಯ ಶೇ.62 ರಷ್ಟು; ಬೆಳೆಯ ಪ್ರಮಾಣ ಶೇ. 62 ಕ್ಕಿಂತ ಕಡಿಮೆಯಾದರೆ ತಹಕೂಬಾದ ಬಾಕಿ ಕಂದಾಯವನ್ನು ವಸೂಲಿ ಮಾಡಲಾಗುವುದಿಲ್ಲ, ಒಂದು ಖಚಿತ ಅವಧಿಯಲ್ಲಿ ಸಂಗ್ರಹವಾಗಬೇಕಾದ ಕಂದಾಯದ ಬಾಕಿಯ ಶೇಕಡಾ 37 ಕ್ಕಿಂತ ಕಡಿಮೆ ಬೆಳೆ ಬಂದ ಪರಿಸ್ಥಿತಿಯಲ್ಲಿ ವಸೂಲಾತಿ ಆಗದಿರಲಾಗಿ, ಮೂರನೇಯ ವರ್ಷದಲ್ಲಿ ಬಾಕಿಯನ್ನು ಮನ್ನಾ ಮಾಡಲಾಗುವುದು.

### ತುಂಡು ಹಿಡುವಳಿಗಳ ಒಗ್ಗೂಡಿಸುವಿಕೆ

ಆಸ್ತಿಪಾಲುಗಾರಿಕೆ ಅಥವಾ ಆರ್ಥಿಕ ಅವಶ್ಯಕತೆಗಳಿಗನುಗುಣವಾಗಿ ಕೃಷಿ ಭೂಮಿಗಳು ಮಿತಿಮೀರಿ ವಿಭಜಿತವಾಗುವಿಕೆಯಿಂದ ಹಿಡುವಳಿಯು ಉತ್ಪಾದಕವಲ್ಲ ಅಥವಾ ಲಾಭಕರವಲ್ಲವೆಂಬ ಸ್ಥಿತಿ ಬಂದು ಕೃಷಿ ಉತ್ಪನ್ನಕ್ಕೆ ಹಾನಿಯಾಗುವ ಪರಿಸ್ಥಿತಿ ಬರುತ್ತದೆ. ಇದನ್ನು ಗಮನಿಸಿ, ಅದನ್ನು ತಪ್ಪಿಸಲು ಹಾಗೂ ತುಂಡು ಹಿಡುವಳಿಗಳ ಒಗ್ಗೂಡುವಿಕೆ ಅಥವಾ ಏಕೀಕರಣ ಸಾಧಿಸಲು (ಕನ್ಸಾಲಿಡೇಶನ್ ಆಫ್ ಹೋಲ್ಡಿಂಗ್ಸ್) ಕರ್ನಾಟಕ ಹಿಡುವಳಿಗಳ ಖಂಡನ ತಡೆಯುವ ಅಧಿನಿಯಮವನ್ನು 1964 ರಲ್ಲಿ ರೂಪಿಸಲಾಯಿತು. ಈ

ಕಾನೂನಿನ ಪ್ರಕರಣ (3) ರಲ್ಲಿ ಹೇಳಿರುವಂತೆ ಒಂದು ಸೂಕ್ತ ಪ್ರಮಾಣಿತ ಪ್ರದೇಶದಲ್ಲಿ ವಿಶಿಷ್ಟ ಗಾತ್ರದ ಭೂಮಿಯ ತುಂಡು ಹಿಡುವಳಿಯೆನಿಸುವುದು. ಇಂಥ ತುಂಡು ಹಿಡುವಳಿ ಪ್ರಮಾಣ ವಿವಿಧ ಪ್ರದೇಶಗಳಿಗೆ ಅನುಗುಣವಾಗಿ ಅರ್ಧ ಎಕ್ರೆಯಿಂದ ನಾಲ್ಕು ಎಕ್ರೆವರೆಗೆ ಇರುವುದು. ಇಂಥ ಸಂದರ್ಭದಲ್ಲಿ ತುಂಡು ಭೂಮಿಯನ್ನು ಮಾಡುವವನು ಅದಕ್ಕೆ ಸಂಲಗ್ನವಾದ (ತಗಲಿರುವ) ಭೂಮಿಯ ಹಿಡುವಳಿದಾರನಿಗೇ ಅದನ್ನು ಮಾರಬೇಕು, ಬೇರೆಯವರಿಗೆ ಮಾರಲಾಗದು. ಒಗ್ಗೂಡುವ ಪ್ರಯತ್ನದಲ್ಲಿ (ಕನ್ಸಾಲಿಡೇಶನ್) ತುಂಡು ಭೂಮಿಯನ್ನು ಬಿಟ್ಟು ಕೊಡುವ ಹಿಡುವಳಿದಾರನಿಗೆ ಪರಿಹಾರ ಕೊಡಲಾಗುವುದು. ಇಂಥ ಭೂಮಿಯನ್ನು ಪಡೆದವನು ಒಂದು ವರ್ಗಾವಣೆಯ ಪ್ರಮಾಣ ಪತ್ರ ಪಡೆಯುತ್ತಾನೆ. ಇಂಥ ಪ್ರಸಂಗದಲ್ಲಿ ನೋಂದಣಿ ವೆಚ್ಚ ಮತ್ತು ಛಾಪಾ ಕಾಗದದ ವೆಚ್ಚ ಇರುವುದಿಲ್ಲ.

### ಭೂವಿತರಣೆ

ಸ್ವಾತಂತ್ರ್ಯ ಪೂರ್ವದಲ್ಲಿ ಹೆಚ್ಚುವರಿ ಕೃಷಿ ಭೂಮಿಯನ್ನು ಸಾರ್ವಜನಿಕವಾಗಿ ಲೀಲಾವು (ಹರಾಜು) ಮಾಡಿ ವಿಲೇವಾರಿ ಮಾಡುತ್ತಿದ್ದರು. ಅಲ್ಲದೆ ಬ್ರಿಟಿಷರ ಕಾಲದಲ್ಲಿ ಹಾಗೂ ಅದಕ್ಕೂ ಹಿಂದೆ ವಿಶಿಷ್ಟ ಸೇವೆ ಸಲ್ಲಿಸಿದವರಿಗೆ ಇನಾಂ ಆಗಿ ಭೂಮಿ ಕೊಡುತ್ತಿದ್ದರು. ಕೃಷಿಯ ವಿಸ್ತರಣೆ ಇದರ ಗುರಿಯಾಗಿತ್ತು. ಸ್ವಾತಂತ್ರ್ಯಾನಂತರ ಸಾಮಾಜಿಕ ನ್ಯಾಯದ ಅಂಶವನ್ನೂ ಗಮನಿಸಿ ಭೂವಿತರಣೆ ಆಗಬೇಕೆಂಬ ದೃಷ್ಟಿ ಮೂಡಿ ದುರ್ಬಲವರ್ಗದವರು ಹಾಗೂ ಭೂರಹಿತ ವರ್ಗದವರನ್ನು ಗಮನಿಸಲಾಯಿತು. ಭೂವಿತರಣೆಗಾಗಿ ಇಡೀ ರಾಜ್ಯಕ್ಕೆ ಒಂದು ಸಾಮಾನ್ಯ ಕಾನೂನು ಮಾಡುವ ಪ್ರಯತ್ನ 1958 ರಲ್ಲಿ ಆಯಿತು. ಕಡೆಗೆ 1969 ರ ಕರ್ನಾಟಕ ಭೂ ಪ್ರದಾನ ನಿಯಮಗಳನ್ನು ಕರ್ನಾಟಕ ಭೂ ಕಾನೂನು 1964 ರ 197 ನೇಯ ಪ್ರಕರಣದಂತೆ ರೂಪಿಸಿ 3 ಜೂನ್ 1969 ರಿಂದ ಜಾರಿಗೆ ತಂದರು. 1977 ರ ನಂತರ ಈ ನಿಯಮಗಳನ್ನು ಅನೇಕ ಸಲ ತಿದ್ದುಪಡಿ ಮಾಡಲಾಯಿತು. 1969 ರ ನಿಯಮಗಳಂತೆ ವಿತರಣೆಗೆ ಯೋಗ್ಯವಾದ ಭೂಮಿಗಳ ಯಾದಿ ತಯಾರಿಸುವ ಜವಾಬ್ದಾರಿ ತಹಶಿಲ್ದಾರರದು. ಪ್ರತೀ ಗ್ರಾಮದಲ್ಲಿನ ಜಮೀನಿನ ವಿತರಣೆಗೆ ಈ ಕೆಳಗಿನ ಪ್ರಮಾಣ ನಿರ್ಧರಿಸಿದೆ. ಮಾಜೀ ಸೈನಿಕರಿಗೆ ಶೇ.10, ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಶೇ.50, ರಾಜಕೀಯ ಸಂತ್ರಸ್ತರಿಗೆ ಶೇ.10, ಹಾಗೂ ಇತರರಿಗೆ ಶೇ.30. ಭೂವಿತರಣೆ ಮಾಡುವಾಗ ಕೆಳಕಂಡಂತೆ ಪ್ರಾಶಸ್ತ್ಯ ನೀಡಬೇಕು: (1) ಅದೇ ಗ್ರಾಮದಲ್ಲಿ ವಾಸಿಸುವ ಭೂರಹಿತರು (2) ಅದೇ ಗ್ರಾಮದಲ್ಲಿನ ಆರ್ಥಿಕವಾಗಿ ಲಾಭಕರವಲ್ಲದ ಹಿಡುವಳಿ ಹೊಂದಿದವರು (3) ನೆರೆಯ ಗ್ರಾಮದ ಭೂರಹಿತರು ಹಾಗೂ (4) ಇತರರು.

ಕೃಷಿಯ ಉದ್ದೇಶಕ್ಕಾಗಿ ಪ್ರಧಾನವಾದ ಭೂಮಿಯನ್ನು 15 ವರ್ಷಗಳವರೆಗೆ ಹಸ್ತಾಂತರ ಮಾಡುವಂತಿಲ್ಲ. ತನ್ನ ವಶಕ್ಕೆ ಬಂದ ಮೂರು ವರ್ಷಗಳಲ್ಲಿ ಅದರ ಕೃಷಿ ಆರಂಭಿಸಬೇಕು, ಭೂಮಿ ಪಡೆದಾತನೇ ಅದನ್ನು ಆರಂಭ ಮಾಡಬೇಕು, ಹಾಗೂ ಕೃಷಿಯೇತರ ಉದ್ದೇಶಗಳಿಗೆ ಅದನ್ನು ಬಳಸಬಾರದು. ಭೂವಿತರಣೆಯನ್ನು ಅಪೇಕ್ಷಿಸಿ ಬರುವ ಅರ್ಜಿಗಳನ್ನು ತಹಶಿಲ್ದಾರರೇ ಸ್ವೀಕರಿಸಬೇಕು, ಅವರೇ ಅದನ್ನು ಸಂಸ್ಕರಣೆ ಮಾಡಬೇಕು. ಹಾಗೂ ಇಂಥ ಅರ್ಜಿಯನ್ನು ತನ್ನ ಮೇಲಧಿಕಾರಿಗಳಿಗೆ ಸಲ್ಲಿಸಬೇಕು. ನಗರ ಪರಿಮಿತಿಯಲ್ಲಿ ಬರುವ ಭೂಮಿಯ ವಿತರಣೆ ಮಾಡಬಾರದು.

### ಭೂ ಸ್ವಾಧೀನ

ಯಾವುದೇ ಸಾರ್ವಜನಿಕ ಉದ್ದೇಶಕ್ಕೆ ಯಾವುದೇ ಭೂಮಿಯು ಸರಕಾರಕ್ಕೆ ಅವಶ್ಯವೆನಿಸಿದಾಗ ಅದರ ಸ್ವಾಧೀನಕ್ಕೆ ಸಂಬಂಧಿಸಿದ ಜಿಲ್ಲಾಧಿಕಾರಿ ಈ ಬಗ್ಗೆ ಸ್ವಾಧೀನ ಮಾಡಿಕೊಳ್ಳುವ ಭೂಮಿ ಇರುವ ಪ್ರದೇಶದಲ್ಲಿನ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಬೇಕು. ಕೇಂದ್ರ ಭೂ ಸ್ವಾಧೀನ ಕಾನೂನ (1894) ನ್ನು ಕರ್ನಾಟಕಕ್ಕೆ ವಿಸ್ತರಿಸಿ ಭೂ ಸ್ವಾಧೀನ (ಕರ್ನಾಟಕ ವಿಸ್ತರಣ ಮತ್ತು ತಿದ್ದುಪಡಿ) ಅಧಿನಿಯಮ 1961 ಎನಿಸಿ ಮಂಜೂರಾಗಿದ್ದು ಅದರಂತೆ ಭೂಸ್ವಾಧೀನ ಕ್ರಮಗಳು ಜರಗುತ್ತವೆ. ಇಂಥ ಭೂಮಿಗಳನ್ನು ಅಳೆದು, ಗುರುತಿಸಿ, ನಕಾಶೆ ತಯಾರಿಸುವುದು ಜಿಲ್ಲಾಧಿಕಾರಿಯ ಕೆಲಸ. ಇಂಥ ಸಂದರ್ಭಗಳಲ್ಲಿ ಪರಿಹಾರಕ್ಕೆ ಪ್ರಸ್ತಾವನೆಗಳನ್ನು ಅವರಲ್ಲೇ ಮಾಡಬೇಕು. ಇದಕ್ಕೆ ಸಂಬಂಧಿಸಿದ ಪ್ರಕಟಣೆಯಲ್ಲೇ ಈ ಬಗ್ಗೆ ತಕರಾರು ಮಾಡುವ ಕಾಲಾವಧಿಯನ್ನು ನಿರ್ಧರಿಸಿರುತ್ತದೆ. ಭೂಮಿಯ ಅಳತೆ ಮುಂತಾದ ಸಂಗತಿಗಳ ಬಗ್ಗೆಯೂ ವೈಯಕ್ತಿಕವಾಗಿ ಅಥವಾ ಪ್ರತಿನಿಧಿಗಳ ಮೂಲಕ ತಕರಾರುಗಳನ್ನು ಸಲ್ಲಿಸಬಹುದು.

ಸಂತ್ರಸ್ತರ ತಕರಾರುಗಳನ್ನು ಪರಿಶೀಲಿಸಿ, ಅವರ ಆಕ್ಷೇಪಗಳನ್ನು ಆಲಿಸಿ, ಪ್ರಕರಣ 11 ರಂತೆ ಜಿಲ್ಲಾಧಿಕಾರಿಯು ನಿರ್ಣಯ ನೀಡಬಹುದು. ಇದರಂತೆ ಸ್ವಾಧೀನ ಮಾಡಿಕೊಂಡ ಭೂಮಿ ಯಾವುದೇ ವಿಧಿನಿಷೇಧಗಳಿಗೂ ಒಳಪಡದೆ ಸರಕಾರದ ಸ್ವಾಧೀನಕ್ಕೆ ಬರುವುದು. ಭೂಮಿಯ ಅಳತೆ, ಸಂದ ಪರಿಹಾರದ ಅಸಮರ್ಪಕತೆ ಹಾಗೂ ಪರಿಹಾರವನ್ನು ಸಂಬಂಧಿಸಿದ ಹಕ್ಕುದಾರರಲ್ಲಿ ವಿತರಿಸುವುದು ಮುಂತಾದ ವಿಚಾರಗಳಲ್ಲಿ ಇರುವ ಆಕ್ಷೇಪಗಳನ್ನು ಜಿಲ್ಲಾಧಿಕಾರಿಗೆ ಬರೆದು ತಿಳಿಸಿ, ಅವರು ಅದನ್ನು ಸೂಕ್ತ ನ್ಯಾಯಾಲಯಕ್ಕೆ ಒಪ್ಪಿಸುವಂತೆ ಕೇಳಿಕೊಳ್ಳಬಹುದು. ಭೂ ಸ್ವಾಧೀನ (ತಿದ್ದುಪಡಿ) ಕಾನೂನು 1984 ರಂತೆ ಜಿಲ್ಲಾಧಿಕಾರಿಗಳ ತೀರ್ಪಿಗೆ ಮೇಲ್ಮನವಿಗೆ ಅವಕಾಶ ಮಾಡಿದೆ. ಇದರಿಂದ ಪರಿಹಾರದ ಮೊತ್ತ 10 ಲಕ್ಷವಾದರೆ ಜಿಲ್ಲಾಧಿಕಾರಿ, 10 ಲಕ್ಷಕ್ಕೆ ಮೇಲ್ಪಟ್ಟು 20 ಲಕ್ಷವಾದರೆ ವಿಭಾಗಾಧಿಕಾರಿ (ಡಿವಿಜನಲ್ ಕಮಿಶನರ್) ಮತ್ತು 20 ಲಕ್ಷಕ್ಕೆ ಮೇಲ್ಪಟ್ಟಾದರೆ ರಾಜ್ಯ ಸರಕಾರದ ಮೇಲ್ಮನವಿ ನ್ಯಾಯಮಂಡಳಿ (ಎಪೆಲೇಟ್ ಟ್ರಿಬ್ಯುನಲ್) ಎಂದು ನಿರ್ಧರಿಸಿದೆ. ಕೆಲವೊಂದು ಪ್ರಕರಣಗಳಲ್ಲಿ ರಾಜ್ಯ ಶ್ರೇಷ್ಠ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಮಾಡಲು ಅವಕಾಶವಿದೆ.

## ಭೂ ಸುಧಾರಣೆ

(1) ಹಿಂದಿನಿಂದ ನಡೆದುಬಂದ ಭೂ ಒಡೆತನ ಮತ್ತು ಭೂಸಂಧಗಳಿಂದ ಕೃಷಿ ಉತ್ಪನ್ನ ಕಡಿಮೆಯಾಗುವುದನ್ನು ತಡೆಯುವುದು ಹಾಗೂ ಉತ್ಪನ್ನವನ್ನು ಹೆಚ್ಚಿಸಲು ಪ್ರೋತ್ಸಾಹಿಸುವುದು ಮತ್ತು (2) ಕೃಷಿ ವ್ಯವಸ್ಥೆಯಲ್ಲಿನ ಎಲ್ಲ ಸಾಮಾಜಿಕ ಅನ್ಯಾಯ ಮತ್ತು ಶೋಷಣೆಗಳನ್ನು ನಿವಾರಿಸಿ ಸಾಗುವಳಿದಾರನಿಗೆ ಭದ್ರತೆ ಒದಗಿಸಿ ಗ್ರಾಮೀಣ ಜನರಿಗೆ ಸಮಾನ ಅವಕಾಶ ಮತ್ತು ಸಮಾನ ಸ್ಥಾನಮಾನಗಳನ್ನು ಒದಗಿಸುವ ವಾತಾವರಣ ಮೂಡಿಸುವುದು, ಇದು ಭೂಸುಧಾರಣೆಯ ಕ್ರಮದ, ಮುಖ್ಯ ಉದ್ದೇಶಗಳು. ಸ್ವಾತಂತ್ರ್ಯ ಚಳವಳಿಯ ಕಾಲದಿಂದಲೂ ಉಳುವವನಿಗೇ ಭೂಮಿ ಎಂಬ ಘೋಷಣೆ ಬದ್ಧವಾಗಿತ್ತು.

ಮುಂಬೈ ಸರಕಾರದ ಮುಂಬೈ ಗೇಣಿದಾರೀ ಮತ್ತು ಕೃಷಿ ಭೂಮಿ ಕಾನೂನು 1948 ನ್ನು (ಟೆನೆನ್ಸಿ ಕಾನೂನು) ಜಾರಿಗೆ ತಂದಿತು. ಇದಕ್ಕೂ ಹಿಂದೆ 1939 ರಲ್ಲಿ ಜಾರಿ ಮಾಡಿದ ಮುಂಬೈ ಗೇಣಿದಾರಿ ಕಾನೂನು (ಟೆನನ್ಸಿ ಆಕ್ಟ್) ಒಳಗೊಂಡಿದ್ದ ಕೆಲವು ಒಳ್ಳೆಯ ಅಂಶಗಳನ್ನು ಇದರಲ್ಲಿ ಸೇರಿಸಲಾಯಿತು. ಇದರಂತೆ ಗೇಣಿದಾರನು ಒಂದು ವಿಶಿಷ್ಟ ಭೂಮಿಗೆ ಕೊಡಬಹುದಾದ ಅತ್ಯಧಿಕ ಗೇಣಿಯ ಮಿತಿ, ಬೆಳೆಹಂಚಿಕೆಯ ಬದಲಿಗೆ ಭೂಮಾಲಿಕನಿಗೆ ನಗದು ಪಾವತಿ ಮಾಡುವುದು, ಬೆಳೆ ಆಗಲಾರದ ಪರಿಸ್ಥಿತಿಯಲ್ಲಿ ಗೇಣಿಯ ತಹಕೂಬ (ನಿಲುಗಡೆ) ಅಥವಾ ರದ್ಧತಿ, ಸ್ವೈರವಾಗಿ ಗೇಣಿದಾರನನ್ನು ಒಕ್ಕಲು ಎಬ್ಬಿಸದಂತೆ (ಹಿಡುವಳಿಯನ್ನು ತಪ್ಪಿಸದಂತೆ) ನಿಯಮಗಳು, ಇವೆಲ್ಲ ಅಂಶಗಳು 1939 ರ ಕಾನೂನಿನಲ್ಲಿ ಇತ್ತು. ಇದರಿಂದ ಭೂಸುಧಾರಣೆಯ ದೆಸೆಯಲ್ಲಿ ಪ್ರಗತಿಪರ ಹೆಜ್ಜೆ ಇಡಲಾಗಿತ್ತು. ಭೂ ಮಾಲಿಕರು ಮುಂಬೈಯ ಭೂಕಂದಾಯ ಸಂಹಿತೆಯಂತೆ ಸಾಮಾನ್ಯ ರೈತವಾರಿ ಮಾಲಿಕರಿಗಿರುವ ಅಧಿಕಾರದ ವಿನಾ ಅದಕ್ಕೂ ಹೆಚ್ಚಿನ ವಿಶೇಷ ಹಕ್ಕು ಸವಲತ್ತುಗಳನ್ನು ಅವರಿಂದ ಕಸಿದುಕೊಳ್ಳುವಂತೆ ಕ್ರಮ ಕೈಗೊಳ್ಳಲಾಯಿತು.

1948 ರ ಕಾನೂನು ಗೇಣಿದಾರರನ್ನು 'ಕಾಯಂ ಗೇಣಿದಾರ', 'ರಕ್ಷಿತ ಗೇಣಿದಾರ' ಮತ್ತು 'ಸಾಮಾನ್ಯ ಗೇಣಿದಾರ' ಎಂಬ ಮೂರು ವರ್ಗಗಳನ್ನು ಮಾಡಿದ್ದು, ಗೊತ್ತು ಮಾಡಿದ ಗರಿಷ್ಠ ಗೇಣಿ (ಲಾವಣಿ)ಯ ಪ್ರಮಾಣ ನೀರಾವರಿ ಭೂಮಿಗೆ ಉತ್ಪನ್ನದ ಕಾಲುಭಾಗ ಹಾಗೂ ಖುಷ್ಕಿ ಭೂಮಿಗೆ ಉತ್ಪನ್ನದ $\frac{1}{3}$ ಭಾಗ ಆಗಿತ್ತು. 1952 ರ ಒಂದು ಆದೇಶದ ಮೇರೆಗೆ ಗೇಣಿಯ ಪ್ರಮಾಣ ಎಲ್ಲ ಭೂಮಿಗೂ ಗರಿಷ್ಠ $\frac{1}{6}$ ಇರಬೇಕೆಂದು ಗೊತ್ತುಪಡಿಸಲಾಯಿತು. ಮುಂದೆ 1952 ರಲ್ಲಿ ಮೇಲ್ಕಂಡ ಕಾನೂನಿಗೆ ತಂದ ತಿದ್ದುಪಡಿಯಂತೆ ರಕ್ಷಿತನಾದ ಗೇಣಿದಾರನನ್ನು ಒಕ್ಕಲೆಬ್ಬಿಸುವ (ಭೂಮಾಲೀಕನ) ಹಕ್ಕನ್ನು ಬಹಳಷ್ಟು ಮೊಟಕುಗೊಳಿಸಿ ಗೇಣಿದಾರನು ಕಂತುಗಳಲ್ಲಿ ಹಣ ಪಾವತಿ ಮಾಡಿ ತಾನು ಸಾಗುವಳಿ ಮಾಡುವ ಭೂಮಿಯನ್ನು ಖರೀದಿಸಲು ಅವಕಾಶ ಕಲ್ಪಿಸಲಾಯಿತು. ಕೃಷಿ ಹಿಡುವಳಿ ಎಂಬ ಹೊಸದೊಂದು ಕಲ್ಪನೆಯನ್ನು 1952 ರ ತಿದ್ದುಪಡಿಯನ್ನು ಜಾರಿಗೆ ತಂದು, ಇಂಥ ಹಿಡುವಳಿ ಖುಷ್ಕಿಯಾದರೆ 16 ಎಕ್ರೆ, ತರಿಯಾದರೆ ನಾಲ್ಕು ಎಕ್ರೆ ಎಂದು ಗೊತ್ತುಪಡಿಸಿತ್ತು. ಆದರೆ ಈ ಕಲ್ಪನೆ ಕಾರ್ಯ ಸಾಧ್ಯವೆಂದು ಕಾಣಬಾರದ್ದರಿಂದ ಮುಂಬೈ ಗೇಣಿದಾರಿ ಮತ್ತು ಕೃಷಿ (ತಿದ್ದುಪಡಿ) ನಿಯಮವನ್ನು 1955 ರಲ್ಲಿ ಜಾರಿ ಮಾಡಿದರು.

ರಾಜ್ಯ ಪುನರ್ಘಟನೆಯ ನಂತರ ಹೊರಡಿಸಿದ 1 ಮಾರ್ಚ್ 1957 ರ ಸುಗ್ರೀವಾಜ್ಞೆಯಂತೆ ಮುಂಬೈ ಕಾನೂನಿನಲ್ಲಿ ಭೂಮಾಲಿಕನು ಭೂಮಿಯನ್ನು ಮತ್ತೆ ಪಡೆಯುವ ಇಲ್ಲವೆ ಗೇಣಿದಾರನು ತನ್ನ ಹಿಡುವಳಿಯನ್ನು ಖರೀದಿಸಲು ಅವಕಾಶ ನೀಡುವ

ಬಗ್ಗೆ ಇದ್ದ ವ್ಯವಸ್ಥೆಯನ್ನು ಮುಂದುವರಿಯುವಂತೆ ಮಾಡಿ, ಆಮೇಲೆ ಮೇಲ್ಕಂಡ ಸುಗ್ರೀವಾಜ್ಞೆಯನ್ನು ಕಾನೂನಾಗಿ ಪರಿವರ್ತಿಸಿದರು. ಇದು 1957 ನಂ.XIII ರ ಅಧಿನಿಯಮವಾಗಿದೆ. ಇದು ಮುಂಬೈ ರಾಜ್ಯದಿಂದ ಬಂದ ಪ್ರದೇಶಗಳಿಗೆ ಅನ್ವಯಿಸಿತ್ತು.

ಆಮೇಲೆ ಜಾರಿಗೊಳಿಸಿದ 1973 ಕರ್ನಾಟಕ ಭೂಸುಧಾರಣ (ತಿದ್ದುಪಡಿ) ಕಾನೂನಿನಂತೆ (1974 ರ ನಂ I ಅಧಿನಿಯಮ) ರಾಜ್ಯದಲ್ಲಿನ ಎಲ್ಲ ಗೇಣಿದಾರಿಗಳನ್ನು ರದ್ದುಗೊಳಿಸಲಾಯಿತು. ಸೈನಿಕರು, ನೌಕಾ ಸೈನಿಕರು ಹಾಗೂ ನ್ಯಾಯಾಲಯ ಮಾನ್ಯ ಮಾಡಿದ (ಪ್ರಾಯಕ್ಕೆ ಬಾರದ) ಉತ್ತರಾಧಿಗಳಿಗೆ ಇದು ಅನ್ವಯಿಸುತ್ತಿರಲಿಲ್ಲ.

1961 ರ ಕರ್ನಾಟಕ ಭೂ ಸುಧಾರಣಾ ಅಧಿನಿಯಮವನ್ನು ಅಕ್ಟೋಬರ್ 2, 1965 ರಲ್ಲಿ ಜಾರಿಗೆ ತರಲಾಯಿತು. ಇದರಲ್ಲಿ ಅನೇಕ ಬದಲಾವಣೆಗಳಾಗಿ 1973 ರ ಭೂ ಸುಧಾರಣಾ ತಿದ್ದುಪಡಿ ಅಧಿನಿಯಮವು 1 ನೇಯ ಮಾರ್ಚ್ 1974 ರಿಂದ ಅದು ಜಾರಿಗೆ ಬಂತು. ಈ ಕಾನೂನಿನ ಪ್ರಕರಣ 48 ರಂತೆ ಜನಪ್ರಿಯ ನ್ಯಾಯಮಂಡಳಿ ಅಥವಾ ಜನತಾ (ಭೂ) ನ್ಯಾಯಮಂಡಳಿಗಳನ್ನು (ಟ್ರಿಬ್ಯೂನಲ್) 1975ರಲ್ಲಿ ಪ್ರತೀ ತಾಲೂಕಿನಲ್ಲಿ ಜಾರಿಗೆ ತರಲಾಯಿತು. ಒಂದು ತಾಲೂಕು ಯಾವ ಉಪವಿಭಾಗಕ್ಕೆ ಒಳಪಟ್ಟಿದೆಯೋ ಅದರ ಉಪ ಆಯುಕ್ತರು ಅದರ ಅಧ್ಯಕ್ಷರಾಗಿ ವಿಶೇಷ ತಹಶಿಲ್ದಾರ ಹಾಗೂ ಸ್ಥಳೀಯ ಶಾಸಕ ಹಾಗೂ ಸರಕಾರ ನೇಮಿಸಿದ ವ್ಯಕ್ತಿಗಳು ಇದರ ಸದಸ್ಯರು. ಈಗ ಶಾಸಕರು ಸದಸ್ಯರಾಗಿ ಇರುವುದಿಲ್ಲ. ಬೇರೆಬೇರೆ ಇನಾಂ ರದ್ದತಿ ಕಾನೂನುಗಳಿಗನುಗುಣವಾಗಿ ಇದ್ದ ಪ್ರಕರಣಗಳನ್ನು ಈ ಮಂಡಳಿಗಳು ನಿರ್ಣಯಿಸಿವೆ. ಹಿಂದೆ ಒಪ್ಪಂದವಾಗಿರಲಿ ಅಥವಾ ಆಗದೇ ಇರಲಿ ಯಾವುದೇ ಗೇಣಿದಾರನನ್ನು, ಒಪ್ಪಂದ ಅವಧಿ ಮುಗಿದಿದ್ದರೂ ಸಹ, ಒಕ್ಕಲೆಬ್ಬಿಸಿ ಗೇಣಿದಾರಿಕೆ ರದ್ದುಮಾಡಬಾರದು. 10 ಸೆಪ್ಟೆಂಬರ್ 1957 ಕ್ಕೆ ಮೊದಲು ಭೂಮಿಯನ್ನು ಆರಂಬ ಮಾಡುತ್ತಿದ್ದು ಮುಂದೆ ಅವರ ಗೇಣಿದಾರಿಕೆಯನ್ನು ರದ್ದು (ಧಣಿಗೆ ತಾನೇ ಒಪ್ಪಿಸಿ ಇಲ್ಲವೆ ಧಣಿಯು ಕಿತ್ತುಕೊಂಡು) ಮಾಡಿದ್ದರೂ ಗೇಣಿದಾರಿಕೆಯನ್ನು (ಭೂಮಿಯನ್ನು) ಮತ್ತೆ ಪಡೆಯಲು ಅರ್ಹನಾಗಿದ್ದಾನೆ. ಇಪ್ಪತ್ತೇಳು ಸ್ಟ್ಯಾಂಡರ್ಡ್ ಎಕರೆಗೂ ಮೀರಿರುವ ಹಿಡುವಳಿಗಳಲ್ಲಿ ಇಂಥ ಹೆಚ್ಚಿನ ಭೂಮಿಯನ್ನು ಹೆಚ್ಚುವರಿ ಭೂಮಿ ಎಂದು ಭಾವಿಸಿ ಅದು ಸರಕಾರದ ವಶಕ್ಕೆ ಸಂದಿದೆ, ಎಂದು ಭಾವಿಸಬೇಕು. ಮುಂದಿನ ಎಲ್ಲ ಪ್ರಕರಣಗಳಲ್ಲೂ ಭೂಹಿಡುವಳಿ ಗರಿಷ್ಠ ಮಿತಿಯು 18 ಸ್ಟ್ಯಾಂಡರ್ಡ್ ಎಕರೆಗಳೆಂದು ಭಾವಿಸಬೇಕು. ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ಗೇಣಿದಾರನಿಗೆ ತಾನು ಕೃಷಿ ಮಾಡುತ್ತಿದ್ದ ಭೂಮಿಯ ಒಡೆತನದ ಹಕ್ಕನ್ನು ಕೊಡುವುದು. ವಾಸಕ್ಕಾಗಿ ಮನೆಗಳನ್ನು ಬೇರೆಯವರ ಜಮೀನಿನಲ್ಲಿ ಕಟ್ಟಿಕೊಂಡಿದ್ದ ಕೃಷಿಕರಿಗೆ ಅಥವಾ ಕೃಷಿಕಾರ್ಮಿಕರಿಗೆ ಆ ನೆಲಗಟ್ಟಿನ ಒಡೆತನವನ್ನೂ ನೀಡುವುದು. ತಾನು ಗೇಣಿದಾರನೆಂದು ಘೋಷಿಸಿಕೊಂಡ ('ಡಿಕ್ಲೆರೇಶನ್' ನೀಡಿದ) ವ್ಯಕ್ತಿ ನಿಜವಾದ ಗೇಣಿದಾರನೇ ಎಂದು ಸಮಗ್ರವಾಗಿ ಪರಿಶೀಲಿಸಿ ಹಕ್ಕುಳ್ಳ ಗೇಣಿದಾರನಿಗೆ ಮಾಲಿಕತ್ವವನ್ನು ಮಂಡಲಿಯು ನೀಡುವುದು. ಹೆಚ್ಚುವರಿ ಭೂಮಿಯನ್ನು ದುರ್ಬಲ ವರ್ಗದವರು, ಭೂರಹಿತ ಕಾರ್ಮಿಕರು ಭೂಮಿ ಕಳೆದುಕೊಂಡ ಗೇಣಿದಾರರಿಗೆ ನೀಡುವುದು.

ಗೇಣಿದಾರರಿಗೆ ಕಾನೂನಿನ ಮತ್ತು ಆರ್ಥಿಕ ನೆರವು ನೀಡಲು ಒಂದು ಪ್ರತ್ಯೇಕ ವಿಭಾಗ ('ಸೆಲ್')ಅನ್ನು ತೆರೆದಿದ್ದು ಇದರಂತೆ ಒಬ್ಬ ವಿಶೇಷಾಧಿಕಾರಿ ತಾಲೂಕಿನಲ್ಲಿ ಪ್ರವಾಸ ಮಾಡಿ ಈ ಸಂಬಂಧ ತಕರಾರುಗಳನ್ನು ಆಲಿಸಿ ಅರ್ಜಿಗಳನ್ನು ಸಂಗ್ರಹಿಸಿ, ಅವುಗಳನ್ನು ಸಂಸ್ಕರಿಸಿ ಸಂಬಂಧಪಟ್ಟ ವಕೀಲರಿಗೆ ಸೂಕ್ತ ಕಾನೂನು ಕ್ರಮಕ್ಕೆ ನ್ಯಾಯವಾದಿಗಳಿಗೆ ಒಪ್ಪಿಸಲು ವ್ಯವಸ್ಥೆ ಇತ್ತು. ಹಿಂದೆ ಇದ್ದ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ಡಿ.ಆರ್.ಡಿ.ಎಸ್.)ಗೆ ಆರ್ಥಿಕ ನೆರವಿಗಾಗಿ ಒಂದು ಯೋಜನೆಯನ್ನು ತಯಾರಿಸಿ ಸರಕಾರವು ಒಪ್ಪಿಸಿತ್ತು.

ಮೈಸೂರು (ಧಾರ್ಮಿಕ ಮತ್ತು ದತ್ತಿ) ಇನಾಂಗಳ ರದ್ದತಿ ಕಾನೂನು 1977 ಮತ್ತು ಭೂ ಸುಧಾರಣಾ ಕಾನೂನಿನಂತೆ ಎದುರಾಗುವ ಪ್ರಕರಣಗಳನ್ನು ತೀರ್ಮಾನಿಸಲು ಭೂನ್ಯಾಯ ಮಂಡಳಿ (ಲ್ಯಾಂಡ್ ಟ್ರಿಬ್ಯೂನಲ್)ಗಳನ್ನು ನೇಮಿಸಿದ್ದರೂ ಅದರಿಂದ ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಬರಬಹುದಾದ ಮೇಲ್ಮನವಿಗಳನ್ನು ಪರಿಶೀಲಿಸಿ ಸರಕಾರದ ಪಕ್ಷವನ್ನು ಎತ್ತಿ ಹಿಡಿಯಲು ಕಂದಾಯ ಇಲಾಖೆಯಲ್ಲೆ ಭೂ ಸುಧಾರಣಾ ಮೇಲ್ಮನವಿ ಸೆಲ್ ಅನ್ನು ಏರ್ಪಡಿಸಲಾಗಿದೆ. ಶ್ರೇಷ್ಠ ನ್ಯಾಯಾಲಯದ ವಿನಾ ಯಾವುದೇ ಅಧಿಕರಣಕ್ಕೆ ಮೇಲ್ಮನವಿ ಸಲ್ಲಿಸಲು ಈ ಕಾನೂನಿನಂತೆ ಅಧಿಕಾರವಿರಲಿಲ್ಲ.

ಮುಂದೆ 26.5.1986 ರಂದು ಜಿಲ್ಲೆಗೊಂದರಂತೆ ಭೂ ಸುಧಾರಣಾ ಮೇಲ್ಮನವಿ ಸೆಲ್‌ಗಳನ್ನು ಸ್ಥಾಪಿಸಿದರು. ಶ್ರೇಷ್ಠ ನ್ಯಾಯಾಲಯಕ್ಕೆ ಹೋಗುವ ಪ್ರಕರಣಗಳು ಹೆಚ್ಚಿದ್ದರಿಂದ ಭೂ ಸುಧಾರಣಾ ಕಾನೂನಿನ ಪ್ರಕರಣ 116 (ಎ) ಯಂತೆ ಇವುಗಳನ್ನು ಸ್ಥಾಪಿಸಲಾಗಿದ್ದು ಇದರಲ್ಲಿ ಕಂದಾಯ ಇಲಾಖಾ ಅಧಿಕಾರಿ ಹಾಗೂ ಒಬ್ಬ ನ್ಯಾಯಾಧಿಕಾರಿ, ಹೀಗೆ ಇಬ್ಬರು ಸದಸ್ಯರಿದ್ದರು. ಶ್ರೇಷ್ಠ

ನ್ಯಾಯಾಲಯಕ್ಕೆ ಒಯ್ದಿದ್ದ ಮೇಲ್ಮನವಿಗಳನ್ನು ವಿಚಾರಣೆಗೆ ಆಯಾ ಜಿಲ್ಲೆಗಳ ಮೇಲ್ಮನವಿ ನ್ಯಾಯಾಲಯಕ್ಕೆ ವರ್ಗಾಯಿಸಲಾಯಿತು. ಆದರೆ 8.10.1990 ರಂದು ಈ ಮೇಲ್ಮನವಿ ನ್ಯಾಯಾಲಯಗಳನ್ನು ರದ್ದು ಮಾಡಲಾಯಿತು.

ಭೂ ನ್ಯಾಯ ಮಂಡಳಿಯಿಂದ ಭೂಮಿಯನ್ನು ಪಡೆದಾತನು ಭೂಮಿಯ ಮೌಲ್ಯವನ್ನು ಅದರ ಬಡ್ಡಿಯನ್ನು ಸರಕಾರಕ್ಕೆ 15 ಕ್ಕೆ ಮೀರದ ವಾರ್ಷಿಕ ಕಂತಿನಲ್ಲಿ ಅಥವಾ ಒಂದೇ ಕಂತಿನಲ್ಲಿ ಕಟ್ಟಬಹುದು.

ಭೂಮಿತಿಯನ್ನು ಜಾರಿಗೊಳಿಸಿದ ನಂತರ ಸರಕಾರದ ವಶಕ್ಕೆ ಬಂದ ಹೆಚ್ಚುವರಿ ಭೂಮಿಯನ್ನು ಭೂನ್ಯಾಯ ಮಂಡಳಿಯು ಕೆಳಗಿನ ಅನುಕ್ರಮದ ಆಯ್ಕೆಯಂತೆ ವಿತರಣೆ ಮಾಡಬಹುದು. ಭೂರಹಿತ ಕೃಷಿಕರು, ಕೃಷಿ ಕಾರ್ಮಿಕರು, ಹಕ್ಕು ಕಳೆದುಕೊಂಡ ಗೇಣಿದಾರರು, ಇವರಿಗೆ ಮೂಲಭೂತ ಹಿಡುವಳಿಗೆ ಕಡಿಮೆಯಾಗದಂತೆ ಭೂಮಿ ಪ್ರದಾನ ಮಾಡಬೇಕು. ಮೂಲಭೂತ ಹಿಡುವಳಿ ಎಂದರೆ ಲಾಭದಾಯ ಕೃಷಿ ನಡೆಸಲು ಬೇಕಾಗುವ ಕನಿಷ್ಠ ವಿಸ್ತಾರದ ಭೂಮಿ.

ಜಿಲ್ಲೆಯಲ್ಲಿನ ಭೂ ನ್ಯಾಯಮಂಡಳಿಗಳು ತಮ್ಮ ಕರ್ತವ್ಯದಲ್ಲಿ ಮಾಡಿದ ಸಾಧನೆ, ಜಿಲ್ಲಾ ಮೇಲ್ಮನವಿ ಮಂಡಳಿಯ ಸಾಧನೆ ಹಾಗೂ ಜಿಲ್ಲೆಯಲ್ಲಿ ವಿತರಣೆಯಾದ ಹೆಚ್ಚುವರಿ ಭೂಮಿ ಮುಂತಾದ ಮಾಹಿತಿಯನ್ನು ಅಧ್ಯಾಯದ ಕೊನೆಯಲ್ಲಿ ಪ್ರತ್ಯೇಕ ಕೋಷ್ಟಕ 9.7 ರಲ್ಲಿ ಕೊಟ್ಟಿದೆ.

## ಇತರ ರಾಜಸ್ವ ಮೂಲಗಳು

ನೇರ ತೆರಿಗೆಗಳು ರಾಜಸ್ವದ ಒಂದು ಅತ್ಯಲ್ಪ ಭಾಗವಾಗಿದ್ದು ಸರಕಾರವು ಈಗ ಹೆಚ್ಚು ಹೆಚ್ಚಾಗಿ ಪರೋಕ್ಷ (ಇನ್‌ಡೈರೆಕ್ಟ್) ತೆರಿಗೆಗಳ ಮೇಲೆಯೇ ಅವಲಂಬನೆ ಮಾಡುತ್ತಿದೆ. ಭೂಕಂದಾಯವು ಹಿಂದೆ ರಾಜಸ್ವದ ಮುಖ್ಯ ಭಾಗವಾಗಿದ್ದು, ಈಗ ಅದರ ಪ್ರಮಾಣ ನಗಣ್ಯವಾಗಿದೆ. ಕೃಷಿ ಆದಾಯ ತೆರಿಗೆಯೂ ಒಂದು ದೊಡ್ಡ ಮೊತ್ತವಾಗಿಲ್ಲ. ಛಾಪಾ ಕಾಗದ ಮತ್ತು ನೋಂದಣಿ ದರ ಆಕರಣೆ ಸಾಕಷ್ಟು ಪ್ರಮಾಣದ ಆದಾಯ ತರುತ್ತವೆ. ವಾಣಿಜ್ಯ ತೆರಿಗೆಯು ರಾಜ್ಯದ ಆದಾಯದ ಅರ್ಧಕ್ಕೂ ಹೆಚ್ಚು ಭಾಗವಾಗಿ ಬೆಳೆದಿದೆ. ಮೋಟಾರು ವಾಹನ ತೆರಿಗೆಯ ಆದಾಯವೂ ಗಣನೀಯವಾದುದು. ಇತರ ತೆರಿಗೆಗಳ ಜೊತೆ ತುಲನೆ ಮಾಡಿದರೆ ಅಬಕಾರಿ ಆದಾಯವೂ ಸಾಕಷ್ಟು ದೊಡ್ಡದು. ಸಂಘಟಿತ ಕ್ಷೇತ್ರಗಳ ಹಾಗೂ ಸ್ವಉದ್ಯೋಗಿ ದುಡಿಮೆಗಾರರಿಂದ ವೃತ್ತಿತೆರಿಗೆ ವಸೂಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು ಆದಾಯದ ಶೇ.91 ಪರೋಕ್ಷ ತೆರಿಗೆಗಳಿಂದ ಬರುತ್ತದೆ. ಕೇಂದ್ರ ಸರಕಾರದ ತೆರಿಗೆಗಳು ಪ್ರತ್ಯೇಕವಾಗಿವೆ.

ರಾಜ್ಯಪುನರ್ಘಟನೆಗೂ ಮೊದಲು ಅಸ್ತಿತ್ವದಲ್ಲಿದ್ದ ವಾಣಿಜ್ಯ ತೆರಿಗೆ ವ್ಯವಸ್ಥೆಗಳಿಗೆ ಬದಲು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957 (2) ಕೇಂದ್ರ ವಾಣಿಜ್ಯ ತೆರಿಗೆ ಅಧಿನಿಯಮ 1957, ಅಲ್ಲದೆ (3) ಕರ್ನಾಟಕ ಮನರಂಜನೆ ತೆರಿಗೆ ಅಧಿನಿಯಮ 1957 (4) ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ 1957 (5) ಕರ್ನಾಟಕ ನೌಕರಿ, ವಾಣಿಜ್ಯ, ವೃತ್ತಿ ಮತ್ತು ಉದ್ಯೋಗಗಳ ಅಧಿನಿಯಮ 1976 (6) ಕರ್ನಾಟಕ ವಿಹಾರಾಮ (ಹೋಟೆಲ್ ಮತ್ತು ವಸತಿಗೃಹ) ತೆರಿಗೆಗಳ ಅಧಿನಿಯಮ 1976 ಮತ್ತು (7) ಕರ್ನಾಟಕ ಉಪಭೋಗವಸ್ತುಗಳ ಬಳಕೆ ಮತ್ತು ಮಾರಾಟಕ್ಕೆ ಪ್ರಾದೇಶಿಕ ಕ್ಷೇತ್ರಗಳ ಪ್ರವೇಶ ತೆರಿಗೆ 1979 ಇವುಗಳನ್ನು ಜಾರಿಗೆ ತರಲಾಯಿತು.

### ವಾಣಿಜ್ಯ ತೆರಿಗೆ

ಕರ್ನಾಟಕ ವಾಣಿಜ್ಯ ತೆರಿಗೆ ಅಧಿನಿಯಮ 1957 ಹಾಗೂ ಕೇಂದ್ರ ವಾಣಿಜ್ಯ ತೆರಿಗೆ ಅಧಿನಿಯಮ 1956 ರಾಜ್ಯದಲ್ಲಿ ಜಾರಿಯಲ್ಲಿವೆ. ರಾಜ್ಯ ರಾಜ್ಯಗಳ ನಡುವಣ ವ್ಯಾಪಾರಕ್ಕೆ ಸಂಬಂಧಿಸಿ ವಾಣಿಜ್ಯ ತೆರಿಗೆ ಸಂಗ್ರಹಿಸಿ ರಾಜ್ಯವು ತಾನೇ ಇಟ್ಟುಕೊಳ್ಳಲು ಎರಡನೇಯ ಕಾನೂನು ಅವಕಾಶ ಕೊಡುತ್ತದೆ. ಈಗ ಇರುವ ವಾಣಿಜ್ಯ ತೆರಿಗೆಯಲ್ಲಿ ಏಕಸ್ಥಾನೀಯ (ಸಿಂಗಲ್ ಪಾಯಿಂಟ್) ಮತ್ತು ಬಹುಸ್ಥಾನೀಯ (ಮಲ್ಟಿಪಾಯಿಂಟ್) ವಸೂಲಾತಿಯ ವ್ಯವಸ್ಥೆ ಇದೆ. ಉತ್ಪಾದಕ, ಆಮದುದಾರರಿಂದ ಹಿಡಿದು ಅಂತಿಮವಾಗಿ ಬಳಕೆದಾರರವರೆಗೆ ಯಾವುದಾದರೂ ಒಂದು ಹಂತದಲ್ಲಿ ಮಾತ್ರ ಏಕಸ್ಥಾನೀಯ ತೆರಿಗೆ ವಸೂಲು ಮಾಡಲಾಗುವುದು. ಬಹುಸ್ಥಾನೀಯ ತೆರಿಗೆಯನ್ನು ವಸ್ತುವು ಮಾರಾಟದ ಕಾಲಕ್ಕೆ ಕೈಬದಲಾದಾಗಲೆಲ್ಲ ಅದರ ವ್ಯಾಪಾರಿಯಿಂದ ಸಂಗ್ರಹಿಸಲ್ಪಡುವುದು. ಏಕಸ್ಥಾನೀಯ

ತೆರಿಗೆಯ ದರಗಳು ಶೇ.1 ರಿಂದ 150 ರವರೆಗೆ ಇರುವುದು. 1986 ರಿಂದ ಇದನ್ನು ಶೇಕಡಾ 200 ಕ್ಕೆ ಏರಿಸಿದೆ. ಸುಮಾರು 293 ಮುಖ್ಯ ವಸ್ತುಗಳಲ್ಲಿ 178 ವಸ್ತುಗಳು ಏಕಸ್ಥಾನೀಯ ತೆರಿಗೆಗೆ ಒಳಪಟ್ಟಿವೆ. ಉಳಿದವು ಬಹುಸ್ಥಾನೀಯ ತೆರಿಗೆಗೆ ಬದ್ಧವಾಗಿವೆ. ಸಾಮಾನ್ಯ ಬಳಕೆಯ ವಸ್ತುಗಳು ಶೇ.4 ಮಾರಾಟ ತೆರಿಗೆಗೆ ಒಳಪಟ್ಟಿವೆ. ಮದ್ಯಗಳು ಅಬಕಾರಿ ಸುಂಕಕ್ಕೆ ಒಳಪಡದಿದ್ದಲ್ಲಿ ಶೇ.200 ತೆರಿಗೆಗೆ ಪಾತ್ರವಾಗಿವೆ.

1984 ರ ಏಪ್ರಿಲ್ 1 ರಿಂದ ಜಾರಿಗೆ ಬಂದ ಕಾನೂನಿನಂತೆ 50,000 ರೂ. ಅಥವಾ ಅದಕ್ಕೂ ಹೆಚ್ಚಿನ ವಾರ್ಷಿಕ ವಿಕ್ರಯ ಉಳ್ಳ ವ್ಯಾಪಾರಿಯು ರೂ.200 ಪಾವತಿ ಮಾಡಿ ತನ್ನನ್ನು ನೋಂದಾಯಿಸಿಕೊಳ್ಳಬೇಕು. ಅವನ ವಾರ್ಷಿಕ ವಿಕ್ರಯ 1 ಲಕ್ಷಕ್ಕೂ ಮೀರಿದ್ದರೆ ಅವನು ವಾಣಿಜ್ಯ ತೆರಿಗೆ ಕೊಡಲೇಬೇಕು. 1985 ರಿಂದ ನೋಂದಣಿಗೆ ಬೇಕಾದ ವಿಕ್ರಯದ ಮಿತಿಯನ್ನು ರೂ.75,000 ಕ್ಕೆ ಏರಿಸಿದೆ, ನೋಂದಣಿ ಶುಲ್ಕ ರೂ.250 ಕ್ಕೆ ಏರಿದೆ. ಪ್ರತೀ ತಿಂಗಳ 20 ನೇಯ ತಾರೀಕಿಗೆ ಹಿಂದಿನ ತಿಂಗಳ ಮಾಸಿಕ ಮಾರಾಟದ ವರದಿಯನ್ನು ಇಲಾಖೆಗೆ ಒಪ್ಪಿಸಬೇಕೆಂಬ ನಿಯಮವಿದೆ. ನೋಂದಣಿಯ ಈ ಮಿತಿಯನ್ನು 1987-88 ರಿಂದ ಒಂದು ಲಕ್ಷಕ್ಕೆ ಹಾಗೂ 1990-91 ರಿಂದ ರೂ.2 ಲಕ್ಷಕ್ಕೆ ಹೆಚ್ಚಿಸಿದೆ. ಹೋಟೇಲು, ಬಾರ್ ಮುಂತಾದವರಿಗೆ ಈ ಮಿತಿ ಒಂದು ಲಕ್ಷ ರೂ. ಮಾತ್ರ. ಮದ್ಯ ಉತ್ಪಾದಕರಿಗೂ ಮಾರಾಟದಾರರಿಗೂ ಇದೇ ಒಂದು ಲಕ್ಷದ ಮಿತಿ ಇದೆ.

ವರ್ಷಕ್ಕೆ 1.50 ಲಕ್ಷ ರೂ.ಗೂ ಹೆಚ್ಚು ವಿಕ್ರಯ (ಟರ್ನ್‌ಓವರ್)ವಿರುವ ವ್ಯಾಪಾರಿಗಳು ವಿಕ್ರಯ ತೆರಿಗೆಯಾಗಿ ಶೇ.1.50 ನಷ್ಟು ಪಾವತಿ ಮಾಡಬೇಕು. ಐದು ಲಕ್ಷ ರೂ.ಗೂ ಹೆಚ್ಚಿನ ವಿಕ್ರಯವಿರುವ ವ್ಯಾಪಾರಿಗಳು ಪ್ರತೀ ಮಾರಾಟದ ವಿಶಿಷ್ಟ ಹಂತಕ್ಕೆ ಖಚಿತಗೊಳಿಸಿದ ದರದಂತೆ ಹೆಚ್ಚಿನ ತೆರಿಗೆ ಕೊಡಬೇಕು. ಈ ತೆರಿಗೆಯನ್ನು ಬಹುಸ್ಥಾನೀಯ ತೆರಿಗೆಯ ರೂಪದಲ್ಲಿ ಸಂಗ್ರಹಿಸಲು ಕೂಡ ಅವಕಾಶವಿದೆ. ಲಾಟರಿ ಟಿಕೆಟ್‌ಗಳ ಮೇಲೆ ಶೇ.10 ಮಾರಾಟ ತೆರಿಗೆಯನ್ನು 1986 ಏಪ್ರಿಲ್ 1 ರಿಂದ ಜಾರಿ ಮಾಡಿದೆ. ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಂಗ್ರಹವಾದ ತೆರಿಗೆಯ ವಿವರವನ್ನು ಅಧ್ಯಾಯದ ಕೊನೆಯಲ್ಲಿ ಪ್ರತ್ಯೇಕ ಕೋಷ್ಟಕ 9.6 ರಲ್ಲಿ ಕೊಟ್ಟಿದೆ.

**ಮನರಂಜನೆ ತೆರಿಗೆ**

1958 ರ ಜನವರಿ ಒಂದರಿಂದ ಇಡೀ ರಾಜ್ಯಕ್ಕೆ ಒಂದು ಸಮಾನ ಮನರಂಜನೆ ತೆರಿಗೆ ಜಾರಿ ಮಾಡಿದರು. ಇದರ ಸಂಗ್ರಹಣೆಯ ಜವಾಬ್ದಾರಿ ಮಾರಾಟ ತೆರಿಗೆ ಇಲಾಖೆಗೆ ಬಂತು. ಚಲನಚಿತ್ರ ಮಂದಿರದ ಮತ್ತು ಕುದುರೆ ಪಂದ್ಯಗಳ ಪ್ರವೇಶ ಪತ್ರ (ಟಿಕೆಟ್)ಗಳ ಮೇಲೆ ಈ ಕರ ಹೇರಲಾಗುತ್ತಿದೆ. ನಾಟಕ, ಸಂಗೀತ ಕಾರ್ಯಕ್ರಮಗಳು ಇದರಿಂದ ವಿನಾಯತಿ ಪಡೆದಿವೆ. ಚಲನಚಿತ್ರದ ಪ್ರತೀ ಪ್ರದರ್ಶನ ('ಶೋ')ದ ಮೇಲೆ ತೆರಿಗೆ ಇದೆ. ಜುಲೈ 1982 ರಿಂದ ಪ್ರವೇಶ ಪತ್ರ (ಟಿಕೆಟ್)ಗಳ ಮೇಲಿನ ತೆರಿಗೆಯನ್ನು ಪ್ರವೇಶ ದರದ ಮೇಲೆ ಅವಲಂಬಿಸಿ ಶೇ.30 ರಿಂದ 50 ಕ್ಕೆ ಏರಿಸಲಾಯಿತು. ಮನರಂಜನ ತೆರಿಗೆಯ ಮೇಲೆ ಶೇ.100 ಸರ್‌ಚಾರ್ಜ್ ವಿಧಿಸಲಾಯಿತು. ಪ್ರತೀ ಪ್ರದರ್ಶನದ ಸಂಗ್ರಹದ ಹಂತದಂತೆ (ಸ್ಲ್ಯಾಬ್) ಪ್ರದರ್ಶನ ತೆರಿಗೆಯನ್ನು ಹೇರಲಾಯಿತು. ಪ್ರದರ್ಶನ ತೆರಿಗೆ ಮತ್ತು ಸರ್‌ಚಾರ್ಜ್ ಹೊರತುಪಡಿಸಿ ಮನರಂಜನ ತೆರಿಗೆಯ ಶೇ.90 ನ್ನು ಸಿನೇಮಾ ಮಂದಿರವಿರುವ ಸ್ಥಳದ ಸ್ಥಳೀಯ ಸಂಸ್ಥೆಗೆ ಬಿಟ್ಟು ಕೊಡಲಾಗುವುದು. ಉಳಿದ ಶೇ.10 ನ್ನು ಸಂಗ್ರಹಣೆಯ ವೆಚ್ಚವೆಂದು ರಾಜ್ಯ ಸರಕಾರವು ತಾನೇ ಇಟ್ಟುಕೊಳ್ಳುವುದು. ಅಧಿನಿಯಮದ ಪ್ರಕರಣ 4.ಎ ಯಂತೆ ತೆರಿಗೆ ನೀಡುವ ಪ್ರದರ್ಶನ ಗೃಹಗಳಿಗೆ ಸಂಬಂಧಿಸಿ ಸ್ಥಳೀಯ ಸಂಸ್ಥೆಗಳಿಗೆ ನೀಡುವ ಪರಿಹಾರ ಒಟ್ಟು ಸಂಗ್ರಹದ ಶೇ.36 ಆಗಿದೆ.

ಈ ಮೊದಲು ಅಧಿನಿಯಮದ ಪ್ರಕರಣ 4 ಎ ಯಂತೆ ವಿಡಿಯೋ ಪ್ರದರ್ಶನ ಗೃಹಗಳು, ತಾವು ನಡೆಸಿದ್ದ ಪ್ರದರ್ಶನಗಳ ಸಂಖ್ಯೆಯನ್ನು ಪರಿಗಣಿಸದೆ ಪ್ರತೀ ತಿಂಗಳು 2,500 ರೂ. ತೆರಬೇಕಾಗಿತ್ತು. ಕ್ರಿಕೆಟ್, ಟೆನ್ನಿಸ್, ಹಾಕಿ ಮುಂತಾದ ಕ್ರೀಡೆಗಳ ಮೇಲೆ ಹೇರಿದ ತೆರಿಗೆಯನ್ನು 1984 ರ ಏಪ್ರಿಲ್‌ನಿಂದ ರದ್ದುಪಡಿಸಿ ಸಿನೇಮಾ ಗೃಹಗಳ ಪ್ರವೇಶದ ಬಗ್ಗೆ ತಹಶಿಲ್ದಾರರು, ಪುರಸಭೆಗಳ ಚೀಫ್ ಆಫೀಸರರು, ಪೋಲೀಸ್ ನಿರೀಕ್ಷಕರು, ಹಾಗೂ ಇಲಾಖೆಯ ಸಿಬ್ಬಂದಿಗಳು ನಿರೀಕ್ಷಣೆ (ತನಿಖೆ) ನಡೆಸಲು ಅಧಿಕೃತರಾಗಿದ್ದಾರೆ. ಜಿಲ್ಲೆಯಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಸಂಗ್ರಹವಾದ ಮನರಂಜನ ತೆರಿಗೆಯ ಮೊತ್ತವನ್ನು ಕೋಷ್ಟಕ 9.12 ರಲ್ಲಿ ಕೊಟ್ಟಿದೆ.

### ಕೃಷಿ ಆದಾಯ ತೆರಿಗೆ

ಭೂಕಂದಾಯ ನೀಡುತ್ತಿರುವ ಯಾವುದೇ ಭೂಮಿಯಿಂದ ಬರುವ ಆದಾಯ ಅಥವಾ ಗೇಣಿಯ ಮೊತ್ತದ ಮೇಲೆ ಕೃಷಿ ಆದಾಯ ತೆರಿಗೆಯನ್ನು ಆಕರಿಸಲಾಗುತ್ತದೆ. ಈ ಭೂಮಿಯಲ್ಲಿ ಬೆಳೆಯುತ್ತಿರುವುದು ವಾಣಿಜ್ಯ ಬೆಳೆಯಾಗಿರಬೇಕು. ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ 1957 ರಂತೆ ಏಳು ತೋಟಗಾರಿಕೆ ಬೆಳೆಗಳ (ಪ್ಲಾಂಟೇಶನ್) ಸಹಿತ 31 ವಾಣಿಜ್ಯ ಬೆಳೆಗಳ ಮೇಲೆ ಈ ತೆರಿಗೆ ಆಕರಿಸಲಾಗುವುದು. ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ 1976 ರಂತೆ ವಾರ್ಷಿಕ ಆದಾಯವು 1976-77 ರಿಂದ ರೂ. 8,000 ಕ್ಕೂ ಮೀರಿರುವ ಕೃಷಿ ಆದಾಯ ಹಾಗು ತೋಟಗಾರಿಕೆ ಆದಾಯದ ವಿಚಾರದಲ್ಲಿ ತೋಟದ ವಿಸ್ತಾರ ಇವುಗಳನ್ನು ಗಮನಿಸಿ ತೆರಿಗೆ ಹೇರಲಾಗುತ್ತಿತ್ತು. 1983 ರ ತಿದ್ದುಪಡಿಯಂತೆ ವಿನಾಯತಿ ಮಿತಿಯನ್ನು ರೂ. 8000 ರಿಂದ ರೂ. 14,000 ಕ್ಕೆ ಹೆಚ್ಚಿಸಿ 1981-82 ರಿಂದಲೇ ಜಾರಿಮಾಡಲಾಯಿತು. ಮತ್ತೆ ತಿದ್ದುಪಡಿಯಾದ 1985 ರ ಕಾನೂನಿನಂತೆ ತೆರಿಗೆ ಆಕರಿಸುವ ಆದಾಯದ ಮಿತಿಯನ್ನು ರೂ.14,000 ರಿಂದ ರೂ.20,000 ಕ್ಕೆ ಹೆಚ್ಚಿಸಲಾಯಿತು. ಅದರ ನಂತರ ಮತ್ತೆ 1986 ರಲ್ಲಿ ತಂದ ತಿದ್ದುಪಡಿಯಂತೆ 25 ಎಕ್ರೆ ವರೆಗೆ ಭೂಮಿಯಿದ್ದು ಬಾಳೆಹಣ್ಣು, ತೆಂಗು, ಏಲಕ್ಕಿ, ಕಾಳುಮೆಣಸು ಅಥವಾ ಕಿತ್ತಳೆ ಹಣ್ಣನ್ನು ಪೂರ್ತಿಯಾಗಿ ಅಥವಾ ಮಿಶ್ರ ಬೆಳೆಯಾಗಿ ಬೆಳೆಯುವವರಿಗೆ ತೆರಿಗೆಯು ಅನ್ವಯವಾಗುವುದು. ಇದರಲ್ಲಿ 15 ಎಕ್ರೆ ವರೆಗೆ ತೆರಿಗೆ ಇಲ್ಲ, ಆದರೆ, 15 ಕ್ಕಿಂತ ಮೇಲೆ ಮತ್ತು 20 ಎಕ್ರೆವರೆಗೆ ಭೂಮಿಯಿರುವವರಿಗೆ ಹೆಚ್ಚುವರಿ ಪ್ರತೀ ಎಕ್ರೆಗೂ ರೂ.1,500. ಭೂಮಿಯ ವಿಸ್ತಾರ 20 ಎಕ್ರೆಗೂ ಹೆಚ್ಚು ಮತ್ತು 25 ಎಕ್ರೆಗೂ ಕಡಿಮೆ ಇದ್ದಾಗ ಪ್ರತೀ ಎಕ್ರೆಗೆ 2,500 ರೂ. ಇದರಂತೆ ಜಿಲ್ಲೆಯಲ್ಲಿ ಸಂಗ್ರಹವಾದ ಮೊತ್ತವನ್ನೂ (ಇತ್ತೀಚಿನ ವರ್ಷಗಳಿಗೆ ಸಂಬಂಧಿಸಿದ) ಅಧ್ಯಾಯದ ಕೊನೆಯಲ್ಲಿ ಕೋಷ್ಟಕ 9.6ರಲ್ಲಿ ಕೊಟ್ಟಿದೆ.

### ವೃತ್ತಿ ತೆರಿಗೆ

1976 ಕ್ಕೂ ಮೊದಲು ಉದ್ಯೋಗ, ವೃತ್ತಿ ಮತ್ತು ಕಸುಬುಗಳ ಮೇರೆ ತೆರಿಗೆಯನ್ನು ಸ್ಥಳೀಯ ಆಡಳಿತ ಸಂಸ್ಥೆಗಳು ಮಾತ್ರ ಸಂಗ್ರಹಿಸುತ್ತಿದ್ದವು. ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಪ್ರಕಾರ ವೃತ್ತಿ ತೆರಿಗೆ ವಸೂಲಿಗೆ ವೃತ್ತಿದಾರರನ್ನು ಒಂಬತ್ತು ಗುಂಪುಗಳಾಗಿ ವಿಭಜಿಸಲಾಗಿತ್ತು. ಆದರೆ ಉದ್ಯೋಗ, ವ್ಯಾಪಾರ ಮತ್ತು ವೃತ್ತಿಗಳ ಅಧಿನಿಯಮ 1976 ರಂತೆ ಉದ್ಯೋಗ, ವ್ಯಾಪಾರ, ವೃತ್ತಿ ಮತ್ತು ನೌಕರಿಗಳ ಮೇಲೆ ತೆರಿಗೆಯನ್ನು 1 ಏಪ್ರಿಲ್ 1976 ರಿಂದ ಜಾರಿ ಮಾಡಲಾಯಿತು. ವೇತನ ಪಡೆಯುವ ನೌಕರರ ತೆರಿಗೆ ದರ ಅವರ ವೇತನದ ಪ್ರಮಾಣದ ಮೇಲೆ ಅವಲಂಬಿಸಿವೆ. ವ್ಯಾಪಾರಿಯ ವಿಚಾರದಲ್ಲಿ ವಿಕ್ರಯ (ಟರ್ನ್ ಓವರ್)ದ ಪ್ರಮಾಣವನ್ನು ತೆರಿಗೆ ನಿರ್ಣಯದಲ್ಲಿ ಪರಿಗಣಿಸಲಾಗುತ್ತಿದೆ. ನೌಕರರ ವೃತ್ತಿ ತೆರಿಗೆಯನ್ನು ಪ್ರತೀ ತಿಂಗಳು ಅವರ ಸಂಬಳದಲ್ಲಿ ಮುರಿದುಕೊಳ್ಳುವ ಏರ್ಪಾಡಿದೆ. ಸ್ವಉದ್ಯೋಗಿಗಳು ಆಯಾ ವರ್ಷ ಸೆಪ್ಟೆಂಬರ್ 30 ಕ್ಕೆ ಮೊದಲು ತೆರಿಗೆ ಪಾವತಿ ಮಾಡಬೇಕು.

ಏಪ್ರಿಲ್ ಒಂದು, 1983 ರಿಂದ ತಿಂಗಳಿಗೆ ರೂ.1,200 ಮೂಲ ವೇತನ ಅಥವಾ ಕೂಲಿ ಪಡೆಯುವವರು ಹಾಗೂ ಅದಕ್ಕೆ ಮೇಲ್ಪಟ್ಟ ಆದಾಯ ಉಳ್ಳವರಿಗೆ ತೆರಿಗೆ ಬೀಳುತ್ತದೆ. ಸ್ವಯಂ ಉದ್ಯೋಗಿಗಳು ತಮಗೆ ಗೊತ್ತುಪಡಿಸಿದ ತೆರಿಗೆಯನ್ನು ಪ್ರತೀವರ್ಷ ಏಪ್ರಿಲ್ 30 ಕ್ಕೆ ಮೊದಲು ಪಾವತಿ ಮಾಡಬೇಕು.

ಕರ್ನಾಟಕ ಮಾರಾಟಕರ ಅಧಿನಿಯಮ 1950 ರಂತೆ ನೋಂದಾಯಿಸಿದ ವ್ಯಾಪಾರಿಗಳು ವಾರ್ಷಿಕ ವಿಕ್ರಯ 25,000 ಕ್ಕೆ ಮೇಲ್ಪಟ್ಟು ಮತ್ತು 50,000 ಕ್ಕೆ ಕಡಿಮೆ ಇರುವವರು ವರ್ಷಕ್ಕೆ ರೂ.100 ರಂತೆ, 50,000 ರೂ.ನಿಂದ ಮೇಲ್ಪಟ್ಟು 1 ಲಕ್ಷ ರೂ.ವರೆಗೆ ವಿಕ್ರಯವಿರುವವರು ವರ್ಷಕ್ಕೆ ರೂ.250 ರಂತೆ ತೆರಿಗೆ ಕೊಡಬೇಕು. ಆಗಸ್ಟ್ ಒಂದು, 1985 ರಿಂದ ವಾರ್ಷಿಕ ವಿಕ್ರಯ 75,000 ಕ್ಕೂ ಮೇಲ್ಪಟ್ಟು ಇರುವ ವ್ಯಾಪಾರಿಗಳು ರೂ. 250 ವಾರ್ಷಿಕ ವೃತ್ತಿ ತೆರಿಗೆ ಪಾವತಿ ಮಾಡಬೇಕು.

### ಪ್ರವೇಶ ತೆರಿಗೆ

ಪುರಸಭೆಗಳ ಪರಂಪರಾಗತ ಆದಾಯವಾದ ಆಕ್ಟ್ರಾಯ್ (ಜಕಾತಿ)ಯನ್ನು ಪುರದ ಗಡಿಯೊಳಗೆ ಬರುವ ಸರಕುಗಳ ಮೇಲೆ ಹೇರಲಾಗುತ್ತಿತ್ತು. ಆದರೆ ವ್ಯಾಪಾರಿಗಳಿಗೂ ಸಾರಿಗೆ ಉದ್ದಿಮೆಯವರಿಗೂ ಇದು ಕಿರಕಿರಿಯ ಸಂಗತಿ ಎನಿಸಿ ಅವರು ಅದನ್ನು

ವಿರೋಧಿಸಿದ್ದರಿಂದ 1 ಏಪ್ರಿಲ್ 1979 ರಿಂದ ಇದನ್ನು ರದ್ದುಪಡಿಸಿ ಮುಂದೆ ಕರ್ನಾಟಕ ಸರಕಾರವು ಸರಕುಗಳ ಪ್ರವೇಶ ತೆರಿಗೆ (ಕರ್ನಾಟಕ ಟ್ಯಾಕ್ಸ್ ಆನ್ ಎಂಟ್ರಿ ಆಫ್ ಗೂಡ್ಸ್) ಯನ್ನು ಜಾರಿಗೆ ತಂದಿತು. ಆಕ್ಟ್ರಾಯ ನಿಲ್ಲಿಸಿದ್ದರಿಂದ ಆದ ನಷ್ಟವನ್ನು ತುಂಬಲು ಇದನ್ನು ಜಾರಿ ಮಾಡಿದರು. ಇದು ಮಾರಾಟ ತೆರಿಗೆಯ ಮೇಲೆ ಶೇ.10 ರಷ್ಟು ಸರ್‌ಚಾರ್ಜ್ ರೂಪದಲ್ಲಿ ಇದ್ದು, ಬಟ್ಟೆ, ಸಕ್ಕರೆ, ತಂಬಾಕು ಮುಂತಾದ ಮಾರಾಟ ಕರಕ್ಕೆ ಒಳಪಡದ ವಸ್ತುಗಳ ಮೇಲೂ ಹೇರಲ್ಪಟ್ಟಿದೆ. ಇಂಥ ವಸ್ತುಗಳ ಮೇಲೆ ಆಕರಣೆಯು ಶೇ. 1 ರಿಂದ 2. ಈ ತೆರಿಗೆಯ ವಸೂಲಿಯನ್ನು 1 ಜೂನ್ 1979 ರಿಂದ ಜಾರಿಗೊಳಿಸಬೇಕೆಂದಿದ್ದು ವಾಸ್ತವ ವಸೂಲಿ 1 ಅಕ್ಟೋಬರ್ 1980 ರಿಂದ ಜಾರಿಯಾಯಿತು. ಸಕ್ಕರೆ, ತಂಬಾಕು ಮುಂತಾದ 13 ಸರಕುಗಳ ಮೇಲೆ 1982-83 ರಿಂದ ಈ ತೆರಿಗೆ ಆಕರಿಸಿ ಅವುಗಳ ಉತ್ಪಾದನೆಯ ಮೇಲೂ ಹೆಚ್ಚಿನ ದರದ ತೆರಿಗೆ ಆಕರಿಸಲಾಯಿತು. ಸಂಗ್ರಹವಾದ ಹಣದಲ್ಲಿ ಶೇ.10 ನ್ನು ರಾಜ್ಯ ಸರ್ಕಾರವು ಸಂಗ್ರಹಣಾ ವೆಚ್ಚವೆಂದು ತಾನೇ ಇಟ್ಟುಕೊಂಡು ಉಳಿದ ಶೇ.90 ಭಾಗವನ್ನು ಸ್ಥಳೀಯ ಸಂಸ್ಥೆಗಳಿಗೆ ವಿತರಣೆ ಮಾಡುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಸಂಗ್ರಹವಾದ ಮೊತ್ತವನ್ನು ಅಧ್ಯಾಯದ ಕೊನೆಯಲ್ಲಿ ಕೋಷ್ಟಕ 9.12 ರಲ್ಲಿ ಕೊಟ್ಟಿದೆ.

**ಐಷಾರಾಮು ತೆರಿಗೆ**

ಕರ್ನಾಟಕ ಐಷಾರಾಮ (ಲಗ್ಷರಿ) (ಹೋಟೇಲು ಮತ್ತು ವಸತಿ ಗೃಹ) ಅಧಿನಿಯಮವು 1 ಜೂನ್ 1979 ರಿಂದ ಜಾರಿಗೆ ಬಂತು. ದಿನಕ್ಕೆ ರೂ.50 ಕ್ಕಿಂತ ಹೆಚ್ಚು ಹಾಗೂ 150 ಕ್ಕಿಂತ ಕಡಿಮೆ ಬಾಡಿಗೆಯನ್ನು ಹೋಟೆಲ್ ವಸತಿಗಾಗಿ ನೀಡುವ ಪ್ರಸಂಗದಲ್ಲಿ ಶೇ.10 ಐಷಾರಾಮು (ಲಗ್ಷರಿ) ತೆರಿಗೆ, ರೂ.150 ರಿಂದ 250 ರವರೆಗೆ ಬಾಡಿಗೆಗೆ ಶೆ.25, ರೂ. 250 ಕ್ಕಿಂತ ಮೇಲ್ಪಟ್ಟು ಇದ್ದಲ್ಲಿ ಶೇ.20 ತೆರಿಗೆ ನೀಡಬೇಕು.

ಕರ್ನಾಟಕ ವಾಣಿಜ್ಯ ತೆರಿಗೆ ಅಧಿನಿಯಮದಂತೆ ನೋಂದಾಯಿಸಲ್ಪಟ್ಟ ಹೋಟೆಲು ಅಥವಾ ವಸತಿಗೃಹದ ಮಾಲೀಕರು ನೋಂದಣಿ ಮತ್ತು ನವೀಕರಣಕ್ಕೆ ತೆರಿಗೆ ಕೊಡಬೇಕಾಗಿಲ್ಲ, ಈ ತೆರಿಗೆಯಂತೆ ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ವಸೂಲಾದ ವಿವರಗಳನ್ನು ಅಧ್ಯಾಯದ ಕೊನೆಯಲ್ಲಿ ಕೋಷ್ಟಕ 9.6ರಲ್ಲಿ ಕೊಟ್ಟಿದೆ.

**ಅಬಕಾರಿ**

ಏಕೀಕರಣಕ್ಕೆ ಪೂರ್ವದಲ್ಲಿ ಮುಂಬೈ ರಾಜ್ಯದಲ್ಲಿದ್ದ ಧಾರವಾಡ ಜಿಲ್ಲೆಯಲ್ಲಿ 1950 ರಿಂದ ಪಾನ ಪ್ರತಿಬಂಧ ಜಾರಿಯಲ್ಲಿದ್ದು 1967 ರಿಂದ ಇದನ್ನು ರದ್ದುಪಡಿಸಲಾಯಿತು. ಇದರಿಂದ 1965 ರ ಕರ್ನಾಟಕ ಅಬಕಾರಿ ಅಧಿನಿಯಮವು ಜಿಲ್ಲೆಯಲ್ಲಿ ಜಾರಿಗೆ ಬಂದಿತು. ಈ ಕಾನೂನಿನ ಮುಖ್ಯಾಂಶಗಳೆಂದರೆ, (1) ಸರಕಾರವು ಗೊತ್ತುಪಡಿಸಿದ ಅಥವಾ ಕಾಲಕಾಲಕ್ಕೆ ಗೊತ್ತುಪಡಿಸಬಹುದಾದ ಅಬಕಾರಿ ಸುಂಕಕ್ಕೆ ಪಾತ್ರವಾದ ಯಾವುದೇ ವಸ್ತುವಿಗೆ ನೀಡುವ ರಹದಾರಿ ಅಥವಾ ಅನುಮತಿ ಪತ್ರ (ಲೈಸನ್ಸ್)ದ ಶುಲ್ಕ, (2) ತಯಾರಾದ ವಸ್ತುವಿನ ಮೇಲೆ ಉತ್ಪಾದನೆಯ ಪರಿಮಾಣದಂತೆ ಸುಂಕ, (3) ಚಿಲ್ಲರೆ ಮಾರಾಟಗಾರರು, ಬಾರುಗಳು, ಹೋಟೆಲುಗಳು ಮೇಲೆ ಅನುಮತಿ ಪತ್ರದ ಶುಲ್ಕ (ಲೈಸನ್ಸ್ ಫೀ), (4) ಸೇಂದಿ ಮತ್ತು ಸಾರಾಯಿ ಅಂಗಡಿಗಳ ಗುತ್ತಿಗೆ ಹರಾಜು ಮಾಡಿದಾಗ ಬರುವ ಆದಾಯ, (5) ಅಂಗಡಿಗಳ ಬಾಡಿಗೆ, (6) ಬೇರೆ ರಾಜ್ಯದಿಂದ ಆಮದು ಮಾಡಿದ ಮದ್ಯದ ಮೇಲೆ ತೆರಿಗೆ, (7) ಸೇಂದಿ ಮರದ ಮೇಲೆ ತೆರಿಗೆ ಹಾಗೂ ಬಾಡಿಗೆ, (8) ಕಾನೂನು ಬಾಹಿರವಾಗಿ ಉತ್ಪಾದನೆ, ದಾಸ್ತಾನು, ಮಾರಾಟ, ಸಾಗಣೆ ಮಾಡಿದವರ ಮೇಲೆ ಹೇರುವ ದಂಡ, (9) ಬಾಟಲಿಗೆ ತುಂಬಿಸಿ ಮಾರಾಟಕ್ಕೆ ಸಿದ್ಧಪಡಿಸುವ ಬಹುಸ್ಥಾನೀಯ ಹಂತದ ತೆರಿಗೆ, (10) ವಸ್ತುಗಳ ಹೊರ ಸಾಗಣಿಕೆ (ರಫ್ತು)ಯ ಮೇಲೆ ಹೇರಿದ ತೆರಿಗೆ.

ಅಬಕಾರಿ ಸುಂಕವನ್ನು (1) ಕಾಕಂಬಿ, (2) ಕರ್ನಾಟಕದ ಡಿಸ್ಟಿಲರಿಗಳಲ್ಲಿ ತಯಾರಾದ ಬ್ರ್ಯಾಂಡಿ, ವಿಸ್ಕಿ, ರಮ್, ಜಿನ್, ಮಿಲ್ಕ್‌ಪಂಚ್ ಮುಂತಾದ ಪಾನೀಯಗಳು, (3) ರೆಕ್ಟಿಫೈಡ್ ಸ್ಪಿರಿಟ್, (4) ಬೀರ್, (5) ವೈನ್ ಹಾಗೂ ಫೆನ್ನಿ ಇವುಗಳ ಮೇಲೆ ಹೇರಲಾಗಿದೆ. ಇವುಗಳನ್ನು ಹೊರಗಿನಿಂದ ತಂದಾಗಲೂ ಸುಂಕ ಕೊಡಬೇಕು.

(1) ಕಾನೂನು ಬಾಹಿರ ಉತ್ಪಾದನೆ, (2) ಕಾನೂನು ಬಾಹಿರ ಸಾಗಣೆ, ಆಮದು ಮತ್ತು ರಫ್ತು, (3) ಕಾನೂನು ಬಾಹಿರವಾಗಿ ದಾಸ್ತಾನಿಡುವುದು ಮತ್ತು ಅಬಕಾರಿ ಅಧಿನಿಯಮಕ್ಕೆ ಮೀರಿ ದರ ವಿಧಿಸುವುದು, (4) ಡಿನೇಚರ್ಡ್ ಸ್ಪಿರಿಟನ್ನು ಪಾನ ಯೋಗ್ಯವಾಗಿ ಪರಿವರ್ತಿಸುವುದು, (5) ಲೈಸೆನ್ಸ್ ದುರುಪಯೋಗ, (6) ದುರ್ಮಿಶ್ರಣ, (7) ಬೇರೊಬ್ಬ ವ್ಯಕ್ತಿಯ ಪರವಾಗಿ ಮದ್ಯಗಳ ಉತ್ಪಾದನೆ, ದಾಸ್ತಾನು ಮತ್ತು ಮಾರಾಟ, (8) ಈ ಸಂಬಂಧ ಕಾನೂನು ಭಂಗಕ್ಕೆ ನೆರವಾಗುವಂತೆ ತನ್ನ ಕಾನೂನುಗಳು ಗೊತ್ತಿದ್ದೂ ಕೂಡ ಕಟ್ಟಡ, ಅವಶ್ಯ ಸಂಗ್ರಹಣಾ ಪಾತ್ರೆಗಳು, ವಾಹನ ಮುಂತಾದ ವಸ್ತುಗಳನ್ನು ಒದಗಿಸುವುದು, ಇವೆಲ್ಲ ದಂಡನಾರ್ಹ ಅಪರಾಧಗಳು. ಇದಕ್ಕೆ ದಂಡವನ್ನು ಸಂಗ್ರಹಿಸುವರು. ಈ ತೆರಿಗೆಯಂತೆ ಜಿಲ್ಲೆಯಲ್ಲಿ ಸಂಗ್ರಹವಾದ ಮೊತ್ತವನ್ನು ಇತ್ತೀಚಿನ ವರ್ಷಗಳಿಗೆ ಸಂಬಂಧಿಸಿ ಅಧ್ಯಾಯದ ಕೊನೆಯಲ್ಲಿ ಪ್ರತ್ಯೇಕ ಕೋಷ್ಟಕದಲ್ಲಿ ಕೊಟ್ಟಿದೆ.

## ಛಾಪಾಕಾಗದ ಮತ್ತು ನೋಂದಣಿ

ಭಾರತೀಯ ಮುದ್ರಾಂಕಿತ (ಸ್ಟಾಂಪ್) ಅಧಿನಿಯಮದಂತೆ ವಿನಿಮಯ ಪತ್ರಗಳು, ಚೆಕ್‌ಗಳು, ಪ್ರಾಮಿಸರಿ ನೋಟುಗಳು, ಸಾಲ ಪತ್ರಗಳು, ಜೀವವಿಮಾ ಪಾಲಿಸಿಗಳು, ಇವೆಲ್ಲ ಈ ಅಧಿನಿಯಮಕ್ಕೆ ಒಳಪಟ್ಟಿರುತ್ತವೆ.

ಭಾರತೀಯ ನೋಂದಣಿ ಅಧಿನಿಯಮ 1908 ರಂತೆ ಕೆಲವೊಂದು ದಸ್ತಾವೇಜುಗಳನ್ನು ನೋಂದಾಯಿಸಲೇಬೇಕು. ನೋಂದಾವಣೆಗೆ ಸೂಕ್ತ ದರ ಗೊತ್ತುಪಡಿಸಿದೆ. ಕರ್ನಾಟಕ ಮುದ್ರಾಂಕ ಅಧಿನಿಯಮವು ಮೇಲೆ ಹೇಳಿದ ಕಾಗದ ಪತ್ರಗಳನ್ನು ಹೊರತುಪಡಿಸಿ ಇತರ ಕಾಗದ ಪತ್ರಗಳಿಗೆ ಅನ್ವಯಿಸುತ್ತದೆ. ಈ ರಾಜ್ಯ ಅಧಿನಿಯಮದಂತೆ 55 ಬೇರೆ ಬೇರೆ ವಿಧದ ದಸ್ತಾವೇಜುಗಳು ಮುದ್ರಾಂಕನದ ಕಕ್ಷೆಯಲ್ಲಿ ಬರುತ್ತದೆ. ಇವುಗಳನ್ನು ಸ್ಥೂಲವಾಗಿ ಸ್ಥಿರ ತೆರಿಗೆಯವು ಹಾಗೂ ನೋಂದಾಯಿಸುವ ವಸ್ತುವಿನ ಮೌಲ್ಯದ ಪ್ರಮಾಣದವು ಎಂದೂ ವರ್ಗೀಕರಿಸಬಹುದು. ಇದರಲ್ಲಿ ಮೌಲ್ಯ ಉಳ್ಳ ವಸ್ತುಗಳ ಮೌಲ್ಯವನ್ನು ನೋಂದಣಿ ಪತ್ರದಲ್ಲಿ ಉಲ್ಲೇಖಿಸಿ ಅದಕ್ಕೆ ಅನುಗುಣವಾಗಿ ಗೊತ್ತುಪಡಿಸಿದ ಛಾಪಾಕಾಗದವನ್ನು ನೋಂದಣಿ ಪತ್ರಕ್ಕೆ ಬಳಸಬೇಕು, ಹಾಗೂ ಪ್ರತ್ಯೇಕ ನೋಂದಣಿ ಶುಲ್ಕ ಕೊಡಬೇಕು. ತಾತ್ಕಾಲಿಕ ವ್ಯವಹಾರಗಳಾದ ತಾತ್ಪೂರ್ತಿಕ ಹಸ್ತಾಂತರ ಅಥವಾ ತತ್ಸಮ ವ್ಯವಹಾರಗಳಲ್ಲಿ ಬಳಕೆಗೆ ಕೊಡದ ಅಡಮಾನ, ಆಸ್ತಿ ವಿಭಜನೆ, ಭದ್ರತಾ ಮುಚ್ಚಳಿಕೆ ('ಸೂರಿಟಿ') ಇವುಗಳಿಗೆಲ್ಲ ಛಾಪಾ ಕಾಗದದ ವೆಚ್ಚ ಕಡಿಮೆ ಇರುತ್ತದೆ. ಒಪ್ಪಂದದ ಕರಾರುಪತ್ರಗಳು (ಅಗ್ರಿಮೆಂಟ್ಸ್), ಪ್ರಮಾಣ ಪತ್ರ (ಅಫಿದವಿತ್) ದತ್ತಕ ಪ್ರಕರಣ ಇವುಗಳಿಗೆಲ್ಲ ಗೊತ್ತು ಮಾಡಿದ ಖಚಿತವಾದ ಮಿತದರ ಇರುತ್ತದೆ. ಇದಲ್ಲದೆ ನ್ಯಾಯಾಲಯ ಸಂಬಂಧಿ ಮತ್ತು ನ್ಯಾಯಾಂಗೇತರ ಪತ್ರಗಳೆಂಬ ವರ್ಗವೂ ಇರುತ್ತದೆ. ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ಮೊಕದ್ದಮೆಗಳ ಅಧಿನಿಯಮ 1958 ರಂತೆ ನ್ಯಾಯಾಂಗ ಸಂಬಂಧಿ ಮೊಕದ್ದಮೆಗಳಿಗೆ ಲಗತ್ತಿಸಬೇಕಾದ ಮುದ್ರಾಂಕ ಶುಲ್ಕ ನಿಗದಿಗೊಳಿಸಿದೆ. ಭಾರತೀಯ ಮುದ್ರಾಂಕಿತ ಅಧಿನಿಯಮ ಮತ್ತು ಕರ್ನಾಟಕ ಮುದ್ರಾಂಕ ಅಧಿನಿಯಮ 1958 ಇವುಗಳ ಕಕ್ಷೆಯಲ್ಲಿ ಬರುವ ಕಾಗದ ಪತ್ರಗಳು, ಕಾನೂನಿನಲ್ಲಿ ತಿಳಿಸಿರುವ ನ್ಯಾಯಾಂಗೇತರ ಛಾಪಾ ಕಾಗದದಲ್ಲಿ ಬರೆಯಲ್ಪಟ್ಟಿರಬೇಕೆಂದು ನಿಯಮವಿದೆ. ಈಗ ಜಿಲ್ಲೆಯಲ್ಲಿ 19 ಸಬ್‌ರಿಜಿಸ್ಟ್ರಾರರ ಕಚೇರಿಗಳಿದ್ದು ಅವರು ಈ ಕೆಳಗಿನ ಕಾನೂನುಗಳನ್ನು ಕಾರ್ಯಾಚರಣೆಗೆ ತರುತ್ತಾರೆ.

(1) ಭಾರತೀಯ ನೋಂದಣಿ ಕಾನೂನು 1908, (2) ಕರ್ನಾಟಕ ನೋಂದಣಿ ನಿಯಮಗಳು 1965, (3) ಕರ್ನಾಟಕ ಮುದ್ರಾಂಕನ ಅಧಿನಿಯಮ 1967 ಮತ್ತು ನಿಯಮಗಳು, (4) ಕರ್ನಾಟಕದ ನ್ಯಾಯಾಲಯ ಶುಲ್ಕ ಮತ್ತು ಮೊಕದ್ದಮೆಗಳ ಮೌಲ್ಯೀಕರಣ ಅಧಿನಿಯಮ 1958 ಹಾಗೂ ಅದರಂತೆ ಇರುವ ನಿಯಮಗಳು ಹಾಗೂ (5) ಭಾರತೀಯ ಭಾಗೀದಾರಿ ಅಧಿನಿಯಮ 1932.

ಜಿಲ್ಲಾ ಮಟ್ಟದಲ್ಲಿ ವಿಶೇಷ ಜಿಲ್ಲಾಧಿಕಾರಿಯು ಪದನಿಮಿತ್ತ ನೋಂದಣಿ ಅಧಿಕಾರಿಯಾಗಿರುತ್ತಾರೆ. ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸ್ಥಿರ ಆಸ್ತಿಗಳ ಹಸ್ತಾಂತರದ ನೋಂದಣಿ ಮತ್ತು ಸೂಕ್ತ ಶುಲ್ಕವನ್ನು ವಸೂಲು ಮಾಡುವುದು, ಉಪನೋಂದಣಿ ಅಧಿಕಾರಿ (ಸಬ್‌ರಿಜಿಸ್ಟ್ರಾರ್)ಯ ಕೆಲಸ. ಮದುವೆ, ದತ್ತಕ ಪ್ರಕರಣ ಹಾಗೂ ಉಯಿಲು (ವಿಲ್)ಗಳನ್ನೂ ಅವರೇ ನೋಂದಣಿ ಮಾಡುತ್ತಾರೆ. (ಈ ಬಗ್ಗೆ ಅಂಕೆಸಂಖ್ಯೆ ಅಧ್ಯಾಯ 3 ರಲ್ಲಿ ಇದೆ).

ಜಿಲ್ಲೆಯಲ್ಲಿ ಇತ್ತೀಚೆಗಿನ ವರ್ಷದಲ್ಲಿ ನೋಂದಣಿ ಮತ್ತು ಛಾಪಾಕಾಗದಗಳಿಂದ ಬಂದ ಆದಾಯದ ವಿವರವನ್ನು ಅಧ್ಯಾಯದ ಕೊನೆಯಲ್ಲಿ ಕೋಷ್ಟಕ 9.7ರಲ್ಲಿ ಕೊಟ್ಟಿದೆ.

## ಅರಣ್ಯ ಅಭಿವೃದ್ಧಿ ತೆರಿಗೆ

ಅರಣ್ಯಗಳು ಮಹತ್ವದ ರಾಷ್ಟ್ರೀಯ ಆಸ್ತಿಯಾಗಿದ್ದು ಅವುಗಳು ಪ್ರಗತಿ ಪರವಾಗಿ ಮತ್ತು ಚಿರವಾಗಿ ಆದಾಯ ನೀಡುವ ಸೂತ್ರದಂತೆ ನಿರ್ವಹಿಸಲ್ಪಡುತ್ತಿವೆ. ಅರಣ್ಯ ಕ್ಷೇತ್ರದಲ್ಲಿ ಸತತವಾಗಿ ಹೂಡಿಕೆಯಾಗಲು ನೆರವಾಗುವಂತೆ ಅರಣ್ಯ ಅಭಿವೃದ್ಧಿ ತೆರಿಗೆಯನ್ನು ರಾಜ್ಯ ಸರಕಾರವು 1975 ಜನವರಿಯಿಂದ ಆಕರಿಸುತ್ತಿದೆ. ಅರಣ್ಯ ಅಭಿವೃದ್ಧಿ ಅಧಿನಿಯಮ 1975 ಈ ತೆರಿಗೆ ಮೊದಲು ಶೇ.5 ಇದ್ದುದು ಮುಂದೆ 1 ಮೇ, 1980 ರಿಂದ ಶೇ.8 ಆಯಿತು. ಭಾರೀ ಕೈಗಾರಿಕೆಯವರು ಬಳಸುವ ಮರಮಟ್ಟು ಬಿದಿರುಗಳ ಮೇಲೆ ಮಾತ್ರ ಶೇ.12ತೆರಿಗೆ ಹಾಕುತ್ತಾರೆ. ಅರಣ್ಯೋತ್ಪನ್ನಗಳಾದ ಚೌಬೀನೆ (ಮರಮಟ್ಟು), ಸೌದೆ (ಜಲಾವ ಕಟ್ಟಿಗೆ), ಇದ್ದಿಲು ಮುಂತಾದವುಗಳು ಹಾಗೂ ಕಿರು ಉತ್ಪನ್ನಗಳಾದ ಶ್ರೀಗಂಧ (ಚಂದನ), ಬಿದಿರು, ಬೆತ್ತ ಇವುಗಳನ್ನು ರಾಜ್ಯ ಸರಕಾರವು ಲೀಲಾವು (ಹರಾಜು) ಇಲ್ಲವೆ ಇತರ ಕ್ರಮಗಳಿಂದ ಮಾರಾಟ ಮಾಡಿದಾಗ ಖರೀದಿ ಬೆಲೆಯ ಮೇಲೆ ಈ ತೆರಿಗೆಯನ್ನು ಆಕರಿಸಲಾಗುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಜಿಲ್ಲೆಯಲ್ಲಿ ಸಂಗ್ರಹವಾದ ಅರಣ್ಯ ಅಭಿವೃದ್ಧಿ ತೆರಿಗೆಯ ಮಾಹಿತಿಯನ್ನು ಅಧ್ಯಾಯದ ಕೊನೆಯಲ್ಲಿ ಪ್ರತ್ಯೇಕ ಕೋಷ್ಟಕದಲ್ಲಿ ಕೊಟ್ಟಿದೆ.

## ವಿದ್ಯುತ್ ತೆರಿಗೆ

ಸ್ವಾತಂತ್ರ್ಯ ಪೂರ್ವದಲ್ಲಿ ಜಿಲ್ಲೆಯ ಧಾರವಾಡ, ಹುಬ್ಬಳ್ಳಿ, ಮುಂತಾದ ಕೆಲವು ಪಟ್ಟಣಗಳಲ್ಲಿ ಮಾತ್ರ ಖಾಸಗಿ ಸಂಸ್ಥೆಗಳು ವಿದ್ಯುತ್ ಪೂರೈಕೆ ಮಾಡುತ್ತಿದ್ದವು. ಇಂಥ ವಿದ್ಯುತ್ ಬಳಕೆ ಆರಂಭವಾದಾಗ ಮುಂಬೈ ರಾಜ್ಯದಲ್ಲಿ ಬಳಕೆದಾರನು ಪ್ರತೀ ಯುನಿಟ್‌ಗೆ ಅರ್ಧ ಆಣೆ (ಮೂರು ಪೈಸೆ) ತೆರಿಗೆ ಕೊಡಬೇಕಾಗಿತ್ತಾದರೂ ಬೆಳಕಿನ ಉದ್ದೇಶಕ್ಕೆ ಮಾತ್ರ ಬಳಸುವ ವಿದ್ಯುತ್ತಿಗೆ 12 ಯುನಿಟ್‌ವರೆಗೆ ವಿನಾಯತಿ ಇತ್ತು. ಉಳಿದೆಲ್ಲ ರೀತಿಯ ಬಳಕೆಗೆ ಪ್ರತೀ ಎರಡು ಯುನಿಟ್‌ಗೆ ಕಾಲು ಆಣೆಯಂತೆ ತೆರಿಗೆ ಇತ್ತು. ಏಕೀಕರಣದ ನಂತರ ಮೈಸೂರು ವಿದ್ಯುತ್ (ತೆರಿಗೆ ಆಕರಣ ಮತ್ತು ಬಳಕೆ) ಅಧಿನಿಯಮ 1959 ರಂತೆ ಪ್ರತೀ ಯುನಿಟ್‌ಗೆ 3 ಪೈಸೆಯಂತೆ, ಏಪ್ರಿಲ್ 1970 ರಿಂದ ಯುನಿಟ್‌ಗೆ 6 ಪೈಸೆ ಮೀರದಂತೆ ಬಳಕೆದಾರರ ಮೇಲೆ ತೆರಿಗೆ ಆಕರಿಸಲಾಯಿತು. ಬೇರೆ ಬೇರೆ ವರ್ಗದ ಬಳಕೆದಾರರಿಗೆ ಬೇರೆ ಬೇರೆ ದರಗಳನ್ನು ಆಕರಿಸುತ್ತಿದ್ದರು. ವಿದ್ಯುತ್ತನ್ನು ಪೂರೈಸುತ್ತಿದ್ದ ಲೈಸನ್ಸ್‌ದಾರನೇ ಈ ತೆರಿಗೆ ಸಂಗ್ರಹಿಸಿ ಸರಕಾರಕ್ಕೆ ಪಾವತಿ ಮಾಡಬೇಕಿತ್ತು. ಲೈಸನ್ಸ್ ದಾರನೆಂದರೆ ರಾಜ್ಯ ವಿದ್ಯುತ್ ಮಂಡಳಿ ಅಥವಾ ವಿದ್ಯುತ್ ಪೂರೈಕೆ ನಡೆಸಲು ಭಾರತೀಯ ವಿದ್ಯುತ್ ಅಧಿನಿಯಮದಂತೆ ವಿದ್ಯುತ್ ಪೂರೈಕೆಗೆ ರಹದಾರಿ (ಲೈಸನ್ಸ್) ಪಡೆದ ವ್ಯಕ್ತಿ ಅಥವಾ ಸಂಸ್ಥೆಗಳು ಬಳಸಿದ ವಿದ್ಯುತ್ತಿನ ದರ ಸಂಗ್ರಹಿಸುವಾಗಲೇ ಈ ತೆರಿಗೆಯೂ ವಸೂಲಾಗುವುದು.

ಈ ತೆರಿಗೆಯಿಂದ ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಿಂದ ಸಂಗ್ರಹವಾದ ಮೊತ್ತದ ವಿವರ ಹೀಗಿದೆ.

ಲಕ್ಷ ರೂಗಳಲ್ಲಿ

| ಕ್ರಸಂ. | ವಿಭಾಗ | 1990-91 | 1991-92 | 1992-93 | 1993-94 |
|---|---|---|---|---|---|
| 1. | ಧಾರವಾಡ | 292 | 272 | 273 | 366 |
| 2. | ಹುಬ್ಬಳ್ಳಿ | 1.562 | 1,999 | 3,306 | 2,986 |
| 3. | ಗದಗ | 721 | 960 | 1,073 | 1,366 |
| 4. | ಹಾವೇರಿ | 661 | 800 | 859 | 1,060 |
| | ಒಟ್ಟು ಜಿಲ್ಲೆ | 3,236 | 4,031 | 5,511 | 5,778 |

## ಮೋಟಾರು ವಾಹನ ತೆರಿಗೆ

ಜಿಲ್ಲೆಯಲ್ಲಿ ಮೊದಲು ಮುಂಬೈ ರಾಜ್ಯದಲ್ಲಿದ್ದ ಮೋಟರ್ ವಾಹನಗಳ ಕಾನೂನು 1939 ಹಾಗೂ ಮೋಟಾರು ವಾಹನಗಳ ತೆರಿಗೆ ಕಾನೂನು 1935 ಜಾರಿಯಲ್ಲಿ ಇತ್ತು. ಮೊದಲ ಕಾನೂನಿನಂತೆ ಎಲ್ಲ ಮೋಟಾರು ವಾಹನಗಳನ್ನು ನೋಂದಾಯಿಸಬೇಕು,

ಎಲ್ಲ ವಾಹನ ಚಾಲಕರು ರಹದಾರಿ ಪಡೆದಿರಬೇಕು ಹಾಗೂ ಎಲ್ಲ ವಾಹನಗಳನ್ನು ವಿಮೆಗೊಳಪಡಿಸಬೇಕೆಂದು ನಿಯಮಿಸಲಾಗಿತ್ತು. ರಾಜ್ಯಪುನರ್ಘಟನೆಯ ನಂತರ ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮ 1957 ಜಾರಿಗೆ ಬಂದಿತು. ಇಲ್ಲಿ ನೋಂದಣಿ ಶುಲ್ಕವು ಮೋಟರ್ ಸೈಕಲ್‌ಗಳಾದರೆ ಅವುಗಳ ಅಶ್ವಶಕ್ತಿ, ಮೋಟಾರು ಕಾರುಗಳಾದರೆ ಖಾಲಿ ವಾಹನದ ಭಾರ, ಸಾಮಾನು ಸಾಗಿಗೆ ವಾಹನಗಳಾದರೆ ಅವುಗಳ ಭಾರವಾಹಕ ಸಾಮರ್ಥ್ಯ ಹಾಗೂ ಜನರ ಸಾರಿಗೆ ವಾಹನವಾದರೆ ವಾಹನದಲ್ಲಿ ಸಾಗಿಸಬಹುದಾದ ಪ್ರಯಾಣಿಕರ ಸಂಖ್ಯೆಯ ಮೇಲೆ ಅವಲಂಬಿಸಿ ಇತ್ತು. ಈ ಬಗ್ಗೆ ಜಾರಿಯಲ್ಲಿರುವ ಇತರ ಕಾನೂನುಗಳೆಂದರೆ 1957ರ ಅಧಿನಿಯಮವೇ ಅಲ್ಲದೆ ಕರ್ನಾಟಕ ಮೋಟಾರು ವಾಹನ ತೆರಿಗೆ ನಿಯಮಗಳು 1957 ಮತ್ತು ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1963. ಇತ್ತೀಚಿನ ವರ್ಷಗಳಲ್ಲಿ ಈ ತೆರಿಗೆಯಿಂದ ಸಂಗ್ರಹವಾದ ಮೊತ್ತದ ವಿವರ ಹೀಗಿದೆ.

ಲಕ್ಷ ರೂಗಳಲ್ಲಿ

| ಕ್ರಸಂ. | ವಿಭಾಗ | 1990-91 | 1991-92 | 1992-93 | 1993-94 |
|---|---|---|---|---|---|
| 1. | ಧಾರವಾಡ | 378 | 382 | 430 | 492 |
| 2. | ಗದಗ | 71 | 63 | 85 | 111 |
| 4. | ಹಾವೇರಿ | 72 | 86 | 105 | 128 |
| | ಒಟ್ಟು ಜಿಲ್ಲೆ | 521 | 531 | 620 | 731 |

## ಕೇಂದ್ರ ಸರಕಾರದ ತೆರಿಗೆಗಳು

### ಕೇಂದ್ರ ಅಬಕಾರಿ ಶುಲ್ಕ

ಒಂದು ಸಾಮಾನ್ಯ ಪ್ರವೇಶ (ಕಸ್ಟಮ್ಸ್) ಅಥವಾ ಉತ್ಪಾದನಾ ಸುಂಕವಾಗಿ (ಎಕ್ಸೈಜ್) ಅಬಕಾರಿ ಶುಲ್ಕ ಮೊದಲು ಆಕರಿಸಲ್ಪಟ್ಟಿತ್ತು. ಮುಂದೆ ಬಳಕೆದಾರನು ಪ್ರತೀ ವಸ್ತುವಿಗೆ ಕೊಡುವ ಬೆಲೆಗೆ ಸುಂಕವನ್ನು ಹೇರಲಾಯಿತು. 1894 ರಲ್ಲಿ ದೇಶದಲ್ಲಿ ತಯಾರಾದ ಹತ್ತಿ ನೂಲಿನ ಮೇಲೆ ಕೇಂದ್ರ ಸರಕಾರವು ಇದನ್ನು ಮೊದಲು ವಿಧಿಸಿತು. ಮುಂದೆ ನವಿರು ಬಟ್ಟೆಯ ಮೇಲೂ 1896 ರಿಂದ ಇದನ್ನು ಆಕರಿಸಲಾಯಿತು. 1917 ರಿಂದ ಮೋಟಾರ್ ಎಣ್ಣೆ (ಪೆಟ್ರೋಲು), 1922 ರಿಂದ ಸೀಮೆ ಎಣ್ಣೆ ಮತ್ತು 1930 ರಿಂದ ಬೆಳ್ಳಿಯ ಮೇಲೆ ಇದನ್ನು ಹೇರಲಾಯಿತು. 1934 ರಲ್ಲಿ ಅಬಕಾರಿ ಸುಂಕದ ಆಕರಣೆಯನ್ನು ತರ್ಕಬದ್ಧತೆಯನ್ನು ತಂದು ಸಕ್ಕರೆ, ಬೆಂಕಿಪೆಟ್ಟಿಗೆ, ಉಕ್ಕಿನ ಗಟ್ಟಿಗಳು ಮುಂತಾದವುಗಳನ್ನು ಈ ಸುಂಕಕ್ಕೆ ಒಳಪಡಿಸಲಾಯಿತು. ಈಗ 136 ವಸ್ತುಗಳು ಈ ಸುಂಕಕ್ಕೆ ಒಳಪಟ್ಟಿವೆ. ಕೇಂದ್ರದ ಅಬಕಾರಿ ಮತ್ತು ಉಪ್ಪಿನ ಅಧಿನಿಯಮ 1944 ರಂತೆ ಈಗ ಕೇಂದ್ರ ಅಬಕಾರಿ ಸುಂಕ ವಸೂಲಾಗುತ್ತಿದೆ. ಈ ಕಾನೂನಿನ I ಷೆಡ್ಯೂಲ್‌ನಂತೆ ಬೇರೆ ಬೇರೆ ವಸ್ತುಗಳ ಸುಂಕದ ದರ ಗೊತ್ತುಪಡಿಸಿದ್ದು ಕೇಂದ್ರ ಅಬಕಾರಿ (ಸೆಂಟ್ರಲ್ ಎಕ್ಸೈಸ್) ಇಲಾಖೆಯು ಈ ಕೆಳಗಿನ ಕಾನೂನುಗಳನ್ನು ಕಾರ್ಯಾಚರಣೆಗೆ ತರುತ್ತದೆ. (1) ಸ್ವರ್ಣ ನಿಯಂತ್ರಣ ಅಧಿನಿಯಮ 1968, (2) ಕಸ್ಟಮ್ಸ್ ಕಾನೂನು 1968, (3) ವಿದೇಶ ವಿನಿಮಯ ನಿಯಂತ್ರಣ ಅಧಿನಿಯಮ 1947 ('ಫೆರಾ'), (4) ರಫ್ತು ಮತ್ತು ಆಮದು ನಿಯಂತ್ರಣ ಕಾನೂನು 1955, (5) ಸಕ್ಕರೆ ನಿರ್ಯಾತ ಉದ್ದೀಪನ ಅಧಿನಿಯಮ 1958, (6) ಗಣಿ ಉತ್ಪನ್ನಗಳ (ಹೆಚ್ಚುವರಿ ಸುಂಕ ಮತ್ತು ಅಬಕಾರಿ)ಗಳ ಅಧಿನಿಯಮ 1958, (6) ಗಣಿ ಉತ್ಪನ್ನಗಳ (ಹೆಚ್ಚುವರಿ ಸುಂಕ ಮತ್ತು ಅಬಕಾರಿ) ಗಳ ಅಧಿನಿಯಮ 1958 (7) ಖಾದಿ ಮತ್ತು ಕೈಮಗ್ಗಗಳ ಬಟ್ಟೆಗಳ ಅಭಿವೃದ್ಧಿ ಹೆಚ್ಚುವರಿ ಅಬಕಾರಿ ಸುಂಕದ ಕಾನೂನು 1953, (8) ಉತ್ಪನ್ನ ಉಪತೆರಿಗೆ (ಸೆಸ್) ಕಾನೂನು 1966, (9) ಸುಂಕದ (ಹೆಚ್ಚುವರಿ ಅಬಕಾರಿ) ಕಾನೂನು 1957 (10) ಹೆಚ್ಚುವರಿ ಅಬಕಾರಿ (ವಿಶೇಷ ಮಹತ್ವದ ಸರಕುಗಳ) ಕಾನೂನು 1957, (11) ವಿದೇಶ ವಿನಿಮಯ ಸಂಚಯನ ಮತ್ತು ಕಳ್ಳಸಾಗಣೆ ತಡೆ ಕಾನೂನು ('ಕಾಫೆಪೊಸ್ಸ').

ಧಾರವಾಡ ಜಿಲ್ಲೆಯಲ್ಲಿ ಕೇಂದ್ರ ಅಬಕಾರಿ ಸುಂಕದ ವಸೂಲಿಗಾಗಿ ಎರಡು ವಿಭಾಗ (ಡಿವಿಜನ್)ಗಳನ್ನು ರಚಿಸಿದ್ದು ಇದು ಬೆಳಗಾವಿ ಜಿಲ್ಲಾ ಸೆಂಟ್ರಲ್ ಎಕ್ಸೈಜ್ ಕಲೆಕ್ಟರರ ಆಡಳಿತಕ್ಕೆ ಒಳಪಟ್ಟಿದೆ. ಹೊಸದಾಗಿ ರಚಿಸಲಾದ (ಸೆಪ್ಟೆಂಬರ 1, 1993 ರಿಂದ)

ಧಾರವಾಡ ವಿಭಾಗದಲ್ಲಿ ಧಾರವಾಡ ನಗರ ಮತ್ತು ಉತ್ತರ ಕನ್ನಡ ಹಾಗೂ ವಿಜಾಪುರ ಜಿಲ್ಲೆಗಳಿವೆ. ಹುಬ್ಬಳ್ಳಿ ವಿಭಾಗವು ಹುಬ್ಬಳ್ಳಿ ನಗರ ಮತ್ತು ಗದಗ ಪಟ್ಟಣವನ್ನು ಒಳಗೊಂಡಿವೆ. ಧಾರವಾಡ ಜಿಲ್ಲೆಗೆ ಸಂಬಂಧಿಸಿ ಹುಬ್ಬಳ್ಳಿಯಲ್ಲಿ ಎ, ಬಿ, ಸಿ ಮತ್ತು ಡಿ ರೇಂಜ್‌ಗಳಿವೆ.ಇದಲ್ಲದೆ ಧಾರವಾಡ ಎ ಮತ್ತು ಬಿ ಹಾಗೂ ಗದಗ ಮತ್ತು ರಾಣೆಬೆನ್ನೂರು ರೇಂಜ್‌ಗಳಿವೆ. ಈ ಎಂಟೂ ರೇಂಜ್‌ಗಳಿಂದ ಸಂಗ್ರಹವಾದ ಅಬಕಾರಿ ಸುಂಕದ ಮೊತ್ತ 1989-90 ರಲ್ಲಿ ರೂ. 23.04 ಕೋಟಿ, 1990-91 ರಲ್ಲಿ 27.51 ಕೋಟಿ, 1991-92 ರಲ್ಲಿ ರೂ. 36.01 ಕೋಟಿ, 1992-93 ರಲ್ಲಿ ರೂ.36.00 ಕೋಟಿ ಹಾಗೂ 1993-94 ರಲ್ಲಿ ರೂ.68.03 ಕೋಟಿ, 1993-94 ರಲ್ಲಿ ಹುಬ್ಬಳ್ಳಿ ರೇಂಜ್‌ನಿಂದ ರೂ. 2.14 ಕೋಟಿ, ಬಿ.ಯಿಂದ ರೂ.3.11 ಕೋಟಿ, ಸಿ.ಯಿಂದ ರೂ.1.66 ಕೋಟಿ, ಡಿ.ಯಿಂದ ರೂ.14.57 ಕೋಟಿ, ಧಾರವಾಡ ಎ. ರೇಂಜ್‌ನಿಂದ ರೂ.0.53 ಕೋಟಿ, ಬಿ.ಯಿಂದ ರೂ.0.63 ಕೋಟಿ, ರಾಣೆಬೆನ್ನೂರು ರೇಂಜ್‌ನಿಂದ 43.55 ಕೋಟಿ ಹಾಗೂ ಗದಗ್ ರೇಂಜ್‌ನಿಂದ 1.84 ಕೋಟಿ ರೂ. ವಸೂಲಾಗಿತ್ತು. ಧಾರವಾಡ ಜಿಲ್ಲೆಯ ಗಣ್ಯ ಅಬಕಾರಿ ಸುಂಕ ವಸೂಲಾತಿಗೆ ಒಳಪಟ್ಟ ಮುಖ್ಯ ವಸ್ತುಗಳೆಂದರೆ ಹತ್ತಿನೂಲು, ವಿದ್ಯುತ್ ಮೋಟಾರುಗಳು, ಸಿರಾಮಿಕ್ ವಸ್ತುಗಳು ಮತ್ತು ಸಕ್ಕರೆ. ಹೆಚ್ಚಿನ ಸುಂಕ ಪಾವತಿ ಮಾಡುವ ಸಂಸ್ಥೆಗಳೆಂದರೆ (1) ಮೈಕ್ರೊ ಫಿನಿಶ್ ವಾಲ್ವ್ಸ್, (2) ಎಲ್.ವಿ.ಟಿ. ಪ್ರಾಡಕ್ಟ್ಸ್, (3) ಆಕ್ಕೆ ಇಂಡಸ್ಟ್ರೀಸ್, (4) ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಂ, (5) ಎನ್.ಜಿ.ಇ.ಎಫ್. (ಎಲ್ಲವೂ ಹುಬ್ಬಳ್ಳಿಯವು), (6) ಗ್ರಾಸಿಂ ಇಂಡಸ್ಟ್ರೀಸ್, ಕುಮಾರಪಟ್ಣ ಹಾಗೂ (7) ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆ, ಹಾವೇರಿ.

**ಆದಾಯ ತೆರಿಗೆ**

1857-58 ಸಶಸ್ತ್ರ ಸ್ವಾತಂತ್ರ್ಯ ಹೋರಾಟ ವಿಫಲವಾದರೂ ಬ್ರಿಟಿಷ್ ಸರಕಾರವು ಅನೇಕ ಆರ್ಥಿಕ ತೊಂದರೆಗಳನ್ನು ಎದುರಿಸಬೇಕಾಗಿ ಬಂದು ವ್ಯಕ್ತಿಗಳ ಆದಾಯದ ಮೇಲೆ ಕರಹೇರುವ ನಿರ್ಣಯವನ್ನು ಭಾರತ ಸರಕಾರ ಕೈಕೊಂಡಿತು. ಆಗ ಭಾರತೀಯ ಆದಾಯ ಅಥವಾ ವರಮಾನ ತೆರಿಗೆ (ಇನ್‌ಕಂ ಟ್ಯಾಕ್ಸ್) ಕಾನೂನು ಜಾರಿಗೆ ಬಂದು ಹಲವು ಪ್ರಯೋಗಗಳ ನಂತರ 1886 ರಲ್ಲಿ ಈ ಕಾನೂನನ್ನು ಕಾಯಂ ಮಾಡಿದರು. ಪ್ರಥಮ ಮಹಾಯುದ್ಧ ಕಾಲದಲ್ಲಿ ಉಂಟಾದ ಆರ್ಥಿಕ ನಷ್ಟವನ್ನು ತುಂಬಲು ಇನ್ನೂ ವ್ಯಾಪಕವಾದ ಇಂಡಿಯನ್ ಇನ್ಕಂ ಟ್ಯಾಕ್ಸ್ ಆಕ್ಟ್ 1922 ಮಂಜೂರು ಮಾಡಿದರು. ಸ್ವಾತಂತ್ರ್ಯಾನಂತರ ಸರ್ಕಾರದ ಆರ್ಥಿಕ ನೀತಿಗಳ ಅನುಷ್ಠಾನಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಕಂಡು ಬಂದು ಮಹಾವೀರ ತ್ಯಾಗಿಯವರ ಅಧ್ಯಕ್ಷತೆಯಲ್ಲಿ ನೇಮಿಸಿದ ಪ್ರತ್ಯಕ್ಷ ತೆರಿಗೆಗಳ ನಿರ್ವಹಣೆಯ ವಿಚಾರಣಾ ಸಮಿತಿ ಹಾಗೂ ಕಾನೂನು ಆಯೋಗ (ಲಾ ಕಮಿಶನ್) ಇವುಗಳ ವರದಿಗನುಗುಣವಾಗಿ 1961 ರ ಆದಾಯ ತೆರಿಗೆ ಮಸೂದೆ ಮಂಜೂರಾಗಿ 1 ಏಪ್ರಿಲ್ 1962 ರಿಂದ ಅದು ಆಚರಣೆಗೆ ಬಂತು (ಇದು 1922 ರ ಕಾನೂನಿಗೆ ಪ್ರತಿಯಾಗಿ ಬಂದುದು). ಇದರ ಜೊತೆ ಭಕ್ಷೀಸು ತೆರಿಗೆ (ಗಿಫ್ಟ್‌ಟ್ಯಾಕ್ಸ್) ಅಧಿನಿಯಮ ಕೂಡ ಜಾರಿಗೆ ಬಂತು. ಬೆಂಗಳೂರಲ್ಲಿ ಇರುವ ಕಮಿಶನರ್ ಅವರ ಅಧೀನದಲ್ಲಿ ಹುಬ್ಬಳ್ಳಿಯಲ್ಲಿ ವಲಯ ಆಯುಕ್ತರು ಇದ್ದಾರೆ.

ಹುಬ್ಬಳ್ಳಿ ವಲಯದ (ರೇಂಜ್) ಆದಾಯ ತೆರಿಗೆ ಉಪ ಆಯುಕ್ತರು ಹುಬ್ಬಳ್ಳಿಯಿಂದ ಇಡೀ ಧಾರವಾಡ ಜಿಲ್ಲೆಯ ಆದಾಯ ತೆರಿಗೆ, ಸಂಪತ್ತು ತೆರಿಗೆ, ಬಕ್ಷೀಸು (ಗಿಫ್ಟ್) ಟ್ಯಾಕ್ಸ್ ಹಾಗೂ ಎಸ್ಟೇಟ್ ಡ್ಯೂಟಿ (ಆಸ್ತಿಗೆ ವಾರಸುದಾರರಾಗುವವರಿಂದ) ಸಂಗ್ರಹಿಸುತ್ತಿದ್ದು ಕೊನೆಯ ತೆರಿಗೆಯ ವಸೂಲಾತಿ 1985-86 ರಿಂದ ಕೈಬಿಡಲಾಗಿದೆ.

**ಕೋಷ್ಟಕ 9.4 : ಜಿಲ್ಲೆಯಲ್ಲಿ ಕಳೆದ ಕೆಲವು ವರ್ಷಗಳಲ್ಲಿ ವಸೂಲಾದ ವಿವಿಧ ತೆರಿಗೆಗಳ ಮೊತ್ತ ಈ ಕೆಳಗಿನಂತೆ ಇದೆ.**

**ಆದಾಯ ತೆರಿಗೆ**

| ವರ್ಷ | ವ್ಯಾಪಾರೀ ಸಂಸ್ಥೆಗಳು | ವೇತನದಾರರು | ಒಟ್ಟು | ಸಂಗ್ರಹವಾದ ಮೊತ್ತ ಲಕ್ಷ ರೂ. |
|---|---|---|---|---|
| 1989-90 | 11791 | 6375 | 18166 | 1250 |
| 1990-91 | 13104 | 6830 | 19934 | 1434 |

| ವರ್ಷ | ವ್ಯಾಪಾರೀ ಸಂಸ್ಥೆಗಳು | ವೇತನದಾರರು | ಒಟ್ಟು | ಸಂಗ್ರಹವಾದ ಮೊತ್ತ ಲಕ್ಷ ರೂ. |
|---|---|---|---|---|
| 1991-92 | 14921 | 7135 | 22056 | 1757 |
| 1992-93 | 16057 | 7518 | 23575 | 1846 |
| 1993-94 | 21360 | 9646 | 31006 | 1547 |

**ಕೋಷ್ಟಕ 9.4 A : ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಂಗ್ರಹವಾದ ಸಂಪತ್ತು ತೆರಿಗೆ**

| ವರ್ಷ | ಪಾವತಿದಾರರು | ಮೊತ್ತ ಲಕ್ಷ ರೂ. |
|---|---|---|
| 1989-90 | 1538 | 21 |
| 1990-91 | 1626 | 26 |
| 1991-92 | 1847 | 34 |
| 1992-93 | 1868 | 35 |
| 1993-94 | 1490 | 18 |

**ಕೋಷ್ಟಕ 9.5 : ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಂಗ್ರಹವಾದ ಭಕ್ಷೀಸು ತೆರಿಗೆ**

| ವರ್ಷ | ಪಾವತಿದಾರರು | ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|
| 1989-90 | 75 | 1.13 |
| 1990-91 | 98 | 1.48 |
| 1991-92 | 66 | 1.21 |
| 1992-93 | 76 | 0.44 |
| 1993-94 | 38 | 0.60 |

**ಕೋಷ್ಟಕ 9.6 : ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಂಗ್ರಹವಾದ ವಿವಿಧ ತೆರಿಗೆಗಳ ಮೊತ್ತದ ವಿವರ**

| | ಅಧಿನಿಯಮ | ಸಂಗ್ರಹಣೆಯಾದ ತೆರಿಗೆ (ಲಕ್ಷ ರೂ.ಗಳಲ್ಲಿ) | | | | |
|---|---|---|---|---|---|---|
| | | 1989-90 | 90-91 | 91-92 | 92-93 | 93-94 |
| 1. | ಮಾರಾಟ ತೆರಿಗೆ | 5660.04 | 6891.13 | 8837.52 | 9449.14 | 10201.22 |
| 2. | ಕೃಷಿ ವರಮಾನ ತೆರಿಗೆ | - | - | - | - | - |
| 3. | ವೃತ್ತಿ ತೆರಿಗೆ | 152.79 | 371.46 | 444.41 | 506.19 | 704.75 |
| 4. | ಐಷಾರಾಮು | 6.46 | 7.62 | 9.60 | 13.27 | 11.18 |

## ಕೋಷ್ಟಕ 9.7 : ಭೂನ್ಯಾಯ ಮಂಡಳಿಗಳ ಸಾಧನೆಯ ವಿವರ. (1993-94)

| ವಿವರ | ಬ್ಯಾಡಗಿ | ಧಾರವಾಡ | ಗದಗ | ಹಾನಗಲ್ | ಹಾವೇರಿ | ಹಿರೇಕೆರೂರು | ಹುಬ್ಬಳ್ಳಿ | ಕಲಘಟಗಿ | ಕುಂದಗೋಳ | ಮುಂಡರಗಿ | ನರಗುಂದ | ನವಲಗುಂದ | ರಾಣೆಬೆನ್ನೂರು | ರೋಣ | ಸವಣೂರು | ಶಿಗ್ಗಾಂವಿ | ಶಿರಹಟ್ಟಿ |
|---|---|---|---|---|---|---|---|---|---|---|---|---|---|---|---|---|---|
| ದಾಖಲಾದ ಪ್ರಕರಣಗಳು | 2404 | 6352 | 2922 | 9212 | 3234 | 5366 | 3084 | 3499 | 3171 | 1994 | 1964 | 1305 | 3864 | 2633 | 2263 | 4188 | 3032 |
| ತೀರ್ಮಾನವಾದ ಪ್ರಕರಣ | | | | | | | | | | | | | | | | | |
| ಇವರ ಪರ : | | | | | | | | | | | | | | | | | |
| ಗೇಣಿದಾರ | | | | | | | | | | | | | | | | | |
| (1) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ | 46 | 215 | 1683 | 968 | 2203 | 1096 | 316 | 2136 | 119 | 600 | 5 | 114 | 897 | 342 | 107 | 1318 | 230 |
| (2) ಇತರರು | 1394 | 4215 | | 5161 | | | | 1363 | 1582 | 1330 | | | | 132 | 1463 | 1336 | 1249 |
| ಭೂಮಾಲಿಕ | | -- | 1189 | ** | | 298 | | | 191 | | 595 | | -- | | 443 | | 1543 |
| ತಿರಸ್ಕೃತ | 1010 | 1922 | | 3083 | 1631 | 2052 | 1393 | | 1279 | | 595 | | 1517 | | 250 | 1534 | 10 |
| ಉಚ್ಚ ನ್ಯಾಯಾಲಯಕ್ಕೆ ಹೋದ ಪ್ರಕರಣಗಳು ಇವರಿಂದ : | 163 | | 139 | 674 | | 508 | 417 | | | 999 | | 112 | 303 | 116 | 91 | 234 | -- |
| ಮಂಡಳಿಯಿಂದ | | 10 | | 568 | | | | 152 | | | | | 165 | | | 1695 | -- |
| ಗೇಣಿದಾರನಿಂದ | 93 | 28 | 125 | 30 | 198 | 126 | 312 | 107 | 430 | 668 | 98 | 96 | -- | 104 | 91 | 1156 | 248 |
| ಭೂಮಾಲಿಕನಿಂದ | 70 | 112 | 14 | 2 | 396 | 162 | 105 | 45 | 75 | 331 | 27 | 16 | 1517 | 12 | | 579 | 27 |
| ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು | 11 | 152 | 39 | 674 | 53 | 110 | 197 | | | 33 | | | 17 | | | | |
| ಗೇಣಿದಾರನಿಂದ ಸಂದ ಒಟ್ಟು ಭೂ (ಎಕ್ರೆ) | 7765 | 45695 | 16691 | 35267 | 18123 | 29930 | 1658 | 14888 | 21614 | 24771 | 18493 | 123680 | 19729 | 11250 | 18029 | 17993 | 11680 |
| ಕೊಡ ಮಾಡಿದ ಭೂಮಿ | | | | | | | | | | | | | | | | | |
| (1) ಪರಿಶಿಷ್ಟ ಜಾತಿ | 48 | 670 | 510 | 4892 | 400 | 8924 | 289 | 255 | 3890 | 471 | 36 | 298 | 1817 | 781 | 280 | 5864 | 1878 |
| (2) ಪರಿಶಿಷ್ಟ ವರ್ಗ | | | | ** | | | | | | | | | | | | 3071 | |
| ವಿತರಣೆಗೆ ಉಳಿದ ಹೆಚ್ಚುವರಿ ಭೂಮಿ | | 2036 | 823 | 54 | 92 | 2 | | 102 | 2714 | 219 | 1524 | 298 | 159 | 707 | 74 | 2139 | 529 |

ಮುಂದುವರೆದಿದೆ

| ವಿವರ | ಬ್ಯಾಡಗಿ | ಧಾರವಾಡ | ಗದಗ | ಹಾನಗಲ್ | ಹಾವೇರಿ | ಹಿರೇಕೆರೂರು | ಹುಬ್ಬಳ್ಳಿ | ಕಲಘಟಗಿ | ಕುಂದಗೋಳ | ಮುಂಡರಗಿ | ನರಗುಂದ | ನವಲಗುಂದ | ರಾಣೆಬೆನ್ನೂರು | ರೋಣ | ಸವಣೂರು | ಶಿಗ್ಗಾಂವಿ | ಶಿರಹಟ್ಟಿ |
|---|---|---|---|---|---|---|---|---|---|---|---|---|---|---|---|---|---|
| ಭೂಮಿ ಪಡೆದವರು: | | | | | | | | | | | | | | | | | |
| (1) ಪರಿಶಿಷ್ಟ ಜಾತಿ | – | 194 | 113 | 15 | 78 | | | 27 | 44 | 71 | 192 | 114 | 28 | 150 | 18 | 185 | 53 |
| (2) ಪರಿಶಿಷ್ಟ ವರ್ಗ | – | 15 | | -- | -- | | | | | | | | | | 176 | -- | |
| (3) ಇತರರು | 118 | 145 | | -- | -- | | | | | | | | 6 | | | 53 | 69 |

## ಕೋಷ್ಟಕ 9.8 : ಜಿಲ್ಲೆಯಲ್ಲಿ ಸಂಗ್ರಹವಾದ ಅಬಕಾರಿ ವರಮಾನದ ವಿವರ.

(ಲಕ್ಷ ರೂ.ಗಳಲ್ಲಿ)

| ಕ್ರಸಂ. | ವಿವರಗಳು | 1989-90 | 1990-91 | 1991-92 | 1992-93 | 1993-94 |
|---|---|---|---|---|---|---|
| 1. | ಸಾರಾಯಿ ಮೇಲೆ ಸುಂಕ | 113.44 | 166.29 | 178.08 | 220.59 | 241.15 |
| 2. | ಸಾರಾಯಿ ಬೆಲೆ | - | - | - | - | - |
| 3. | ಸಾರಾಯಿ ಅಂಗಡಿ ಬಾಡಿಗೆ | 611.07 | 1,105.43 | 1,618.12 | 1,689.68 | 1,750.98 |
| 4. | ಸೇಂದಿ ಅಂಗಡಿ ಬಾಡಿಗೆ | 156.18 | 54.98 | - | - | - |
| 5. | ಮರದ ತೆರಿಗೆ | - | - | - | - | - |
| 6. | ಬೀರ್ ಮೇಲೆ ಸುಂಕ | 23.91 | 12.29 | 129.32 | 18.65 | 6.99 |
| 7. | ಬೀರ್ ಲೈಸನ್ಸ್ ಶುಲ್ಕ | 0.04 | 0.04 | - | - | - |
| 8. | ವಿದೇಶಿ ಮದ್ಯಗಳ ಲೈಸನ್ಸ್ ಶುಲ್ಕ | 95.26 | 106.85 | 127.27 | 151.76 | 144.49 |
| 9. | ದೇಶದಲ್ಲಿ ಉತ್ಪಾದಿಸಿದ ವಿದೇಶೀಯ ಮದ್ಯಗಳ ಸುಂಕ | 119.84 | 135.83 | 117.75 | 181.78 | 230.41 |
| 10. | ರೆಕ್ಟಿಫೈಡ್ ಸ್ಪಿರಿಟ್ | 0.83 | 2.54 | 1.11 | 1.53 | 0.60 |
| 11. | ಔಷಧೀಯ ಮದ್ಯಗಳ ಲೈಸನ್ಸ್ ಶುಲ್ಕ | - | - | - | - | - |
| 12. | ಡಿನೇಚರ್ಡ್ ಸ್ಪಿರಿಟ್ | 0.99 | 0.41 | 0.33 | 0.28 | 0.46 |
| 13. | ಸೇವೆ ಮತ್ತು ಸೇವಾ ಶುಲ್ಕ | 3.78 | 4.33 | 5.21 | 6.69 | 6.27 |
| 14. | ದಂಡ ಮತ್ತು ಜಪ್ತಿಗಳಿಂದ | 3.37 | 2.59 | 2.91 | 5.30 | 60.63 |
| 15. | ಅಧಿಕ ಪಾವತಿಯ ಪುನರ್ವಸೂಲಿ | 0.02 | 0.01 | ಅಲ್ಪ | 0.06 | - |
| 16. | ತೆರಿಗೆ ಬಾಕಿ ಮೇಲೆ ಬಡ್ಡಿ | 22.36 | 25.09 | 24.93 | 25.42 | 19.23 |
| 17. | ಇತರ ಆದಾಯ | 3.27 | 11.27 | 15.97 | 14.87 | 12.97 |
| | ಜುಮ್ಲಾ | 1,154.38 | 1,627.94 | 2,221.00 | 2,316.61 | 2,474.18 |

ಮೂಲ : ಅಬಕಾರಿ ಉಪಆಯುಕ್ತರು, ಧಾರವಾಡ ಜಿಲ್ಲೆ

**ಕೋಷ್ಟಕ 9.9 ಧಾರವಾಡ ಜಿಲ್ಲೆಯು ಸನ್ 1989-90 ರಿಂದ 1993-94 ರ ವರೆಗೆ ಅಬಕಾರಿ ಅಂಗಡಿಗಳ ಮಾಹಿತಿ.**

| ಕ್ರಮ ಸಂಖ್ಯೆ | ತಾಲೂಕು | 1989-90 | | 1990-91 | 1991-92 | 1992-93 | 1993-94 |
|---|---|---|---|---|---|---|---|
| | | ಶೇಂದಿ ಅಂಗಡಿ | ಸಾರಾಯಿ ಅಂಗಡಿ | ಸಾರಾಯಿ ಅಂಗಡಿ | ಸಾರಾಯಿ ಅಂಗಡಿಗಳು | ಸಾರಾಯಿ ಅಂಗಡಿಗಳು | ಸಾರಾಯಿ ಅಂಗಡಿಗಳು |
| 1) | ಧಾರವಾಡ | 34 | 69 | 68 | 68 | 68 | 106 |
| 2) | ಕಲಘಟಗಿ | - | 20 | 20 | 20 | 20 | 40 |
| 3) | ನವಲಗುಂದ | 12 | 39 | 39 | 39 | 39 | 53 |
| 4) | ನರಗುಂದ | 10 | 17 | 17 | 17 | 17 | 29 |
| 5) | ಗದಗ | 34 | 55 | 55 | 55 | 55 | 80 |
| 6) | ರೋಣ | 18 | 42 | 42 | 42 | 42 | 73 |
| 7) | ಶಿರಹಟ್ಟಿ | 20 | 28 | 28 | 28 | 28 | 30 |
| 8) | ಮುಂಡರಗಿ | 25 | 26 | 26 | 26 | 26 | 35 |
| 9) | ಕುಂದಗೋಳ | 15 | 30 | 30 | 30 | 30 | 33 |
| 10) | ಹುಬ್ಬಳ್ಳಿ | 34 | 75 | 75 | 75 | 75 | 131 |
| 11) | ಹಾವೇರಿ | 39 | 35 | 35 | 35 | 35 | 73 |
| 12) | ಸವಣೂರು | 26 | 28 | 28 | 28 | 28 | 41 |
| 13) | ಶಿಗ್ಗಾಂವಿ | 28 | 36 | 36 | 36 | 36 | 51 |
| 14) | ರಾಣೆಬೆನ್ನೂರ | 30 | 55 | 70 | 70 | 70 | 92 |
| 15) | ಹಾನಗಲ್ | 32 | 36 | 36 | 36 | 36 | 68 |
| 16) | ಹಿರೇಕೆರೂರ | 20 | 42 | 68 | 68 | 68 | 64 |
| 17) | ಬ್ಯಾಡಗಿ | 20 | 40 | 40 | 40 | 40 | 38 |

**ಕೋಷ್ಟಕ 9.10 : ನೋಂದಣಿ ಮತ್ತು ಛಾಪಾಕಾಗದಗಳಿಂದ ಬಂದ ಆದಾಯದ ವಿವರ - ಧಾರವಾಡ ಜಿಲ್ಲೆ**

(ಲಕ್ಷ ರೂಗಳಲ್ಲಿ)

| ಕ್ರಸಂ. | ಉಪನೋಂದಣಿ ಅಧಿಕಾರಿ ಕಚೇರಿ | 1980-81 | | | | 1985-86 | | | |
|---|---|---|---|---|---|---|---|---|---|
| | | ನೋಂದಣಿಯಾದ ದಸ್ತಾವೇಜುಗಳ | ದಸ್ತಾವೇಜುಗಳ ಒಟ್ಟು ಮೌಲ್ಯ ಸಂಖ್ಯೆ | ನೋಂದಣಿಯಿಂದ ಬಂದ ಆದಾಯ | ಒಟ್ಟು ವೆಚ್ಚ | ನೋಂದಣಿ ಯಾದ ದಸ್ತಾವೇಜುಗಳ ಸಂಖ್ಯೆ | ದಸ್ತಾವೇಜುಗಳ ಒಟ್ಟು ಮೌಲ್ಯ | ನೋಂದಣಿಯಿಂದ ಬಂದ ಆದಾಯ | ಒಟ್ಟು ವೆಚ್ಚ |
| 1. | ಬ್ಯಾಡಗಿ | 388 | 19.70 | 0.18 | 0.26 | 612 | 48.22 | 0.55 | 0.58 |
| 2. | ಧಾರವಾಡ | 2298 | 247.01 | 2.39 | 0.55 | 2530 | 119.80 | 5.48 | 1.00 |
| 3. | ಗದಗ | 2366 | 118.15 | 1.45 | 1.37 | 2479 | 49.21 | 4.57 | 0.94 |
| 4. | ಹಾನಗಲ್ | 1291 | 48.96 | 0.46 | 0.32 | 964 | 55.97 | 0.70 | 0.59 |
| 5. | ಹಾವೇರಿ | 1317 | 67.29 | 0.76 | 0.35 | 1660 | 183.95 | 1.81 | 0.57 |
| 6. | ಹಿರೇಕೆರೂರು | 1276 | 54.43 | 0.56 | 0.31 | 1155 | 68.06 | 5.32 | 0.56 |
| 7. | ಹುಬ್ಬಳ್ಳಿ | 3038 | 366.25 | 3.59 | 0.54 | 4534 | 151.35 | 10.68 | 1.36 |
| 8. | ಕಲಘಟಗಿ | 498 | 11.58 | 0.18 | 0.39 | 658 | 119.37 | 0.57 | 0.54 |
| 9. | ಕುಂದಗೋಳ | 894 | 50.93 | 0.56 | 0.29 | 683 | 79.95 | 0.96 | 0.56 |
| 10. | ಮುಂಡರಗಿ | 551 | 21.67 | 0.23 | 0.19 | 592 | 37.04 | 0.36 | 0.18 |
| 11. | ನರಗುಂದ | 409 | 26.81 | 0.27 | 0.29 | 638 | 94.05 | 0.95 | 0.42 |
| 12. | ನವಲಗುಂದ | 944 | 69.69 | 0.83 | 0.34 | 783 | 161.87 | 1.55 | 0.63 |
| 13. | ರಾಣೆಬೆನ್ನೂರು | 1526 | 101.80 | 6.88 | 0.50 | 1741 | 188.72 | 14.49 | 0.61 |
| 14. | ರೋಣ | 1142 | 67.32 | 6.96 | 0.38 | 1123 | 11.74 | 1.26 | 0.72 |
| 15. | ಸವಣೂರು | 728 | 3.25 | 0.48 | 0.30 | 663 | 59.15 | 0.67 | 0.45 |
| 16. | ಶಿಗ್ಗಾಂವಿ | 613 | 33.14 | 0.32 | 0.33 | 784 | 61.33 | 0.50 | 0.51 |
| 17. | ಶಿರಹಟ್ಟಿ | 860 | 33.80 | 3.31 | 0.38 | 706 | 62.53 | 0.41 | 0.39 |
| | ಜಿಲ್ಲಾ ಮೊತ್ತ | 19,279 | 1341.78 | 29.41 | 7.09 | 22,125 | 1552.31 | 50.83 | 10.63 |

**ಕೋಷ್ಟಕ 9.11 : ಜಿಲ್ಲೆಯಲ್ಲಿ 1990-91 ರಲ್ಲಿ ಹಾಗೂ 1991-92 ರಲ್ಲಿ ನೋಂದಣಿ ಕಚೇರಿಗಳ ತಾಲೂಕುವಾರು ಚಟುವಟಿಕೆಗಳ ಅಂಕೆ ಅಂಶಗಳು.**

| ಕ್ರ.ಸಂ. ಉಪನೋಂದಣಿ ಅಧಿಕಾರಿ ಕಚೇರಿ | 1990-91 | | | | 1992-93 | | | |
|---|---|---|---|---|---|---|---|---|
| | ನೋಂದಣಿಯಾದ ದಸ್ತಾವೇಜುಗಳ ಸಂಖ್ಯೆ | ದಸ್ತಾವೇಜುಗಳ ಒಟ್ಟು ಮೌಲ್ಯ | ನೋಂದಣಿಯಿಂದ ಬಂದ ಆದಾಯ | ಒಟ್ಟು ವೆಚ್ಚ | ನೋಂದಣಿ ಯಾದ ದಸ್ತಾವೇಜು ಗಳ ಸಂಖ್ಯೆ | ದಸ್ತಾವೇಜು ಗಳ ಒಟ್ಟು ಮೌಲ್ಯ | ನೋಂದಣಿ ಯಿಂದ ಬಂದ ಆದಾಯ | ಒಟ್ಟು |
| 1. ಬ್ಯಾಡಗಿ | 457 | 49.54 | 0.99 | 1.02 | 638 | 130.72 | 2.71 | 0.90 |
| 2. ಧಾರವಾಡ | 322 | 5727.83 | 14.85 | 1.91 | 3154 | 1913.84 | 21.00 | 1.95 |
| 3. ಗದಗ | 2366 | 598.81 | 11.89 | 1.89 | 2944 | 1123.59 | 20.04 | 2.13 |
| 4. ಹಾನಗಲ್ | 975 | 84.79 | 1.72 | 1.14 | 914 | 166.72 | 2.97 | 1.60 |
| 5. ಹಾವೇರಿ | 1394 | 282.27 | 5.43 | 1.21 | 1447 | 686.85 | 9.89 | 1.72 |
| 6. ಹಿರೇಕೆರೂರು | 814 | 144.10 | 13.11 | 1.1 | 841 | 172.10 | 22.03 | 1.46 |
| 7. ಹುಬ್ಬಳ್ಳಿ | 6016 | 2060.18 | 368.74 | 2.55 | 6757 | 3470.80 | 62.38 | 2.67 |
| 8. ಕಲಘಟಗಿ | 442 | 226.09 | 0.13 | 0.52 | 635 | 135.34 | 2.24 | 0.79 |
| 9. ಕುಂದಗೋಳ | 538 | 78.22 | 1.67 | 1.75 | 791 | 200.56 | 3.94 | 1.04 |
| 10. ಮುಂಡರಗಿ | 428 | 523.38 | 1.02 | 0.67 | 526 | 98.89 | 1.96 | 1.24 |
| 11. ನರಗುಂದ | 550 | 123.10 | 2.33 | 0.80 | 686 | 209.43 | 4.37 | 0.89 |
| 12. ನವಲಗುಂದ | 718 | 152.06 | 4.02 | 1.01 | 1320 | 432.59 | 9.35 | 0.47 |
| 13. ರಾಣೆಬೆನ್ನೂರು | 1875 | 261.27 | 3.44 | 1.44 | 2517 | 506.64 | 79.42 | 0.30 |
| 14. ರೋಣ | 1138 | 153.83 | 3.36 | 1.20 | 1.232 | 315.36 | 5.29 | 1.58 |
| 15. ಸವಣೂರು | 433 | 83.89 | 1.53 | 0.97 | 572 | 150.54 | 3.04 | 0.85 |
| 16. ಶಿಗ್ಗಾಂವಿ | 582 | 72.24 | 1.44 | 0.91 | 601 | 145.25 | 3.05 | 1.12 |
| 17. ಶಿರಹಟ್ಟಿ | 884 | 126.60 | 16.30 | 1.33 | 917 | 203.84 | 29.52 | 0.14 |
| ಜಿಲ್ಲಾ ಮೊತ್ತ | 19,279 | 1,341.78 | 29.41 | 7.09 | 22,125 | 1,552.31 | 50.83 | 10.60 |

**ಕೋಷ್ಟಕ 9.12 : ಪ್ರವೇಶ ತೆರಿಗೆ ಮತ್ತು ಮನರಂಜನ ತೆರಿಗೆ ಸಂಗ್ರಹಣೆ ವಿವರ. 1988-89 ರಿಂದ 1992-93 ರವರೆಗೆ, ಧಾರವಾಡ ಜಿಲ್ಲೆ**

(ಲಕ್ಷ ರೂ.ಗಳಲ್ಲಿ)

| | ಅಧಿನಿಯಮದ ಹೆಸರು | ವರ್ಷಗಳು 1988-89 | 1989-90 | 1990-91 | 1991-92 | 1992-93 |
|---|---|---|---|---|---|---|
| | | ರೂ. | ರೂ. | ರೂ. | ರೂ. | ರೂ. |
| 1. | ಕೆ.ಟಿ.ಇ.ಜಿ. (ಪ್ರವೇಶ ತೆರಿಗೆ) | 234.77 | 284.52 | 317.77 | 369.28 | 474.04 |
| 2. | ಕೆ.ಇ.ಟಿ. (ಮನರಂಜನಾ ತೆರಿಗೆ) | 337.13 | 350.14 | 362.92 | 423.51 | 434.63 |

**ಕೋಷ್ಟಕ 9.13 : ಕೆ.ಎಸ್.ಟಿ.ಸಿ.ಎಸ್.ಟಿ. ಅಧಿನಿಯಮ ಮೇರೆಗೆ ಜಿಲ್ಲೆಯಲ್ಲಿರುವ ಮಾರಾಟಗಾರರು (1988-89 ರಿಂದ 1992-93).**

| ಕ್ರಮ ಸಂಖ್ಯೆ | ವರ್ಷ | ನೋಂದಾಯಿಸಿರುವ ಮಾರಾಟಗಾರರ ಸಂಖ್ಯೆ: ರಾಜ್ಯ ಮಾರಾಟ ತೆರಿಗೆಕರದ ಅನ್ವಯ | ಕೇಂದ್ರ ಮಾರಾಟ ತೆರಿಗೆ ಕರದ ಅನ್ವಯ |
|---|---|---|---|
| 1 | 1988-89 | 12928 | 6145 |
| 2 | 1989-90 | 15106 | 7396 |
| 3 | 1990-91 | 16711 | 4726 |
| 4 | 1991-92 | 15375 | 7956 |
| 5 | 1992-93 | 15858 | 7907 |